ಜನವರಿ 2021 ₹ 15/-

# ಯುಗರಶ್ಮಿ

ತ್ರೈಮಾಸಿಕ




- ಇಸ್ಲಾಂ ಶಾಂತಿಯುತ ಧರ್ಮವಾಗಿದ್ದರೆ ಮುಹಮ್ಮದ್ ಪೈಗಂಬರ್[ಸ] ಯುದ್ಧಗಳಲ್ಲಿ ಹೋರಾಡಿದ್ದು ಏಕೆ?
- ಮೋಕ್ಷವನ್ನು ಯಾವುದೇ ಧರ್ಮ ತನ್ನ ಏಕಸ್ವಾಮಿತ್ವಕ್ಕೆ ಒಳಪಡಿಸಲು ಸಾಧ್ಯವಾಗದು
- ಇಸ್ಲಾಮಿನ ಸತ್ಯಸಾಕ್ಷ್ಯ
- ಈಸಾ ಮಸೀಹರ[ಅ] ಮೃತ್ಯು ಬಗ್ಗೆ ಪ್ರಬಲ ಸಾಕ್ಷ್ಯಾಧಾರಗಳು
- ನೀನು ಮಾಡು – ಮಾಡಬೇಡ

"ಎಲೈ ವಿಶ್ವಾಸಿಗಳೇ, ನೀವು ಪರಿಪೂರ್ಣವಾದ ನ್ಯಾಯ ನಿಷ್ಠೆಯುಳ್ಳವರೂ ಅಲ್ಲಾಹನಿಗೋಸ್ಕರ ಸಾಕ್ಷ್ಯವಹಿಸುವವರೂ ಆಗಿರಿ; ಅದು ನಿಮಗೆ ಅಥವಾ (ನಿಮ್ಮ) ಮಾತಾಪಿತರಿಗೆ ಅಥವಾ ನಿಕಟ ಬಂಧುಗಳಿಗೆ ವಿರುದ್ಧವಾಗಿದ್ದರೂ ಸರಿ. ಅವನು ಧನಿಕನಾಗಿರಲಿ ಯಾ ದರಿದ್ರನಾಗಿರಲಿ, ಅಲ್ಲಾಹನು ನಿಮಗಿಂತ ಹೆಚ್ಚಾಗಿ ಅವರೀರ್ವರ ಒಳಿತನ್ನು ಬಯಸುತ್ತಾನೆ. ಆದುದರಿಂದ ನೀವು ಯಾವುದೇ ನಿಕೃಷ್ಟ ಆಶೆಯನ್ನು ಹೊಂದದೆ ನ್ಯಾಯದಿಂದ ವರ್ತಿಸಿರಿ. ನೀವು (ಸತ್ಯವನ್ನು) ಮರೆಮಾಚಿದರೆ ಅಥವಾ (ಅದನ್ನು ಬಹಿರಂಗಪಡಿಸದೆ) ನುಣುಚಿಕೊಂಡರೆ (ತಿಳಿದು ಕೊಳ್ಳಿರಿ) ನಿಮ್ಮ ವರ್ತನೆಯ ಕುರಿತು ಅಲ್ಲಾಹನು ಚೆನ್ನಾಗಿ ತಿಳಿದವನಾಗಿದ್ದಾನೆ."

– ಪವಿತ್ರ ಖುರ್‌ಆನ್ (4:136)

## ಯುಗರಶ್ಮಿ

## ವಿಷಯ ಸೂಚಿಕೆ


| ವಿಷಯ | ಪುಟ |
|---|---|
| ❀ ದೇವನ ಪ್ರೀತಿ | 1 |
| ❀ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು | 2 |
| ❀ ಇಸ್ಲಾಂ ಶಾಂತಿಯುತ ಧರ್ಮವಾಗಿದ್ದರೆ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಯುದ್ಧಗಳಲ್ಲಿ ಹೋರಾಡಿದುದು ಏಕೆ? | 3 |
| ❀ ಮೋಕ್ಷವನ್ನು ಯಾವುದೇ ಧರ್ಮ ತನ್ನ ಏಕಸ್ವಾಮಿತ್ವಕ್ಕೆ ಒಳಪಡಿಸಲು ಸಾಧ್ಯವಾಗದು | 7 |
| ❀ ಇಸ್ಲಾಮಿನ ಸತ್ಯಸಾಕ್ಷ್ಯ | 12 |
| ❀ ಹಝ್ರತ್ ಈಸಾ ಮಸೀಹರ(ಅ) ಮೃತ್ಯು ಬಗ್ಗೆ ಪ್ರಬಲ ಸಾಕ್ಷ್ಯಾಧಾರಗಳು | 17 |
| ❀ ನೀನು ಮಾಡು – ಮಾಡಬೇಡ | 22 |
| ❀ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನೇತಾರ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಭಾರತದ ಪ್ರಧಾನ ಮಂತ್ರಿ ಸನ್ಮಾನ್ಯ ಶ್ರೀ ನರೇಂದ್ರ ಮೋದಿ ಅವರಿಗೆ ಬರೆದ ಪತ್ರ | 26 |
| ❀ ಪರಿಶುದ್ಧ ಖುರ್‌ಆನ್ ಅಲ್ಲಾಹನ ವಚನವೆಂಬುದಕ್ಕೆ ವೈಜ್ಞಾನಿಕ ಸಾಕ್ಷ್ಯ | 29 |
| ❀ ಇಸ್ರೇಲಿನ ಏಜೆಂಟ್ | 30 |
| ❀ ಓದಿದ್ದು | 31 |
| ❉ ಕ್ರಾಂತಿಕಾರಿ ಸುಧಾರಣೆಗಳನ್ನು ತಂದ ಟಿಪ್ಪು ಸುಲ್ತಾನ್ ❉ ಆರೆಸ್ಸೆಸ್ ಸ್ಥಾಪಕ ಗೋಲ್‌ವಲ್ಕರ್ ಹೇಳಿದ್ದು | |
| ❉ ರಾವಣನದ್ದೇ ಮೊದಲ ವಿಮಾನ ❉ ಸೂರ್ಯನ ಗಾತ್ರದ ನಕ್ಷತ್ರ ನುಂಗಿದ ಕಪ್ಪುರಂಧ್ರ ! | |
| ❉ ಈ ಪಟ್ಟಣಕ್ಕೆ 2 ತಿಂಗಳು ಸೂರ್ಯ ದರ್ಶನವಿಲ್ಲ ! ❉ 'ಕೆ2–141ಬಿ' ಹೆಸರಿನ ಬ್ರಹ್ಮಾಂಡ 'ನರಕ' ಗ್ರಹ ಪತ್ತೆ | |
| ❉ ಅನ್ಯ ಗ್ರಹದ ರೇಡಿಯೋ ಸಿಗ್ನಲ್ ಪತ್ತೆ ❉ ಪೀಸ್ ಟಿವಿ ನಿಷೇಧಕ್ಕೆ ಇಂಗಿತ | |
| ❉ ಮಕ್ಕಳನ್ನು ಪಡೆದು ಬೋನಸ್ ಪಡೆಯಿರಿ ❉ ಭಾರತದ ಮುಸ್ಲಿಮರು ಜ್ಞಾನವಂತರು: ಭಾಗವತ್ | |
| ❉ ದೇವರ ಮೂರ್ತಿಗಾಗಿ ಬಡಿದಾಡಿದ ಭಕ್ತರು ❉ ದೇಗುಲ ನಿರ್ಮಿಸಲು ನಿಷೇಧವಿಲ್ಲ: ಪಾಕ್ ಸಮಿತಿ | |
| ❉ ಪಾಕ್: ಕೃಷ್ಣ ದೇಗುಲಕ್ಕೆ ಅನುಮತಿ | |
| ❉ ಗೋಹತ್ಯೆ ವಿಷಯದಲ್ಲಿ ಬಿಜೆಪಿ ದ್ವಂದ್ವ ನಿಲುವು: ಸಿದ್ಧರಾಮಯ್ಯ ❉ ಸಂಸ್ಕೃತದಲ್ಲಿ ಡಾಕ್ಟರೇಟ್ ಪಡೆದ ಮುಸ್ಲಿಂ ವಿದ್ಯಾರ್ಥಿನಿ | |
| ❉ ಮದ್ರಸ ವಿದ್ಯಾರ್ಥಿಗೆ ಕಿರುಕುಳ: ಉಸ್ತಾದ್‌ಗೆ ಜೀವಾವಧಿ ಸಜೆ, ದಂಡ ❉ ಹಿಂದೂ–ಮುಸ್ಲಿಂ ದಂಪತಿ ಒಗ್ಗೂಡಿಸಿದ ಹೈಕೋರ್ಟ್ | |
| ❉ ಅಭಯಾ ಕೊಲೆ ಕೇಸ್: ಅಪರಾಧಿಗಳಿಬ್ಬರಿಗೂ ಜೀವಾವಧಿ ಶಿಕ್ಷೆ ❉ ಸ್ವಇಚ್ಛೆಯ ಮದುವೆ–ಮತಾಂತರದಲ್ಲಿ ಯಾರ ಹಸ್ತಕ್ಷೇಪವೂ ಸಲ್ಲ: ಹೈ ತೀರ್ಪು ❉ ಪಾಸ್ಟರ್ ವಿರುದ್ಧ ಮಾಜಿ ಪತ್ನಿ ಆಕ್ರೋಶ ❉ ಉಗ್ರ ಸಯೀದ್‌ಗೆ 36 ವರ್ಷ ಜೈಲು | |
| ❉ 20 ಸೆಕೆಂಡ್ ಉರಿಯಿತು ಕೃತಕ ಸೂರ್ಯ ❉ ಓ ಹಣವೇ ನಿನಗೆಷ್ಟು ಹೆಸರು? | |
| ❉ ಜ್ಞಾನಿಗಳ ದೃಷ್ಟಿಯಲ್ಲಿ ಪ್ರವಾದಿ ಮುಹಮ್ಮದ್‌ರವರ ಸ್ಥಾನ | |
| ❀ ಪ್ರತಿಭೆ | |
| ❀ ಆರೋಗ್ಯ : ❉ ಅರಸಿನ ಕಾಳುಮೆಣಸಿನ ಸಮ್ಮಿಶ್ರಣ ಹಲವು ರೋಗಗಳಿಗೆ ರಾಮಬಾಣ | 43 |
| ❀ ಸಂಪಾದಕರಿಗೆ ಪತ್ರ | 43 |
| ❀ ಅಹ್ಮದಿಯರಿಗೆ ಸುತ್ತೋಲೆ | 44 |
| ❀ ಕವನ : ಶಾಶ್ವತವಲ್ಲ ನಿನಗೆ ಈ ಲೋಕ | 45 |
| ❀ ಹಝ್ರತ್ ಖಲೀಫರ ಹೊಸ ವರ್ಷದ ಸಂದೇಶ | 46 |
| ❀ ನಿಧನ ವಾರ್ತೆ | 48 |


ಮುಖಪುಟ ಚಿತ್ರ : ಅಹ್ಮದಿಯಾ ಶಾಂತಿಧಾಮ, ಟೊರೋಂಟೊ, ಕೆನಡ.


ಬಿಡಿ ಪ್ರತಿ : ರೂ. 15/–    ವಾರ್ಷಿಕ ಚಂದಾ : ರೂ. 60/–    ಅಂಚೆ ಮೂಲಕ : ರೂ. 70/–



ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575 001.

ಸಂಪರ್ಕಿಸಿರಿ : 9900410789

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

*ಸಂಪಾದಕ : ಮುಹಮ್ಮದ್ ಯೂಸುಫ್*

ಜನವರಿ 2021

| ಆರಂಭ : 1975 | ಸಂಪುಟ : 37 | ಸುಲ್ಹ್ : 1400 ಹಿಜರೀ ಶಮ್ಸೀ | ಸಂಚಿಕೆ : 2 |
|---|---|---|---|

## ದೇವನ ಪ್ರೀತಿ

ಸುಕೃತರಾದ ದಾಸರ ಹೊರತು ಅಲ್ಲಾಹನು ಯಾರನ್ನೂ ಗಣ್ಯಮಾಡುವುದಿಲ್ಲ. ನೀವು ಪರಸ್ಪರ ಸೌಹಾರ್ದ ಮತ್ತು ಸ್ನೇಹವನ್ನು ಬೆಳೆಸಿರಿ. ಎಲ್ಲ ವಿಧ ಲೇವಡಿಗಳಿಂದಲೂ ಪರಿಹಾಸ್ಯೋಕ್ತಿಗಳಿಂದಲೂ ನೀವು ಪೂರ್ಣವಾಗಿ ಅಗಲಿ ನಿಲ್ಲಿರಿ. ಪರಿಹಾಸ ಮನುಷ್ಯನ ಹೃದಯವನ್ನು ಸತ್ಯದಿಂದ ದೂರಮಾಡಿ ಎಲ್ಲಿಗೋ ಕೊಂಡೊಯ್ಯುವುದು. ನೀವು ಪರಸ್ಪರ ಆದರದಿಂದ ವರ್ತಿಸಿರಿ. ಪ್ರತಿಯೊಬ್ಬನು ತನ್ನ ಸುಖಾರಾಮಕ್ಕಿಂತ ತನ್ನ ಸಹೋದರನ ಸುಖಾರಾಮಕ್ಕೆ ಆದ್ಯತೆ ಕೊಡಲಿ. ಅಲ್ಲಾಹನೊಂದಿಗೆ ಸತ್ಯಸಂಧವಾದ ಸಂಧಿ ಮಾಡಲಿ. ಅವನ ಅನುಸರಣೆಗೆ ಮರಳಿರಿ. ಅಲ್ಲಾಹನ ಕ್ರೋಧ ಭೂಮಿಯಲ್ಲಿ ಇಳಿಯುತ್ತಿದೆ. ಪೂರ್ಣವಾಗಿ ತನ್ನ ತಪ್ಪುಗಳಿಂದ ಪಶ್ಚಾತ್ತಪಿಸಿ ಅವನ ಸನ್ನಿಧಿಯಲ್ಲಿ ಹಾಜರಾಗುವವನು ಮಾತ್ರ ಅದರಿಂದ ರಕ್ಷಿಸಲ್ಪಡುವನು. (ಮಲ್‌ಫೂಝಾತ್)

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕರು

## ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

♦ ಆದಮನ ಮಗನೇ, ನೀನು ದಾನಮಾಡು; ನಿನಗೂ ದಾನ ಲಭಿಸುವುದು. (ಬುಖಾರಿ, ಮುಸ್ಲಿಂ)

♦ ನೀವು ಅಕ್ರಮವನ್ನು ಬಿಟ್ಟುಬಿಡಬೇಕು. ನಿಶ್ಚಯವಾಗಿಯೂ ಅಕ್ರಮ ಅಂತ್ಯ ದಿನದಂದು ಇರುಳು ಆಗಿರುವುದು. (ಮುಸ್ಲಿಂ)

♦ ಇಬ್ಬರ ಊಟ ಮೂವರಿಗೂ ಮೂವರ ಊಟ ನಾಲ್ವರಿಗೂ ಸಾಕಾಗುವುದು. (ಬುಖಾರಿ, ಮುಸ್ಲಿಂ)

♦ ನಿಸ್ಸಂಶಯವಾಗಿಯೂ (ಅನುಷ್ಠಿಸಲು ಅತ್ಯಂತ) ಸೌಕರ್ಯವುಳ್ಳ ಧರ್ಮವಾಗಿದೆ ಇಸ್ಲಾಂ. ಈ ಧರ್ಮದಲ್ಲಿ ತೀವ್ರತೆ ಕೈಗೊಳ್ಳುವ ಯಾರನ್ನೂ ಅದು ಪರಾಜಯಗೊಳಿಸದಿರುವುದಿಲ್ಲ. ಆದುದರಿಂದ ನೀವು (ತೀವ್ರತೆಯನ್ನು ಬಿಟ್ಟು) ಮಿತವಾಗಿ ವರ್ತಿಸಿರಿ. (ಪೂರ್ಣವಾಗಿ ಅನುಷ್ಠಿಸಲು ಸಾಧ್ಯವಾಗದಿದ್ದರೆ ಪೂರ್ಣತೆಯೊಡನೆ) ಸಮೀಪಿಸಲು ಶ್ರಮಿಸಿ, ಸಂತೋಷಪಟ್ಟು (ಪೂರ್ಣವಾಗಿ ಅನುಷ್ಠಿಸಲು) ಶಕ್ತಿ ಪ್ರದಾನಮಾಡಲು ಬೆಳಿಗ್ಗೆ, ಸಂಜೆ ಮತ್ತು ರಾತ್ರಿ (ಅಲ್ಲಾಹನೊಡನೆ) ಸಹಾಯ ಯಾಚಿಸಿರಿ. (ಬುಖಾರಿ)

♦ ಅಲ್ಲಾಹನಾಣೆ, ನಾನು ನಿಮ್ಮ ಪೈಕಿ ಅತಿಹೆಚ್ಚು ಭಕ್ತಿಯುಳ್ಳವನಾಗಿದ್ದೇನೆ. ಆದರೆ ನಾನು ವ್ರತ ಅನುಷ್ಠಿಸುತ್ತೇನೆ; ಕೊನೆಗೊಳಿಸುತ್ತೇನೆ. ನಮಾಝ್ ಮಾಡುತ್ತೇನೆ. ನಿದ್ರೆ ಮಾಡುತ್ತೇನೆ. ವಿವಾಹವಾಗುತ್ತೇನೆ. ಆದುದರಿಂದ ನನ್ನ ಚರ್ಯೆಯನ್ನು ಬಿಟ್ಟುಬಿಡುವವನು ನನ್ನ ಅನುಯಾಯಿ ಅಲ್ಲ. (ಬುಖಾರಿ, ಮುಸ್ಲಿಂ)

♦ ಸದ್ವರ್ತನೆಯೊಂದಿಗೆ ದೀರ್ಘಾಯುಷ್ಯ ಲಭಿಸಿದವನು ಜನರ ಪೈಕಿ ಮಹೋನ್ನತನು. (ತಿರ್ಮಿದೀ)

♦ ಮೇಲೆ ಇರುವ ಕೈಯು ಕೆಳಗೆ ಇರುವ ಕೈಗಿಂತ ಉತ್ತಮ. (ಮೇಲೆ ಇರುವ ಕೈ ದಾನ ನೀಡುವ ಕೈ ಮತ್ತು ಕೆಳಗೆ ಇರುವ ಕೈ ಪಡೆಯುವ ಕೈಯಾಗಿದೆ.) (ಬುಖಾರಿ)

♦ ನೆರೆಹೊರೆಯವನನ್ನು ಉತ್ತರಾಧಿಕಾರಿಯನ್ನಾಗಿ ಮಾಡಲಾಗುವುದೆಂದು ನಾನು ಭಾವಿಸುವಂತೆ ನೆರೆಹೊರೆಯವರ ಸಂಬಂಧಿಸಿ ಜಿಬ್ರೀಲ್ ನನ್ನೊಡನೆ ಉಪದೇಶಿಸುತ್ತಿದ್ದರು. (ಬುಖಾರಿ, ಮುಸ್ಲಿಂ)

♦ ಅಲ್ಲಾಹನ ದೃಷ್ಟಿಯಲ್ಲಿ ಸ್ನೇಹಿತರಲ್ಲಿ ಉತ್ತಮನು ಸ್ನೇಹಿತರೊಂದಿಗೆ ಒಳ್ಳೆಯ ರೀತಿಯಲ್ಲಿ ವರ್ತಿಸುವವನಾಗಿದ್ದಾನೆ. ನೆರೆಹೊರೆಯವರಲ್ಲಿ ಉತ್ತಮನು ನೆರೆಹೊರೆಯವರೊಂದಿಗೆ ಒಳ್ಳೆಯ ರೀತಿಯಲ್ಲಿ ವರ್ತಿಸುವವನಾಗಿದ್ದಾನೆ. (ತಿರ್ಮಿದೀ)

♦ ಅಲ್ಲಾಹನಲ್ಲೂ ಅಂತ್ಯ ದಿನದಲ್ಲೂ ವಿಶ್ವಾಸವುಳ್ಳವನು ತನ್ನ ಕುಟುಂಬ ಸಂಬಂಧವನ್ನು ಇರಿಸಿಕೊಳ್ಳಲಿ. (ಮುಸ್ಲಿಂ)

**"ಯುಗರಶ್ಮಿಗೆ" ಚಂದಾದಾರರಾಗಿರಿ**

ವಾರ್ಷಿಕ ಚಂದಾ : ರೂ. 60/–

ಅಂಚೆ ಮೂಲಕ : ರೂ. 70/–

ಸಂಪರ್ಕಿಸಿರಿ : 99 00 410 789

# ಇಸ್ಲಾಮ್ ಶಾಂತಿಯುತವಾದ ಧರ್ಮವಾಗಿದ್ದರೆ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಯುದ್ಧಗಳಲ್ಲಿ ಹೋರಾಡಿದುದು ಏಕೆ?

* ಲೇಖಕ : ಝಫೀರ್ ಮಹ್‌ಮೂದ್ ಮಲಿಕ್

ಗೂಗ್ಲ್‌ನಲ್ಲಿ ತಪಾಸಣೆ ನಡೆಸುವಾಗ ಸಾಮಾನ್ಯವಾಗಿ – ನೀವು ವಾಕ್ಚಾತುರ್ಯಭರಿತವಾದ ಈ ಕೆಳಗಿನ ವಾಕ್ಯವನ್ನು ಕಾಣುವಿರಿ: ಇಸ್ಲಾಮ್ ಹಿಂದಿನ ಕಾಲದಲ್ಲಿ ಹಿಂಸಾತ್ಮಕವಾಗಿದ್ದ ಹಾಗೆಯೇ ಪ್ರಚಲಿತ ಕಾಲದಲ್ಲಿಯೂ ಹಿಂಸಾತ್ಮಕ ಧರ್ಮವಾಗಿದೆ.

ಇದು ಹೊಸದಾದ ಟೀಕೆಯೇನೂ ಅಲ್ಲ. ಹತ್ತೊಂಬತ್ತನೆಯ ಶತಮಾನದ ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರಾಗಿದ್ದ ಸರ್ ವಿಲಿಯಮ್ ಮ್ಯೂರ್ ಮತ್ತು ಜಾನ್ ರಾಡ್‌ವೆಲ್ ಇತರರೊಂದಿಗೆ ಇದೇ ರೀತಿಯ ನಿರಾಧಾರ ಆಕ್ಷೇಪಗಳನ್ನು ಪ್ರೋತ್ಸಾಹಿಸುತ್ತಿದ್ದರು.

ಇಸ್ಲಾಮಿನ ವಿರುದ್ಧ ಅವರ ಆಕ್ರಮಣದ ಕಾರ್ಯತಂತ್ರ ಇಸ್ಲಾಮಿನ ಪವಿತ್ರ ಪೈಗಂಬರರ(ಸ) ಸ್ವಭಾವ ಗುಣಗಳನ್ನು ದೂಷಿಸುವುದಾಗಿತ್ತು. ಇಸ್ಲಾಮಿನ ಪವಿತ್ರ ಪೈಗಂಬರರ(ಸ) ಹೆಸರನ್ನು ಕೆಡಿಸಲು ತಾವು ಸಮರ್ಥರಾದರೆ ಇಸ್ಲಾಮನ್ನು ಅಪಖ್ಯಾತಿಗೊಳಪಡಿಸುವ ತಮ್ಮ ಉದ್ದೇಶಲಕ್ಷ್ಯ ಈಡೇರುವುದು ಎಂದು ಅವರು ಭಾವಿಸಿದ್ದರು.

ಆದರೆ ಗಮನಾರ್ಹವಾದ ವಾಸ್ತವಿಕತೆ ಏನೆಂದರೆ ಇಸ್ಲಾಮ್ ಧರ್ಮದ ಪ್ರಥಮ ವಿರೋಧಿಗಳಾದ ಖುರೈಶಿ ಗೋತ್ರದ ಜನರು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಅತ್ಯುನ್ನತ ಮಟ್ಟದ ನೈತಿಕ ಗುಣಗಳ ಬಗ್ಗೆ ಸಾಕ್ಷ್ಯ ನುಡಿದಿದ್ದರು – ಅವರಿಗೆ ಹಝ್ರತ್ ಪೈಗಂಬರರ(ಸ) ಉಪದೇಶಗಳ ಬಗ್ಗೆ ವಿರೋಧವಿದ್ದರೂ. ಹಝ್ರತ್ ಪೈಗಂಬರರ(ಸ) ಖ್ಯಾತಿ ಎದ್ದುಕಾಣುವಂತಿದ್ದು ಅವರು ಅಸ್ಸಿದ್ದೀಖ್ (ಸತ್ಯಸಂಧ) ಮತ್ತು ಅಲ್‌ಅಮೀನ್ (ವಿಶ್ವಾಸಾರ್ಹ) ಎಂಬ ಬಿರುದುಗಳಿಂದ ಜನರಲ್ಲಿ ಪ್ರಸಿದ್ಧಿ ಗಳಿಸಿದ್ದರು. ಅವರ ಕಠಿಣ ಶತ್ರುವಾದ ಅಬೂ ಜಹಲ್ ಒಮ್ಮೆ ಹೀಗೆ ಹೇಳಿದ್ದನು: "ಹೇ ಮುಹಮ್ಮದ್, ನಾವು ನಿನ್ನನ್ನು ಸುಳ್ಳುಗಾರನೆಂದು ಗಣಿಸುವುದಿಲ್ಲ. ಆದರೆ ನೀನು ಏನನ್ನು ತಂದಿರುವೆಯೋ ಅದನ್ನು ಸುಳ್ಳೆಂದು ಗಣಿಸುತ್ತೇವೆ" (ತಿರ್ಮಿಧಿ). ಇನ್ನೊಬ್ಬ ಶತ್ರುವಾಗಿದ್ದ ಅಲ್‌ನದ್ರ್ ಬಿನ್ ಅಲ್ ಹಾರಿಸ್, ಒಮ್ಮೆ ಯಾರೋ ಒಬ್ಬನು, "ಮುಹಮ್ಮದ್ ಸುಳ್ಳುಗಾರ" ಎಂದು ಹೇಳುವುದನ್ನು ಆಲಿಸಿದಾಗ ಹೀಗೆ ಹೇಳಿದನು: "ಮುಹಮ್ಮದ್ ನಮ್ಮ ಮಧ್ಯದಲ್ಲಿಯೇ ಬಾಲ್ಯದಿಂದ ಜೀವಿಸಿದವನಾಗಿದ್ದಾನೆ. ಅವನು ಅತ್ಯಂತ ಸೌಶೀಲ್ಯವಂತನೂ ಅತ್ಯಂತ ಪ್ರಾಮಾಣಿಕನೂ ಅತ್ಯಂತ ವಿಶ್ವಾಸಾರ್ಹನೂ ಆಗಿದ್ದನು. ಅವನ ಕೂದಲು ಬೆಳ್ಳಗಾಗುವ ತನಕ ಮತ್ತು ಅವನು ತಂದುದನ್ನು ತರುವ ತನಕ ಇದುವೇ ನಿಮ್ಮ ಅಭಿಪ್ರಾಯವೂ ಆಗಿತ್ತು. ಅನಂತರ ನೀವು ಹೇಳಿದಿರಿ – ಅವನೊಬ್ಬ ಜಾಲವಿದ್ಯೆಗಾರನೆಂದೂ ಸುಳ್ಳುಗಾರನೆಂದೂ. ದೇವನಾಣೆ, ಅವನು ಜಾದೂಗಾರನೂ ಅಲ್ಲ ಸುಳ್ಳುಗಾರನೂ ಅಲ್ಲ." (ಅಲ್ ಖಾಝಿ ಅಬುಲ್ ಫಝ್ಲ್ ಅಯಾದ್ ಬಿನ್ ಮೂಸಾ ಬರೆದ ಅಶ್ಶಿಫಾ ಭಾಗ – 1).

ಇದರಿಂದ ತಿಳಿಯುವುದೇನೆಂದರೆ, ಹಝ್ರತ್ ಪೈಗಂಬರರ(ಸ) ಕಾಲದಲ್ಲಿ ಜೀವಿಸಿದ್ದ ಜನರೆಲ್ಲರೂ, ಅವರ ಕಡು ಶತ್ರುಗಳು ಸಹ, ಅವರ ಸ್ವಭಾವಗುಣಗಳಲ್ಲಿ ಯಾವುದೇ ನ್ಯೂನತೆಯನ್ನು ಕಾಣಲಿಲ್ಲ. ಹೀಗಿದ್ದರೂ ಅನೇಕ ಶತಮಾನಗಳ ನಂತರ ಹಝ್ರತ್ ಪೈಗಂಬರರ(ಸ) ಜೀವನ ಚರಿತ್ರೆಯನ್ನು ಅಧ್ಯಯನ ಮಾಡುವವರು ಅವರ ಸ್ವಭಾವ ಗುಣಗಳನ್ನು ಕಳಂಕಿತವನ್ನಾಗಿ ವರ್ಣಿಸಲು ಪ್ರಯತ್ನಿಸುವುದು ಆಶ್ಚರ್ಯಕರವಾಗಿದೆ.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮಕ್ಕದ ಜನರನ್ನು ಇಸ್ಲಾಮಿಗೆ ಆಮಂತ್ರಿಸುವುದನ್ನು ಪ್ರಾರಂಭಿಸಿದ ನಂತರ ಹದಿಮೂರು ವರ್ಷಗಳ ಕಾಲ ಮಕ್ಕದಲ್ಲಿಯೇ ಉಪದೇಶಿಸುತ್ತಾ ಇದ್ದರು. ಈ ಕಾಲದಲ್ಲಿ ಖುರೈಶಿಗೋತ್ರದ ಬಹುತೇಕ ಮುಖಂಡರು ಅವರ ವಾದವನ್ನು ತಿರಸ್ಕರಿಸಿದರು. ಖುರೈಶಿಗಳು ಹಝ್ರತ್ ಪೈಗಂಬರರನ್ನು ಮತ್ತು ಅವರ ಅನುಯಾಯಿಗಳನ್ನು ಹಿಂಸಾಚಾರಗಳಿಗೆ ಗುರಿಪಡಿಸಲು ತೊಡಗಿದುದರಿಂದ ಕೆಲವು ಅನುಯಾಯಿಗಳು ಅಬಿಸೀನಿಯಾಕ್ಕೆ ವಲಸೆ ಹೋಗಿ ಆ ದೇಶದ ಕ್ರೈಸ್ತ ದೊರೆಯ ಆಶ್ರಯ ಪಡೆದರು.

ಮಕ್ಕದ ಖುರೈಶಿ ಗೋತ್ರದ ಜನರು ಅಲ್ಪಸಂಖ್ಯಾತರಾಗಿದ್ದ ಮುಸ್ಲಿಮರನ್ನು ಹೊಡೆಯುತ್ತಿದ್ದರು. ವಿವಿಧ ರೀತಿಗಳಲ್ಲಿ ಹಿಂಸಿಸುತ್ತಿದ್ದರು ಮತ್ತು ಮುಸ್ಲಿಮರ ಕೌಟುಂಬಿಕ ಹಿನ್ನಲೆಯನ್ನಾಗಲೀ ಅವರ ಅಂತಸ್ತನ್ನಾಗಲೀ ಪರಿಗಣಿಸುತ್ತಿರಲಿಲ್ಲ. ಇಷ್ಟುಮಾತ್ರವಲ್ಲ, ಖುರೈಶಿಗಳು ಮುಸ್ಲಿಮರ ಮೇಲೆ ಅನೇಕ ನಿರ್ಬಂಧಗಳನ್ನು ಹೇರಿದರು. ಅದು ಎರಡು ವರ್ಷಗಳು ಮುಂದುವರಿದಾಗ ಮುಸ್ಲಿಮರು ಹಸಿವಿನಿಂದ ಕಂಗೆಡುವ ಸ್ಥಿತಿಯುಂಟಾಯಿತು.

ಕೊನೆಗೆ ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಮಕ್ಕದಿಂದ ಸುಮಾರು 450 ಕಿ.ಮೀ. ದೂರವಿರುವ ಮದೀನಕ್ಕೆ ವಲಸೆ ಹೋಗಲು ಅನುಮತಿಸಿದಾಗ ಅವರ ಅನುಯಾಯಿಗಳು ಸಹ ಮದೀನಕ್ಕೆ ವಲಸೆ ಹೋಗಿ ನೆಮ್ಮದಿಯಿಂದ ಜೀವಿಸಲು ತೊಡಗಿದರು.

ಮಕ್ಕದ ವಿಗ್ರಹಾರಾಧಕರು ಮುಸ್ಲಿಮರನ್ನು ಮಕ್ಕದಿಂದ ಹೊರಗೋ

ಡಿಸಲು ಶಕ್ತರಾದರೂ ಅವರು ಅದರಿಂದ ತೃಪ್ತರಾಗಲಿಲ್ಲ. ಅವರು ಇಸ್ಲಾಮನ್ನು ಲೋಕದಿಂದ ಪೂರ್ಣವಾಗಿ ಅಳಿಸಿ ಬಿಡಲು ಇಚ್ಛಿಸಿದರು. ಮುಸ್ಲಿಮರು ಖುರೈಶಿಗಳನ್ನು ಯಾವುದೇ ರೀತಿಯಲ್ಲಿ ಪ್ರಚೋದಿಸಿರಲಿಲ್ಲವಾದರೂ ಶಸ್ತ್ರಸಜ್ಜಿತರಾದ 1000 ಮಕ್ಕದ ನಿವಾಸಿಗಳು ಮದೀನವನ್ನು ಆಕ್ರಮಣ ಮಾಡಲು ಸಾಗಿದರು. ಈ ಅಪ್ರಚೋದಿತ ಆಕ್ರಮಣದ ಕಾರಣದಿಂದ ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮರಿಗೆ ತಮ್ಮನ್ನು ರಕ್ಷಿಸಿಕೊಳ್ಳಲು ಆಯುಧಗಳನ್ನು ಬಳಸಲು ಅನುಮತಿ ನೀಡಿದನು. ಯುದ್ಧ ಮಾಡುವುದಕ್ಕೆ ಸಂಬಂಧಿಸಿ ಅವತೀರ್ಣವಾದ ಪ್ರಥಮ ವಚನ ಈ ಕೆಳಗಿನದಾಗಿದೆ: "ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿಯುದ್ಧ ಮಾಡುವ ಅನುಮತಿ ಇದೆ. ಏಕೆಂದರೆ ಅವರು ಆಕ್ರಮಣಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ." (ಪವಿತ್ರ ಖುರ್‌ಆನ್ 22 : 40).

ಇದನ್ನು ಮುಂದಿನ ವಚನದಲ್ಲಿ ಇನ್ನಷ್ಟು ಹೀಗೆ ವಿಶದೀಕರಿಸಲಾಗಿದೆ: "'ಅಲ್ಲಾಹನೇ ನಮ್ಮ ಪ್ರಭು' ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಜನರಲ್ಲಿ ಕೆಲವರನ್ನು (ಅವರು ಎಸಗಿದ ದೌರ್ಜನ್ಯಗಳನ್ನು) ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿ ಮಂದಿರಗಳೂ ಮಸೀದಿಗಳೂ ನಿರ್ನಾಮವಾಗುತ್ತಿದ್ದುವು. ಅವುಗಳಲ್ಲಿ ಅಲ್ಲಾಹನ ನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತವೆ. ತನಗೆ ನೆರವು ನೀಡುವವರಿಗೆ ಅಲ್ಲಾಹನು ಖಂಡಿತವಾಗಿಯೂ ನೆರವಾಗುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸರ್ವಸಮರ್ಥನೂ ಪ್ರತಾಪಶಾಲಿಯೂ ಆಗಿದ್ದಾನೆ." (22 : 41).

ಇಸ್ಲಾಮಿನ ಪೈಗಂಬರರು(ಸ) ಎಂದಾದರೂ ಏಕೆ ಖಡ್ಗವನ್ನು ಎತ್ತಿಕೊಂಡರು ಎಂಬುದನ್ನು ಈ ವಚನ ವಿವರಿಸುತ್ತದೆ. ಹಾಗೆ ಮಾಡಿದುದು ಭೂಪ್ರದೇಶವನ್ನು ಸ್ವಾಧೀನ ಪಡಿಸಿಕೊಳ್ಳಲಿಕ್ಕಾಗಲೀ ಧರ್ಮವನ್ನು ಬಲಾತ್ಕಾರದಿಂದ ಹೇರಲಿಕ್ಕಾಗಲೀ ಆಗಿರಲಿಲ್ಲ. ಹಝ್ರತ್ ಪೈಗಂಬರರು(ಸ) ಯುದ್ಧ ಮಾಡಿದುದು ಆತ್ಮ ಸಂರಕ್ಷಣೆಗೋಸ್ಕರವೂ ಇಸ್ಲಾಮನ್ನು ನಾಶದಿಂದ ರಕ್ಷಿಸಲಿಕ್ಕೂ ಧಾರ್ಮಿಕ ಸ್ವಾತಂತ್ರ್ಯವನ್ನು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎಲ್ಲ ಧರ್ಮಗಳ ಜನರಿಗೆ ಸ್ಥಾಪಿಸಿಕೊಡಲಿಕ್ಕೂ ಆಗಿತ್ತು. ಆದುದರಿಂದ ಹಝ್ರತ್ ಪೈಗಂಬರರು ಭಾಗವಹಿಸಿದ ಯುದ್ಧಗಳ ಬಗ್ಗೆ ಮೇಲಿನ ಪ್ರಮೇಯವನ್ನು ಮನಸ್ಸಿನಲ್ಲಿಟ್ಟುಕೊಂಡು ಪರಿಶೀಲಿಸಬೇಕಾಗಿದೆ. ಇನ್ನೊಂದು ವಿಷಯವೇನೆಂದರೆ, ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನ ಹೀಗೆ ಸೂಚಿಸುತ್ತದೆ: ಮಸ್‌ಜಿದ್‌ಗಳನ್ನು ಮಾತ್ರವಲ್ಲ ಅನ್ಯ ಧರ್ಮಗಳ ಜನರ ಆರಾಧನಾಲಯಗಳನ್ನು ರಕ್ಷಿಸುವುದು ಮುಸ್ಲಿಮರ ಕಡ್ಡಾಯ ಕರ್ತವ್ಯವಾಗಿದೆಯಲ್ಲದೆ ಎಲ್ಲ ಧರ್ಮಗಳ ಜನರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ಖಾತರಿಪಡಿಸಲೂ ಬೇಕು. ಹೀಗೆ ಮಾಡುವುದು ಪವಿತ್ರ ಖುರ್‌ಆನಿನ ಈ ಕೆಳಗಿನ ವಚನಕ್ಕೆ ಅನುಸಾರವಾಗಿದೆ: "ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ." (2 : 257).

ಬದರ್ ಯುದ್ಧ ಮುಸ್ಲಿಮರು ಮಕ್ಕದ ಖುರೈಶಿಗಳ ವಿರುದ್ಧ ಹೋರಾಡಿದ ಪ್ರಥಮ ಯುದ್ಧವಾಗಿತ್ತು. ಮಕ್ಕದವರಲ್ಲಿ 1000 ಸುಸಜ್ಜಿತ ಸೈನಿಕರಿದ್ದರು. 700 ಒಂಟೆಗಳೂ 100 ಕುದುರೆಗಳೂ ಅವರ ಸೈನ್ಯದಲ್ಲಿದ್ದುವು. ಆದರೆ ಮುಸ್ಲಿಮ್ ಹೋರಾಟಗಾರರ ಸಂಖ್ಯೆ 310ಕ್ಕಿಂತ ಸ್ವಲ್ಪ ಹೆಚ್ಚಿಗೆ ಇತ್ತು. ಅವರ ಸೈನ್ಯದಲ್ಲಿ ಬರೇ 70 ಒಂಟೆಗಳೂ 2 ಕುದುರೆಗಳೂ ಮಾತ್ರವಿದ್ದುವು. ಅವರ ಬಳಿ ಇದ್ದ ಸಾಮಗ್ರಿಗಳು ಬಹಳ ಕಡಿಮೆಯಾಗಿದ್ದುವು. ಕೇವಲ ಆರು ಅಥವಾ ಏಳು ಜನರು ಮಾತ್ರ ಕವಚಧಾರಿಗಳಾಗಿದ್ದರು. ತರ್ಕಬದ್ಧವಾಗಿ ಹೇಳುವುದಾದರೆ ಈ ಯುದ್ಧದಲ್ಲಿ ವಿಗ್ರಹಾರಾಧಕರು ಜಯಶಾಲಿಗಳಾಗಬೇಕಾಗಿತ್ತು. ಏಕೆಂದರೆ ಅವರ ಹೋರಾಟಗಾರರ ಸಂಖ್ಯೆ ಮುಸ್ಲಿಮ್ ಹೋರಾಟಗಾರರ ಸಂಖ್ಯೆಗಿಂತ ಮುಮ್ಮಡಿ ಇತ್ತು. ಅವರ ಯುದ್ಧೋಪಕರಣಗಳು ಮುಸ್ಲಿಮರ ಯುದ್ಧೋಪಕರಣಗಳಿಗಿಂತ ಬಹಳ ಉಚ್ಚ ಮಟ್ಟದ್ದಾಗಿದ್ದುವು. ಆದರೆ ಅಲ್ಲಾಹನು ಮುಸ್ಲಿಮರಿಗೆ ಮುಂಚಿತವಾಗಿಯೇ ವಾಗ್ದಾನ ಮಾಡಿದ್ದನು – ಅವರಿಗೆ ಜಯವು ದಯಪಾಲಿಸಲ್ಪಡುವುದೆಂದು. ಹಾಗೆಯೇ ಸಂಭವಿಸಿತು. ಮುಸ್ಲಿಮರು ಯುದ್ಧಮಾಡುವ ಹಟವನ್ನು ಹೊಂದಿದವರಾಗಿದ್ದಿದ್ದರೆ ಈ ನಿರ್ಣಾಯಕವಾದ ಜಯಗಳಿಸಿದ ನಂತರ ಸಹ ಖುರೈಶಿಗಳ ವಿರುದ್ಧ ಆಕ್ರಮಣ ಮಾಡುತ್ತಿದ್ದರು. ಆದರೆ ಬದರ್ ಯುದ್ಧದಲ್ಲುಂಟಾದ ಸೋಲಿಗೆ ಪ್ರತೀಕಾರ ಮಾಡಲು ಖುರೈಶಿಗಳು ಮದೀನವನ್ನು ಆಕ್ರಮಣ ಮಾಡಲು 3000 ಸೈನಿಕರೊಂದಿಗೆ ದಂಡಯಾತ್ರೆ ಮಾಡಿದರು. ಅವರ ಪೈಕಿ 700 ಸೈನಿಕರು ಕವಚಧಾರಿಗಳಾಗಿದ್ದರು. ಅವರ ಸೈನ್ಯದಲ್ಲಿ 200 ಕುದುರೆಗಳೂ 3000 ಒಂಟೆಗಳೂ ಇದ್ದುವು.

ಈ ಯುದ್ಧದ ಹೆಸರು ಉಹುದ್ ಎಂದಾಗಿತ್ತು. ಮುಸ್ಲಿಮರು ತಮ್ಮನ್ನು ರಕ್ಷಿಸಲು ಪ್ರತಿರೋಧಾತ್ಮಕ ಯುದ್ಧ ಮಾಡಲು ನಿರ್ಬಂಧಿತರಾದರು. ಹಾಗೆ ಮಾಡದಿದ್ದರೆ ಇಸ್ಲಾಮ್ ಅಳಿದು ಹೋಗುವ ಸಾಧ್ಯತೆ ಇತ್ತು. ಆ ಯುದ್ಧದಲ್ಲಿ ಹೋರಾಡಿದ ಮುಸ್ಲಿಮರ ಸಂಖ್ಯೆ ಕೇವಲ 700 ಆಗಿತ್ತು. ಅವರ ಪೈಕಿ 100 ಜನರು ಮಾತ್ರ ಕವಚಧಾರಿಗಳಾಗಿದ್ದರು. ಅವರ ಬಳಿ ಕೇವಲ 2 ಕುದುರೆಗಳಿದ್ದುವು. ವಾಸ್ತವಿಕವಾಗಿ ಮುಸ್ಲಿಮರು ಹೋರಾಡಿದ ಯುದ್ಧಗಳಲ್ಲಿ ಶತ್ರು ಸೈನಿಕರ ಸಂಖ್ಯೆ ಯಾವಾಗಲೂ ಮುಸ್ಲಿಮ್ ಸೈನಿಕರ ಸಂಖ್ಯೆಗಿಂತ ಬಹಳ ಹೆಚ್ಚಾಗಿತ್ತು. ಹುನೈನ್ ಯುದ್ಧ ಮಾತ್ರ ಇದಕ್ಕೆ ಹೊರತಾಗಿದೆ. ಆದುದರಿಂದ ಮುಸ್ಲಿಮರು ಶತ್ರುಗಳ ವಿರುದ್ಧ ಸಕ್ರಿಯವಾಗಿ ಯುದ್ಧ

ಪ್ರಾರಂಭಿಸುವವರಾಗಿದ್ದರು ಎಂದು ಸೂಚಿಸುವುದು ಮಿಥ್ಯ ವಿಚಾರವಾಗಿದೆ.

ಇಸ್ಲಾಮ್ ಧರ್ಮಾವಲಂಬಿಗಳ ಸಂಖ್ಯೆಯ ವರ್ಧನೆಯನ್ನು ಇನ್ನೊಂದು ದೃಷ್ಟಿಕೋನದಿಂದ ಪರಾಂಬರಿಸುವುದಾದರೆ ಇಸ್ಲಾಮಿನ ವಿರುದ್ಧ ಮಾಡುವ ಟೀಕೆಯ ದುರ್ಬಲತೆ ಸ್ಪಷ್ಟವಾಗುತ್ತದೆ. ಹುದೈಬಿಯಾ ಸಂಧಿ ಮುಸ್ಲಿಮರ ಮತ್ತು ಮಕ್ಕದವರ ಮಧ್ಯೆ ಶಾಂತಿ ಸ್ಥಾಪನೆಗೋಸ್ಕರ ಹಿಜರಿ ವರ್ಷ 6ರಲ್ಲಿ ಮಾಡಲಾಯಿತು. ಆಗ ಇಸ್ಲಾಮ್ ಧರ್ಮ ಸ್ಥಾಪನೆಯಾಗಿ 19 ವರ್ಷಗಳು ದಾಟಿ ಹೋಗಿದ್ದುವು. (13 ವರ್ಷ ಮಕ್ಕದಲ್ಲಿ, 6 ವರ್ಷ ಮದೀನದಲ್ಲಿ). ಆ ಸಂದರ್ಭದಲ್ಲಿ ಪವಿತ್ರ ಪೈಗಂಬರರೊಂದಿಗೆ(ಸ) ಮದೀನದಿಂದ ಮಕ್ಕದ ಕಡೆಗೆ ಪ್ರಯಾಣಿಸಿದ ಮುಸ್ಲಿಮರ ಸಂಖ್ಯೆ 1400 ಆಗಿತ್ತು. ಆ ಸಮಯದಲ್ಲಿ ಮದೀನದಲ್ಲಿದ್ದ ಮಹಿಳೆಯರು, ಮಕ್ಕಳು ಮತ್ತು ವೃದ್ಧರ ಸಂಖ್ಯೆಯನ್ನು ಈ ಸಂಖ್ಯೆಯೊಂದಿಗೆ ಜೊತೆ ಸೇರಿಸಿದರೆ ಮುಸ್ಲಿಮರ ಸಂಖ್ಯೆ ಅಂದಾಜು 3000 ಆಗುತ್ತಿತ್ತು.

ಎರಡು ವರ್ಷಗಳ ನಂತರ ಮಕ್ಕವನ್ನು ಜಯಿಸಿದಾಗ ಹಝ್ರತ್ ಪೈಗಂಬರರ ಜೊತೆಗಿದ್ದ ಮುಸ್ಲಿಮರ ಸಂಖ್ಯೆ 10000 ಆಗಿತ್ತು. ಇದರಿಂದ ಹೀಗೆ ಸ್ಪಷ್ಟವಾಗುತ್ತದೆ: ಹತ್ತೊಂಬತ್ತು ವರ್ಷಗಳ ಕಾಲಾವಧಿಯಲ್ಲಿ – ಅದರಲ್ಲಿ ನಾಲ್ಕು ವರ್ಷಗಳು ಮಕ್ಕದವರ ವಿರುದ್ಧ ಯುದ್ಧ ಮಾಡಲು ವಿನಿಯೋಗಿಸಲ್ಪಟ್ಟಿತ್ತು – ಹಝ್ರತ್ ಪೈಗಂಬರರ ಅನುಯಾಯಿಗಳ ಸಂಖ್ಯೆ ಕೆಲವು ಸಾವಿರಗಳಾಗಿದ್ದುವು. ಆದರೆ ಯುದ್ಧ ನಡೆಯದ ಶಾಂತಿಯ ಎರಡು ವರ್ಷಗಳ ಕಾಲಾವಧಿಯಲ್ಲಿ ಮುಸ್ಲಿಮರ ಜನಸಂಖ್ಯೆ 10,000ಕ್ಕೆ ತಲಪಿತು. ಇದರಿಂದ ಸ್ಪಷ್ಟವಾಗುವುದೇನೆಂದರೆ, ಶಾಂತಿಯ ಕಾಲದಲ್ಲಿ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಜನರು ಮುಸ್ಲಿಮರಾದರು. ಆದರೆ ಯುದ್ಧ ಮತ್ತು ಸಂಘರ್ಷದ ಕಾಲದಲ್ಲಿ ಮುಸ್ಲಿಮರಾದವರ ಸಂಖ್ಯೆ ಗಮನಾರ್ಹವಾಗಿ ಕಡಿಮೆಯಾಗಿತ್ತು. ಇಸ್ಲಾಮ್ ಖಡ್ಗ ಬಲದಿಂದ ಹರಡಿತು ಎಂಬ ವಿಮರ್ಶೆಗೆ ಇದು ಇನ್ನೊಂದು ಖಂಡನೆಯಾಗಿದೆ.

ಮುಸ್ಲಿಮರು ಮಕ್ಕದವರೊಂದಿಗೆ ಹೋರಾಟದ ಪರಿಸ್ಥಿತಿಯಲ್ಲಿದ್ದಾಗ ಹಝ್ರತ್ ಪೈಗಂಬರರು(ಸ) ಹಝ್ರತ್ ಅಬ್ದುಲ್ಲಾ ಬಿನ್ ಜಹ್‌ಶರವರ ನೇತೃತ್ವದಲ್ಲಿ ಒಂದು ತಂಡವನ್ನು ಮಕ್ಕದವರ ಚಲನ ವಲನಗಳನ್ನು ಪತ್ತೆ ಹಚ್ಚಲು ಕಳುಹಿಸಿದ್ದರು. ತಂಡದ ನಾಯಕನಿಗೆ ಒಂದು ಪತ್ರವನ್ನು ಕೊಟ್ಟು ಅದನ್ನು ಎರಡು ದಿನಗಳ ಕಾಲ ಪ್ರಯಾಣಿಸಿದ ನಂತರ ತೆರೆದು ಓದಲು ಹೇಳಿದ್ದರು. ಈ ತಂಡ ಮಕ್ಕದ ಸಮೀಪದಲ್ಲಿ ಖುರೈಶಿಗಳ ಒಂದು ವ್ಯಾಪಾರಿ ಸಂಘವನ್ನು ಕಂಡಾಗ ಅವರು ಆ ವ್ಯಾಪಾರಿ ಸಂಘವನ್ನು ತಮ್ಮ ಸ್ವಂತ ಇಷ್ಟಪ್ರಕಾರ ಆಕ್ರಮಿಸಿದರು. ವ್ಯಾಪಾರಿ ಸಂಘದ ಒಬ್ಬನು ಕೊಲ್ಲಲ್ಪಟ್ಟನು. ಇಬ್ಬರನ್ನು ಬಂಧಿಸಲಾಯಿತು. ಒಬ್ಬನು ತಪ್ಪಿಸಿಕೊಂಡು ಓಡಿದನು. ಮುಸ್ಲಿಮರ ತಂಡ ಮದೀನಕ್ಕೆ ವಶಪಡಿಸಿಕೊಂಡ ವಸ್ತುಗಳೊಂದಿಗೆ ಮರಳಿದಾಗ ಹಝ್ರತ್ ಪೈಗಂಬರರಿಗೆ ಸಂಭವಿಸಿದುದೆಲ್ಲವೂ ತಿಳಿಯಿತು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಈ ಪವಿತ್ರ ತಿಂಗಳಲ್ಲಿ ಹೋರಾಡಲು ನಾನು ನಿಮಗೆ ಅನುಮತಿ ನೀಡಿರಲಿಲ್ಲ." ಹಝ್ರತ್ ಪೈಗಂಬರರು ಆ ಹೋರಾಟದಲ್ಲಿ ಗಳಿಸಿದ ಸಂಪತ್ತಿನಿಂದ ಏನನ್ನೂ ಸ್ವೀಕರಿಸದೆ ನಿರಾಕರಿಸಿದರು.

ಮೇಲೆ ವಿವರಿಸಿದ ಘಟನೆಗಳಿಂದ ಹೀಗೆ ತಿಳಿದು ಬರುತ್ತದೆ: ಮುಸ್ಲಿಮರು ಯುದ್ಧದಲ್ಲಿ ಹೋರಾಡಲು ಸುಸಜ್ಜಿತರಾಗಿರಲಿಲ್ಲ ಮತ್ತು ಅವರಿಗೆ ಸಾಮಗ್ರಿಗಳ ಕೊರತೆ ಸಹ ಇತ್ತು. ಇಂತಹ ಪರಿಸ್ಥಿತಿಯಲ್ಲಿ ಯಾವುದಾದರೂ ಸಾಮಗ್ರಿ ದೊರೆತರೆ ಅವರು ಅದನ್ನು ಸ್ವಾಗತಿಸಬೇಕಾಗಿತ್ತು. ಅಷ್ಟು ಮಾತ್ರವಲ್ಲ, ಮುಸ್ಲಿಮರು ಖುರೈಶಿಗಳ ವಿರುದ್ಧ ಯುದ್ಧದ ಪರಿಸ್ಥಿತಿಯಲ್ಲಿದ್ದರು. ಆದರೆ ತಾನು ಆಜ್ಞಾಪಿಸದ ಹೋರಾಟದಿಂದ ಲಭಿಸಿದ ಸಂಪತ್ತನ್ನು ಸ್ವೀಕರಿಸದೆ ನಿರಾಕರಿಸಿದುದು ಹಝ್ರತ್ ಪೈಗಂಬರರ ಉನ್ನತ ನೈತಿಕ ಗುಣಗಳನ್ನೂ ಅವರಿಗಿದ್ದ ಘನತೆಯನ್ನೂ ಸೂಚಿಸುತ್ತವೆ. "ಯುದ್ಧ ಮತ್ತು ಪ್ರೇಮದಲ್ಲಿ ಎಲ್ಲವೂ ನ್ಯಾಯೋಚಿತ" ಎಂಬ ನಾಣ್ಣುಡಿಗೆ ವಿರುದ್ಧವಾದ ವರ್ತನೆ ಇದಾಗಿದೆ.

ವಾಸ್ತವವೇನೆಂದರೆ, ಹಝ್ರತ್ ಪೈಗಂಬರರು(ಸ) ಯುದ್ಧ ಕಾಲದಲ್ಲಿ ಮುಸ್ಲಿಮರ ವರ್ತನೆ ಬಗ್ಗೆ ಬಹಳ ಕಾಳಜಿ ಹೊಂದಿದ್ದರು. ಅವರು ಸೈನ್ಯವನ್ನು ದಂಡಯಾತ್ರೆಗೆ ಕಳುಹಿಸುವಾಗ ಹೀಗೆ ಉಪದೇಶಿಸುತ್ತಿದ್ದರು: "ಎಲೈ ಮುಸ್ಲಿಮರೇ, ನೀವು ಅಲ್ಲಾಹನ ನಾಮದಲ್ಲಿ ಸಾಗಿರಿ ಮತ್ತು ಇಸ್ಲಾಮ್ ಧರ್ಮವನ್ನು ಸಂರಕ್ಷಿಸಲು ಜಿಹಾದ್ ಮಾಡಿರಿ. ಆದರೆ ಎಚ್ಚರಿಕೆ, ಯುದ್ಧದಲ್ಲಿ ಗಳಿಸಿದ ಸಂಪತ್ತನ್ನು ದುರುಪಯೋಗಪಡಿಸಬೇಡಿರಿ ಮತ್ತು ಜನರನ್ನು ವಂಚಿಸಬೇಡಿರಿ. ಶತ್ರುಗಳ ಮೃತ ಶರೀರಾಂಗಗಳನ್ನು ವಿಕಲಗೊಳಿಸಬೇಡಿರಿ. ಮಹಿಳೆಯರನ್ನೂ ಮಕ್ಕಳನ್ನೂ ಧಾರ್ಮಿಕವಾಗಿ ಏಕಾಂತ ವಾಸದಲ್ಲಿರುವವರನ್ನೂ ವೃದ್ಧರನ್ನೂ ಹತ್ಯೆ ಮಾಡಬೇಡಿರಿ. ಭೂಮಿಯಲ್ಲಿ ಶಾಂತಿಯನ್ನು ಸ್ಥಾಪಿಸಿರಿ. ಜನರೊಂದಿಗೆ ಸಹಾನುಭೂತಿಯಿಂದ ವರ್ತಿಸಿರಿ. ನಿಶ್ಚಯವಾಗಿಯೂ ಅಲ್ಲಾಹನು ಸಹಾನುಭೂತಿ ದೋರುವವರನ್ನು ಇಷ್ಟಪಡುತ್ತಾನೆ."

ಯುದ್ಧ ಕಾಲದಲ್ಲಿ ಅನುಸರಿಸುತ್ತಿದ್ದ ಈ ಮಾದರಿ ವರ್ತನೆ ಹಝ್ರತ್ ಪೈಗಂಬರರ(ಸ) ನಂತರ ಧರ್ಮನಿಷ್ಠರಾದ ಖಲೀಫರ ಕಾಲದಲ್ಲಿಯೂ ಮುಂದುವರಿಯಿತು. ಬೈಝಾಂಟಿಯನ್ ಸೈನ್ಯವನ್ನು ಎದುರಿಸಲು ಮುಸ್ಲಿಮ್ ಸೈನ್ಯವನ್ನು ರವಾನಿಸುವಾಗ ಪ್ರಥಮ ಖಲೀಫರಾದ ಹಝ್ರತ್ ಅಬೂಬಕರ್(ರ) ಹೀಗೆ ಉಪದೇಶಿಸಿದರು: "ನಿಲ್ಲಿರಿ, ನಾನು ನಿಮಗೆ ಹತ್ತು ನಿಯಮಗಳನ್ನು ಯುದ್ಧ ಮಾಡುವಾಗ ಮಾರ್ಗದರ್ಶನ ನೀಡಲು ಹೇಳಿಕೊಡುತ್ತೇನೆ. ನೀವು ವಿಶ್ವಾಸಘಾತ

ಮಾಡಬೇಡಿರಿ. ಪಥಭ್ರಷ್ಟರಾಗಬೇಡಿರಿ. ನೀವು ಮೃತ ಶರೀರಗಳನ್ನು ವಿಕಲಗೊಳಿಸಬೇಡಿರಿ. ಮಕ್ಕಳನ್ನು, ಮಹಿಳೆಯರನ್ನು ಮತ್ತು ವೃದ್ಧರನ್ನು ಹತ್ಯೆ ಮಾಡಬೇಡಿರಿ. ಮರಗಳಿಗೆ ಮತ್ತು ವಿಶಿಷ್ಟವಾಗಿ ಹಣ್ಣುಗಳಿರುವ ಮರಗಳಿಗೆ ಹಾನಿವುಂಟುಮಾಡಬೇಡಿರಿ. ನಿಮ್ಮ ಶತ್ರುಗಳ ಮೃಗಗಳನ್ನು ಕೊಲ್ಲಬೇಡಿರಿ. ಅವುಗಳನ್ನು ನಿಮ್ಮ ಆಹಾರಕ್ಕೋಸ್ಕರ ಸಂರಕ್ಷಿಸಿರಿ. ತಮ್ಮ ಜೀವಿತವನ್ನು ಧಾರ್ಮಿಕವಾಗಿ ಏಕಾಂತ ವಾಸಕ್ಕೆ ಅರ್ಪಿಸಿದವರನ್ನು ನೀವು ಕಂಡರೆ ಅವರನ್ನು ಬಿಟ್ಟುಬಿಡಿರಿ."

ಇಸ್ಲಾಮನ್ನು ಆಕ್ಷೇಪಿಸುವವರು ಸಾಮಾನ್ಯವಾಗಿ ಬಳಸುವ ಒಂದು ತಂತ್ರ ಇದಾಗಿದೆ: ಅವರು ಬಳಸಿದ ಸಂದರ್ಭದಿಂದ ಪ್ರತ್ಯೇಕಿಸಿ ಪವಿತ್ರ ಖುರ್‌ಆನಿನ ಬಿಡಿ ವಚನಗಳನ್ನು ತೋರಿಸಿ ಈ ವಚನಗಳನ್ನು ಭಯೋತ್ಪಾದಕರು ತಮ್ಮ ಉಗ್ರವಾದಿ ಕೃತ್ಯಗಳನ್ನು ಸಮರ್ಥಿಸಲು ಬಳಸುತ್ತಾರೆಂದು ಹೇಳುತ್ತಾರೆ. ಇಂತಹ ಅನೇಕ ವಚನಗಳಲ್ಲಿ ಒಂದನ್ನು ಓದುಗರ ಮುಂದಿರಿಸಿ ಅವರು ಅದರ ಬಗ್ಗೆ ತಮ್ಮ ತೀರ್ಪು ನೀಡಲಿ ಎಂದು ಹೇಳಲು ಬಯಸುತ್ತೇನೆ.

ಸಾಮಾನ್ಯವಾಗಿ ಉದಾಹರಿಸಲ್ಪಡುವ ಪವಿತ್ರ ಖುರ್‌ಆನಿನ ವಚನ ಈ ಕೆಳಗಿನದಾಗಿದೆ: "ಅವರನ್ನು ನೀವು ಕಂಡಲ್ಲಿ ಕೊಲ್ಲಿರಿ. ನಿಮ್ಮನ್ನು ಅವರು ಹೊರ ಅಟ್ಟಿದಲ್ಲಿಂದ ನೀವು ಸಹ ಅವರನ್ನು ಹೊರ ಅಟ್ಟಿರಿ. 'ಫಿತ್ನ' (ಪಿತೂರಿ, ಗಲಭೆ) ಕೊಲೆಗಿಂತ ಕಠಿಣ (ಕೇಡುಂಟುಮಾಡುತ್ತದೆ). ಮಸ್‌ಜಿದುಲ್ ಹರಾಮಿನ ಸಮೀಪದಲ್ಲಿ ನೀವು ಅವರೊಡನೆ ಯುದ್ಧ ಮಾಡಬಾರದು – ಅವರು ಅಲ್ಲಿ ನಿಮ್ಮೊಡನೆ ಯುದ್ಧ ಪ್ರಾರಂಭಿಸಿದರೆ ಹೊರತು. (ಅಲ್ಲಿ ಸಹ) ಅವರು ನಿಮ್ಮೊಡನೆ ಯುದ್ಧ ಮಾಡಿದರೆ ನೀವು ಅವರನ್ನು ವಧಿಸಿರಿ. (ದುಷ್ಕರ್ಮಿಗಳಾದ) ಅವಿಶ್ವಾಸಿಗಳಿಗೆ ಇದೇ ಶಿಕ್ಷೆ." (ಪವಿತ್ರ ಖುರ್‌ಆನ್ 2 :192).

ಈ ವಚನದ ಬಗ್ಗೆ, ಅವಿಶ್ವಾಸಿಗಳಾದ ಎಲ್ಲ ಜನರನ್ನು ಕಂಡಲ್ಲೆಲ್ಲ ಕೊಲ್ಲಬೇಕೆಂದು ಮುಸ್ಲಿಮರಿಗೆ ಆಜ್ಞೆ ನೀಡಲಾಗಿದೆ ಎಂದು ತಪ್ಪಾಗಿ ಪ್ರಚಾರ ಮಾಡಲಾಗುತ್ತಿದೆ. ಈ ವಚನದ ಅರ್ಥ ಆಕ್ಷೇಪಗಾರರು ಹೇಳುವಂತೆಯೇ ಆಗಿದ್ದರೆ ಒಂದು ಪ್ರಶ್ನೆ ಉದಿಸುತ್ತದೆ. ಲೋಕದಲ್ಲಿರುವ 1.6 ಬಿಲಿಯನ್ ಮುಸ್ಲಿಮರಲ್ಲಿ ಶೇಕಡಾ 99.9 ಜನರು ತಥಾಕಥಿತ ಆಜ್ಞೆಯ ಪ್ರಕಾರ ಏಕೆ ವರ್ತಿಸುವುದಿಲ್ಲ. ಅವರು ಪ್ರತಿಯೊಂದು ಸಮಾಜದಲ್ಲಿ ಶಾಂತಿಯಿಂದ ಜೀವಿಸಲು ಕಾರಣವೇನು ? ಇದು ಸೂಚಿಸುವುದೇನೆಂದರೆ ಈ ವಚನಕ್ಕೆ ಬೇರೆ ಅರ್ಥವಿದೆ.

ಇಸ್ಲಾಮನ್ನು ಆಕ್ಷೇಪಿಸುವವರಿಗೆ ಪವಿತ್ರ ಖುರ್‌ಆನಿನ ನುಡಿಗಟ್ಟು ಮತ್ತು ಅದರ ಭಾಷೆಯ ಪರಿಚಯವಿಲ್ಲದಿರುವುದು ಅವರ ದುರ್ವ್ಯಾಖ್ಯಾನದ ಕಾರಣವಾಗಿದೆ. ಈ ವಚನದಲ್ಲಿ "ಅವರನ್ನು" ಎಂದು ಅರ್ಥ ನೀಡುವ ಹುಮ್ ಎಂಬ ಅರಬಿ ಪದವನ್ನು ಬಳಸಲಾಗಿದೆ. ಇದು ಸೂಚಿಸುವುದೇನೆಂದರೆ, ಇದರ ಮೊದಲು ಪ್ರಸ್ತಾಪಿಸದವರನ್ನು ಉದ್ದೇಶಿಸಿ ಈ ಆಜ್ಞೆ ನೀಡಲಾಗಿದೆ. ನಾವು ಈ ವಚನದ ಮೊದಲಿನ ವಚನವನ್ನು ನೋಡಿದರೆ ಅದು ಸ್ಪಷ್ಟವಾಗುತ್ತದೆ. ಆ ವಚನ ಹೀಗೆ: "ನಿಮ್ಮ ವಿರುದ್ಧ ಯುದ್ಧ ಮಾಡುವವರೊಡನೆ ಅಲ್ಲಾಹನ ಮಾರ್ಗದಲ್ಲಿ ನೀವು ಸಹ ಯುದ್ಧ ಮಾಡಿರಿ. ಆದರೆ ಅತಿಕ್ರಮಣ ಮಾಡಬೇಡಿರಿ. ಅತಿಕ್ರಮಣ ಮಾಡುವವರನ್ನು ಅಲ್ಲಾಹನು ಪ್ರೀತಿಸುವುದಿಲ್ಲ." (ಪವಿತ್ರ ಖುರ್‌ಆನ್ 2 : 191).

ಯುದ್ಧ ಮಾಡುವವರನ್ನು ಮಾತ್ರ ಉದ್ದೇಶಿಸಿ ಕೊಲ್ಲುವ ಆಜ್ಞೆ ನೀಡಲಾಗಿದೆಯೇ ಹೊರತು ಬೇರೆ ಯಾರನ್ನೂ ಉದ್ದೇಶಿಸಿ ಆಜ್ಞೆ ನೀಡಲಾಗಿಲ್ಲ ಎಂದು ಈ ವಚನದಿಂದ ನಿಸ್ಸಂಶಯವಾಗಿ ಸ್ಪಷ್ಟವಾಗುತ್ತದೆ. "ನಿಮ್ಮ ವಿರುದ್ಧ ಯುದ್ಧಮಾಡುವವರೊಡನೆ" ಎಂಬುದು ಈ ಆಜ್ಞೆಯ ಕೀಲಿಗೈ ಆಗಿದೆ. ಮುಸ್ಲಿಮರ ವಿರುದ್ಧ ಯಾರು ಯುದ್ಧ ಪ್ರಾರಂಭಿಸುತ್ತಾರೋ ಅವರ ವಿರುದ್ಧ ಪ್ರತಿರೋಧಕ ಯುದ್ಧ ಮಾಡಲು ಮಾತ್ರ ಅನುಮತಿ ನೀಡಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

**(The Review of Religions November 2020 ಸಂಚಿಕೆಯಿಂದ. ಭಾಷಾಂತರ: ಎಮ್. ಉಬೈದುಲ್ಲಾ)**

♦

# LOVE FOR HONESTY AND HATRED FOR DISHONESTY

# ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ

# ಮೋಕ್ಷವನ್ನು ಯಾವುದೇ ಧರ್ಮ ತನ್ನ ಏಕಸ್ವಾಮಿತ್ವಕ್ಕೆ ಒಳಪಡಿಸಲು ಸಾಧ್ಯವಾಗದು

♦ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಮುಸ್ಲಿಂ ಜಮಾಅತಿನ ನಾಲ್ಕನೇ ಖಲೀಫ

ಮೋಕ್ಷದ ಪ್ರಶ್ನೆಯು ಎಷ್ಟು ನಿರುಪದ್ರವಿ ಎಂದು ತೋರುವುದಾದರೂ ಲೋಕದ ಶಾಂತಿಗೆ ಅಪಾಯವನ್ನುಂಟು ಮಾಡುವ ಮಹತ್ತಾದ ಶಕ್ತಿಯನ್ನು ಅದು ಹೊಂದಿದೆ.

ಜನರು ದುಷ್ಪ್ರೇರಕ ಶಕ್ತಿಗಳಿಂದ ರಕ್ಷಣೆ ಪಡೆಯಲು ತನ್ನ ಬಳಿಗೆ ಬರಬೇಕೆಂದೂ ಅಲ್ಲಿ ಅವರು ಮೋಕ್ಷವನ್ನು ಮತ್ತು ಶಾಶ್ವತ ಪಾಪಮುಕ್ತಿಯನ್ನು ಪಡೆಯಬಹುದೆಂದೂ ಒಂದು ಧರ್ಮ ಘೋಷಿಸಬಹುದಾಗಿದೆ. ಆದರೆ ಅದೇ ಧರ್ಮ ತನ್ನ ಆಶ್ರಯವನ್ನು ಆಶಿಸಿ ಆಗಮಿಸದವರೆಲ್ಲರೂ ಶಾಶ್ವತವಾಗಿ ದೇವ ಶಾಪಕ್ಕೆ ಗುರಿಯಾಗುವವರೆಂದು ಹೇಳುವುದು ಸರಿಯಾಗದು. ಆಗಮಿಸದ ಜನರು ದೇವನನ್ನು ಎಷ್ಟು ಪ್ರೀತಿಸುತ್ತಿದ್ದರೂ ಅವನ ಸೃಷ್ಟಿಗಳನ್ನು ಪ್ರೀತಿಸುತ್ತಿದ್ದರೂ ಅವರು ಪರಿಶುದ್ಧ ಭಕ್ತಿ ಮಾರ್ಗದ ಜೀವಿತವನ್ನು ಹೊಂದಿದ್ದರೂ ಅವರೆಲ್ಲರೂ ಶಾಶ್ವತ ನರಕ ಶಿಕ್ಷೆಗೆ ಗುರಿಯಾಗುವವರು ಎಂದು ಹೇಳುವುದು ಸರಿಯಲ್ಲ.

ಇಂತಹ ಕರ್ಕಶ, ಸಂಕುಚಿತ ಮನೋಭಾವದ ಅಸಹನೆಯ ಅಭಿಪ್ರಾಯವನ್ನು ರೊಚ್ಚಿಗೆಬ್ಬಿಸುವ ರೀತಿಯ ಭಾಷೆಯನ್ನು ಬಳಸಿ ಮತಭ್ರಾಂತರು ಪ್ರಕಟಿಸುವಾಗ ಹಿಂಸಾತ್ಮಕ ಗಲಭೆ ದೊಂಬಿಗಳು ತಲೆದೋರುತ್ತವೆ.

ಜನರು ವಿವಿಧ ಆಚಾರ ವಿಚಾರಗಳನ್ನು ಹೊಂದಿದವರಾಗಿದ್ದಾರೆ. ಕೆಲವರು ವಿದ್ಯಾವಂತರೂ ಸುಸಂಕೃತರೂ ಪ್ರಗತಿಶೀಲರೂ ಆಗಿದ್ದಾರೆ. ಅಂತಹ ಜನರ ವಿರುದ್ಧ ಅಪರಾಧಗಳು ನಡೆಯುವಾಗ ಅವರ ಪ್ರತಿಕ್ರಿಯೆ ಸೌಮ್ಯವಾಗಿರುತ್ತದೆ. ಆದರೆ ಧಾರ್ಮಿಕ ಮನೋಭಾವದ ದೊಡ್ಡ ಸಂಖ್ಯೆಯ ಜನರು ವಿದ್ಯಾವಂತರೂ ವಿದ್ಯಾವಂತರಲ್ಲವಾದರೂ ಅವರ ಧಾರ್ಮಿಕ ಭಾವನೆಗಳು ನೋಯಿಸಲ್ಪಟ್ಟಾಗ ಅವರು ಹಿಂಸಾತ್ಮಕ ಪ್ರತಿಕ್ರಿಯೆ ನೀಡುವರು.

ದುರದೃಷ್ಟಕರವಾದುದೇನೆಂದರೆ, ಸಾಮಾನ್ಯವಾಗಿ ಎಲ್ಲ ಧರ್ಮಗಳ ಮತಪಂಡಿತರು ತಮ್ಮ ಧರ್ಮದ ವಿಶ್ವಾಸಕ್ಕೆ ಅನುಯೋಜ್ಯವಾಗಿ ವರ್ತಿಸದ ಜನರ ವಿರುದ್ಧ ಇದೇ ರೀತಿಯ ಮನೋಭಾವವನ್ನು ಹೊಂದಿದ್ದಾರೆ. ಇಸ್ಲಾಮ್ ಧರ್ಮದ ಬಗ್ಗೆ ಸಹ ಬಹುತೇಕ ಮಧ್ಯಕಾಲೀನ ವಿದ್ವಾಂಸರು ಅದು ಮೋಕ್ಷಕ್ಕಿರುವ ಏಕಮಾತ್ರ ಬಾಗಿಲು ಎಂದು ಪ್ರಸ್ತಾಪಿಸಿದ್ದಾರೆ. ಅವರು ಹೇಳಿದುದು ಹೀಗೆ: ಇಸ್ಲಾಮ್ ಧರ್ಮದ ಆಗಮನದ ನಂತರ ಇಸ್ಲಾಮಿನ ಹೊರಗೆ ಜೀವಿಸಿದ ಮತ್ತು ಮೃತರಾದ ಎಲ್ಲ ಮನುಷ್ಯರು ಮೋಕ್ಷ ರಹಿತರಾಗಿದ್ದಾರೆ. ಕ್ರೈಸ್ತ ಧರ್ಮ ಸಹ ಇದಕ್ಕೆ ವಿಭಿನ್ನವಾದ ಅಭಿಪ್ರಾಯ ಪ್ರಕಟಿಸುವುದಿಲ್ಲ. ನನ್ನ ತಿಳಿವಳಿಕೆ ಪ್ರಕಾರ ಯಾವುದೇ ಧರ್ಮ ಇದಕ್ಕೆ ಎದುರಾದ ಅಭಿಪ್ರಾಯ ಪ್ರಕಟಿಸುವುದಿಲ್ಲ.

ಮತಭ್ರಾಂತಿಯ ಸಂಕುಚಿತವಾದ ಈ ನಿಲುವನ್ನು ಇಸ್ಲಾಮ್ ಸಹ ಹೊಂದಿದೆ ಎಂದು ಹೇಳುವುದು ಸರಿಯಾದುದಲ್ಲ. ಪವಿತ್ರ ಖುರ್‌ಆನ್ ಈ ವಿಷಯದ ಬಗ್ಗೆ ಬೇರೆಯೇ ರೀತಿಯಲ್ಲಿ ಪ್ರಸ್ತಾಪಿಸುತ್ತದೆ.

ಪವಿತ್ರ ಖುರ್‌ಆನ್ ಪ್ರಕಾರ ಮೋಕ್ಷವನ್ನು ಯಾವುದೇ ಒಂದು ಧರ್ಮ ತನ್ನ ಏಕಸ್ವಾಮಿತ್ವಕ್ಕೆ ಒಳಪಡಿಸಲು ಸಾಧ್ಯವಿಲ್ಲ. ಹೊಸ ಸತ್ಯಗಳು ಅವತೀರ್ಣವಾದರೂ ಹೊಸ ಪ್ರಕಾಶದ ಯುಗಗಳು ಪ್ರಾರಂಭಗೊಂಡರೂ ಯಾವ ಜನರು ತಪ್ಪು ಮಾಡದೆ ಅಜ್ಞಾನದಿಂದ ಜೀವಿಸುತ್ತಿದ್ದಾರೋ ಮತ್ತು ಸತ್ಯಸಂಧವಾಗಿ ಜೀವಿಸಲು ಪ್ರಯತ್ನಿಸುತ್ತಿದ್ದಾರೋ ಅಂತಹ ಜನರು ತಪ್ಪಾದ ವಿಶ್ವಾಸಗಳನ್ನು ಪಾರಂಪರ್ಯವಾಗಿ ಗಳಿಸಿದ್ದರೂ ಅಂತಹ ಜನರನ್ನು ದೇವನು ಮೋಕ್ಷದಿಂದ ವಂಚಿತವನ್ನಾಗಿ ಮಾಡಲಾರನು.

ಪವಿತ್ರ ಖುರ್‌ಆನಿನ ಈ ಕೆಳಗಿನ ವಚನಗಳು ಇದನ್ನು ವಿಶದೀಕರಿಸುತ್ತವೆ: "ಪ್ರತಿಯೊಂದು ಜನಾಂಗಕ್ಕೂ ನಾವು ಆರಾಧನಾ ಕ್ರಮವನ್ನು ನಿಶ್ಚಯಿಸಿದ್ದೇವೆ. ಅವರು ಅದನ್ನು ಅನುಷ್ಠಿಸುತ್ತಾರೆ. ಆದ್ದರಿಂದ ಈ ಕ್ರಮದ ಬಗ್ಗೆ (ಇಸ್ಲಾಮೀ ಆರಾಧನಾ ಕ್ರಮದ ಬಗ್ಗೆ) ಅವರು ನಿನ್ನೊಡನೆ ವಾಗ್ವಾದ ಮಾಡದಿರಲಿ. ನಿನ್ನ ಪ್ರಭುವಿನ ಕಡೆಗೆ ನೀನು ಅವರನ್ನು ಆಹ್ವಾನಿಸು. ಖಂಡಿತವಾಗಿಯೂ ನೀನು ಸತ್ಪಥದಲ್ಲಿ ನಡೆಯುತ್ತಿರುವೆ." (22 : 6,8).

ಇನ್ನೊಂದು ವಚನದಲ್ಲಿ ಇದೇ ವಿಷಯವನ್ನು ಹೀಗೆ ಪ್ರಸ್ತಾಪಿಸಲಾಗಿದೆ: "ಖಂಡಿತವಾಗಿಯೂ ವಿಶ್ವಾಸಿಗಳಿಗೂ ಹಾಗೂ ಯಹೂದಿಯರು, ಸಾಬಿಗಳು, ಕ್ರೈಸ್ತರು – (ಇವರ ಪೈಕಿ) ಯಾರೇ ಆಗಲಿ, ಪ್ರಾಮಾಣಿಕವಾಗಿ ಅಲ್ಲಾಹನಲ್ಲೂ ಅಂತ್ಯ ದಿನದ ಬಗ್ಗೆಯೂ ವಿಶ್ವಾಸವಿಟ್ಟು; ಸತ್ಕಾರ್ಯಗಳನ್ನು ಮಾಡಿದರೆ ಅವರಿಗೂ ಯಾವ ಭಯವೂ ಉಂಟಾಗಲಾರದು. ಅವರಿಗೆ ಯಾವ ಶೋಕವೂ ಇರಲಾರದು." (5 : 70).

ನಾನು ಒಂದು ವಿಷಯವನ್ನು ನಿಮಗೆ ನೆನಪಿಸಿಕೊಡಲು ಬಯಸುತ್ತೇನೆ. ಪವಿತ್ರ ಖುರ್‌ಆನಿನಲ್ಲಿ ಬಳಸಲ್ಪಡುವ ಅಹ್ಲುಕಿತಾಬ್ (ಗ್ರಂಥದವರು) ಎಂಬ ಪದ ಯಹೂದಿಯರನ್ನೂ ಕ್ರೈಸ್ತರನ್ನೂ

ಸೂಚಿಸುತ್ತಿದೆಯಾದರೂ ಈ ಪದದಲ್ಲಿ ಬೇರೆ ಧರ್ಮದವರೂ ಸೇರಿದ್ದಾರೆ. ಪವಿತ್ರ ಖುರ್‌ಆನಿನ, "ಓರ್ವ ಮುನ್ನೆಚ್ಚರಿಕೆಗಾರನು ಬಂದಿರದ ಯಾವುದೇ ಜನಾಂಗವಿಲ್ಲ" (35 : 25) ಎಂಬ ವಚನ ಸೂಚಿಸುವುದೇನೆಂದರೆ, ಗ್ರಂಥ ನೀಡಲ್ಪಟ್ಟವರಲ್ಲಿ ಬೈಬಲಿನ ಹಳೆಯ ಒಡಂಬಡಿಕೆಯ ಜನರು ಮತ್ತು ಸುವಾರ್ತೆಯ ಜನರು (ತೌರಾತ್ ಮತ್ತು ಇಂಜೀಲಿನ ಜನರು) ಮಾತ್ರವಲ್ಲ, ನಿಶ್ಚಯವಾಗಿಯೂ ಬೇರೆ ಗ್ರಂಥಗಳು ಸಹ ಮಾನವರ ಹಿತಕ್ಕೋಸ್ಕರ ಅವತೀರ್ಣಗೊಳಿಸಲ್ಪಟ್ಟಿದ್ದವು. ಆದುದರಿಂದ ದೇವ ಸಂದೇಶ ಗಳಿಸಿರುವುದಾಗಿ ವಾದಿಸುವ ಎಲ್ಲ ಧರ್ಮಗಳು ಗ್ರಂಥ ನೀಡಲ್ಪಟ್ಟವರಲ್ಲಿ ಸೇರುತ್ತಾರೆ.

ಪವಿತ್ರ ಖುರ್‌ಆನ್ ಸಾಬೀ ಎಂಬ ಪದ ಬಳಸಿದೆ. ಸಾಬೀ ಪದವನ್ನು ಅರಬಿಗಳು ಅರಬಿಯೇತರ ಹಾಗೂ ಯಹೂದಿ, ಕ್ರೈಸ್ತ ಧರ್ಮಕ್ಕೆ ಸೇರದ ಧರ್ಮದವರಿಗೆ ಬಳಸುತ್ತಾರೆ. ಹೀಗಿರುವಾಗ ಅವತೀರ್ಣಗೊಂಡ ದೇವ ಸಂದೇಶಗಳ ಆಧಾರದಿಂದ ಸ್ಥಾಪಿತವಾದ ಎಲ್ಲ ಧರ್ಮಗಳು ಈ ಗುಂಪಿಗೆ ಸೇರುತ್ತವೆ. ಅವರು ಪ್ರಯತ್ನಪಟ್ಟರೂ ಹೊಸ ಧರ್ಮದ ಸತ್ಯವನ್ನು ಕಂಡುಕೊಳ್ಳಲು ಸಮರ್ಥರಾಗದಿದ್ದರೆ ಹಾಗೂ ಅವರು ತಮ್ಮ ಹಿರಿಯರ ಧರ್ಮವನ್ನು ಪ್ರಾಮಾಣಿಕವಾಗಿ ಅನುಸರಿಸುವರಾದರೆ ಅವರು ಯಾವ ಹೆದರಿಕೆಯನ್ನೂ ಹೊಂದಬೇಕಾಗಿಲ್ಲ. ಅವರಿಗೆ ದೇವನು ಮೋಕ್ಷವನ್ನು ನಿರಾಕರಿಸಲಾರನು.

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: "ಖಂಡಿತವಾಗಿಯೂ ವಿಶ್ವಾಸಿಗಳಿಗೂ ಹಾಗೂ ಯಹೂದಿಯರು, ಕ್ರೈಸ್ತರು ಮತ್ತು ಸಾಬಿಗಳೂ (ಇವರ ಪೈಕಿ) ಯಾರೇ ಆಗಲಿ ಪ್ರಾಮಣಿಕವಾಗಿ ಅಲ್ಲಾಹ್ ಮತ್ತು ಅಂತ್ಯ ದಿನದ ಬಗ್ಗೆ ನಂಬಿಕೆಯಿರಿಸಿ ಸತ್ಕರ್ಮಗಳನ್ನು ಮಾಡಿದರೆ ಅವರಿಗೂ ತಮ್ಮ ಪ್ರಭುವಿನ ಬಳಿ ಪ್ರತಿಫಲವಿದೆ. ಅವರಿಗೆ ಭಯವಾಗಲಿ ಶೋಕವಾಗಲಿ ಇರಲಾರದು." (2 : 63).

"ತೌರಾತನ್ನೂ ಇಂಜೀಲನ್ನೂ ಅವರ ಪ್ರಭುವಿನಿಂದ (ಈಗ) ಅವತೀರ್ಣವಾದುದನ್ನೂ ಅವರು ಯುಕ್ತ ರೀತಿಯುಲ್ಲಿ ಅನುಸರಿಸಿರುತ್ತಿದ್ದರೆ, ಖಂಡಿತವಾಗಿಯೂ ಅವರು ತಮ್ಮ ಮೇಲ್ಭಾಗದಿಂದಲೂ ಅವರ ಪಾದಗಳ ಕೆಳಗಿನಿಂದಲೂ (ಉತ್ತಮ ವಸ್ತುಗಳನ್ನು) ತಿನ್ನುತ್ತಿದ್ದರು. ಮಿತವಾದಿಗಳಾದ ಜನರ ಒಂದು ಸಮೂಹ (ಸಹ) ಅವರೆಡೆಯಲ್ಲಿದೆ. ಆದರೆ ಅವರಲ್ಲಿ ಹೆಚ್ಚಿನವರು ಕೆಟ್ಟದ್ದಾಗಿ ವರ್ತಿಸುವವರು." (5:67).

ಮುಸ್ಲಿಮರು ಮುಸ್ಲಿಮೇತರರನ್ನು ವಿವೇಚನ ರಹಿತವಾಗಿ ನಿಂದಿಸದಿರಲು ಪವಿತ್ರ ಖುರ್‌ಆನ್ ಹೀಗೆ ಆದೇಶಿಸಿದೆ: "ಅವರು (ಎಲ್ಲರೂ) ಒಂದೇ ರೀತಿಯವರಲ್ಲ. (ತಮ್ಮ ಒಡಂಬಡಿಕೆಯಲ್ಲಿ) ಸ್ಥಿರತೆಯುನ್ನು ತೋರಿಸುವ ಒಂದು ಗುಂಪು ಜನರು ಗ್ರಂಥದವರಲ್ಲಿದ್ದಾರೆ. ಅವರು ರಾತ್ರಿ ಸಮಯಗಳಲ್ಲಿ ಅಲ್ಲಾಹನ ವಚನಗಳನ್ನು ಓದುತ್ತಾರೆ ಮತ್ತು (ಅವನ ಮುಂದೆ) ಸಾಷ್ಟಾಂಗವೆರಗುತ್ತಾರೆ. ಅವರು ಅಲ್ಲಾಹನಲ್ಲೂ ಅಂತ್ಯ ದಿನದಲ್ಲೂ ವಿಶ್ವಾಸವಿಡುತ್ತಾರೆ; ಒಳಿತನ್ನು ಉಪದೇಶಿಸುತ್ತಾರೆ; ಕೆಡುಕನ್ನು ವಿರೋಧಿಸುತ್ತಾರೆ; ಸತ್ಕಾರ್ಯದಲ್ಲಿ ಸ್ಪರ್ಧಿಸುತ್ತಾರೆ. ಅವರು ಸಜ್ಜನರಲ್ಲಿ ಸೇರಿದವರಾಗಿದ್ದಾರೆ. ಅವರು ಮಾಡುವ ಯಾವುದೇ ಸತ್ಕಾರ್ಯ ಅವಗಣಿಸಲ್ಪಡದು. ಅಲ್ಲಾಹನು ಭಯಭಕ್ತಿ ತೋರಿಸುವವರನ್ನು ಚೆನ್ನಾಗಿ ಬಲ್ಲನು." (3:114-116).

ಮುಸ್ಲಿಮರು ಮತ್ತು ಯಹೂದಿಯರ ಮಧ್ಯೆ ಈಗ ನಡೆಯುತ್ತಿರುವ ರಾಜಕೀಯ ಪ್ರತಿಸ್ಪರ್ಧೆಯ ಕಾರಣದಿಂದ ಒಂದು ದೊಡ್ಡ ತಪ್ಪು ಗ್ರಹಿಕೆ ಉಂಟಾಗಿದೆ. ಇಸ್ಲಾಮ್ ಧರ್ಮ ಪ್ರಕಾರ ಎಲ್ಲ ಯಹೂದಿಯರು ನರಕವಾಸಿಗಳಾಗುವರು ಎನ್ನುವುದೇ ಈ ತಪ್ಪು ಗ್ರಹಿಕೆಯಾಗಿದೆ. ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನಗಳ ಮೂಲಕ ಇದು ತಪ್ಪೆಂದು ಸ್ಪಷ್ಟಗೊಳಿಸಲಾಗಿದೆ. ಇನ್ನೊಂದು ವಚನ ಹೀಗಿದೆ: "ಸತ್ಯವನ್ನನುಸರಿಸಿ ದಾರಿ ತೋರಿಸುವ ಮತ್ತು ತನ್ಮೂಲಕ ನ್ಯಾಯಪಾಲಿಸುವ ಒಂದು ಪಂಗಡ ಮೂಸಾ (ಪ್ರವಾದಿಯ) ಜನರಲ್ಲಿದ್ದಾರೆ." (7 : 160).

## ಧರ್ಮಗಳ ಮಧ್ಯೆ ಸೌಹಾರ್ದ ಮತ್ತು ಪರಸ್ಪರ ಗೌರವ ಬೆಳೆಸುವುದು

ಪವಿತ್ರ ಖುರ್‌ಆನ್ ನಿಸ್ಸಂದಿಗ್ಧವಾಗಿ ಹೀಗೆ ಘೋಷಿಸುತ್ತದೆ. ಸತ್ಯಪಾಲನೆ ಮಾಡಲು ಉಪದೇಶಿಸಿ ನ್ಯಾಯಬದ್ಧವಾಗಿ ವರ್ತಿಸುವ ಸಾತ್ವಿಕರು ಮುಸ್ಲಿಮರು ಮಾತ್ರವಲ್ಲ ಇತರ ಧರ್ಮಗಳ ಅನುಯಾಯಿಗಳಲ್ಲೂ ಹೀಗೆಯೇ ವರ್ತಿಸುವ ಜನರಿದ್ದಾರೆ.

ಎಲ್ಲ ಧರ್ಮಗಳ ಜನರು ಈ ಮನೋಭಾವವನ್ನು ಆವಶ್ಯಕವಾಗಿಯೂ ಹೊಂದಬೇಕು ಮತ್ತು ಅದರ ಮೂಲಕ ವಿವಿಧ ಧರ್ಮಗಳ ಮಧ್ಯೆ ಇರುವ ಸಂಬಂಧವನ್ನು ಉತ್ತಮಪಡಿಸಬೇಕು. ಇಂತಹ ವಿಶಾಲ ಮನೋಭಾವದ ಔದಾರ್ಯಪೂರ್ಣವೂ ಮನುಷ್ಯತ್ವ ಭರಿತವೂ ಆಗಿರುವ ಮನೋಭಾವವನ್ನು ಇತರ ಧರ್ಮದವರೊಂದಿಗೆ ಹೊಂದುವ ತನಕ ಧಾರ್ಮಿಕ ಕ್ಷೇತ್ರದಲ್ಲಿ ಶಾಂತಿ ಸ್ಥಾಪಿತವಾಗಲಾರದು.

ಲೋಕದಲ್ಲಿರುವ ಎಲ್ಲ ಧರ್ಮಗಳ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: "ನಾವು ಸೃಷ್ಟಿಸಿದವರ ಪೈಕಿಯಲ್ಲಿ ಸತ್ಯದ ಮೂಲಕ ಮಾರ್ಗದರ್ಶನ ಮಾಡುವ ಮತ್ತು ಅದರಿಂದಲೇ ನ್ಯಾಯವನ್ನು ಪಾಲಿಸುವ ಜನರ ಗುಂಪು ಸಹ ಇದೆ." (7 : 182).

## ಧರ್ಮದ ಸಾರ್ವಲೌಕಿಕತೆ

ಪುರಾತನ ಕಾಲದಿಂದ ಅನೇಕ ದಾರ್ಶನಿಕರು ಮಾನವರೆಲ್ಲರೂ ಒಂದು ಪತಾಕೆಯ ಕೆಳಗೆ ಒಂದು ಕುಟುಂಬದ ಜನರ ಹಾಗೆ ಜಮಾಯಿಸುವ ಕನಸು ಕಾಣುತ್ತಾ ಇರುತ್ತಾರೆ. ಮಾನವರ

ಒಗ್ಗೂಡುವಿಕೆಯ ಈ ಕಲ್ಪನೆಯನ್ನು ರಾಜಕೀಯ ಚಿಂತಕರು, ಆರ್ಥಿಕ ಶಾಸ್ತ್ರಜ್ಞರು ಮತ್ತು ಸಮಾಜ ಶಾಸ್ತ್ರಿಗಳು ಸಹ ಸಮಾನವಾಗಿ ಹೊಂದಿರುತ್ತಾರೆ. ಆದರೆ ಈ ಕಲ್ಪನೆಯನ್ನು ಬಲವತ್ತಾಗಿ ಕೃತಿಗಿಳಿಸಲು ಪ್ರಯತ್ನ ನಡೆದುದು ಧಾರ್ಮಿಕ ಕ್ಷೇತ್ರದಲ್ಲಿ ಹೊರತು ಬೇರೆಲ್ಲಿಯೂ ಅಲ್ಲ.

ಇತರ ಧರ್ಮಗಳ ಜೊತೆ ಇಸ್ಲಾಮ್ ಸಹ ಈ ಕಲ್ಪನೆಯನ್ನು ಹೊಂದಿದೆ. (ಆದರೆ ಇತರ ಧರ್ಮಗಳಲ್ಲಿ ಕೆಲವು ಜಾಗತಿಕ ಏಕಾಧಿಕಾರ ಗಳಿಸುವ ಹಂಬಲವನ್ನು ಹೊಂದಿದೆ). ಈ ಕಲ್ಪನೆ ಇತರ ಧರ್ಮಗಳೊಂದಿಗೆ ಇಸ್ಲಾಮ್ ಹೊಂದಿದ್ದರೂ ಇಸ್ಲಾಮ್ ಈ ಹಂಬಲದ ಬಗ್ಗೆ ವಿಶಿಷ್ಟವಾದ ನಿಲುವನ್ನು ಹೊಂದಿದೆ.

ಯಾವ ಧರ್ಮವನ್ನು ದೇವನು ಈ ಕಾರ್ಯಕ್ಕೋಸ್ಕರ ನೇಮಿಸಿರುವನು ಎಂಬ ವಿಷಯದ ಬಗ್ಗೆ ವಾಗ್ವಾದ ನಡೆಸಲು ನಾನು ಬಯಸುವುದಿಲ್ಲ. ಆದರೆ ಒಂದು ವಿಷಯವನ್ನು ಮನವರಿಕೆ ಮಾಡಕೊಳ್ಳುವುದು ಅತ್ಯಾವಶ್ಯಕವಾಗಿದೆ. ಲೋಕದಲ್ಲಿ ಒಂದಕ್ಕಿಂತ ಹೆಚ್ಚು ಧರ್ಮಗಳು ಹೀಗೆ ವಾದಿಸಿದರೆ ಅದರಿಂದುಂಟಾಗುವ ಪರಿಣಾಮಗಳ ಬಗ್ಗೆ ಮನವರಿಕೆ ಮಾಡಿಕೊಳ್ಳುವುದು ಆವಶ್ಯಕವಾಗಿದೆ. ಎರಡು, ಮೂರು ಅಥವಾ ನಾಲ್ಕು ಶಕ್ತಿಶಾಲಿ ಧರ್ಮಗಳು ದೀರ್ಘಕಾಲೀನ ಚಾರಿತ್ರಿಕ ಹಿನ್ನೆಲೆ ಹೊಂದಿದ್ದು ಅವುಗಳಲ್ಲಿ ಪ್ರತಿಯೊಂದು ತನ್ನದು ಸಾರ್ವಲೌಕಿಕ ಧರ್ಮ ಎಂದು ಘೋಷಿಸುವುದಾದರೆ ಅದರಿಂದ ಭೀಕರ ಗೊಂದಲ ಮತ್ತು ಅನಿಶ್ಚಿತತೆ ಜನರ ಮನಸ್ಸಿನಲ್ಲಿ ಉಂಟಾಗಲಾರದೆ? ಈ ಧರ್ಮಗಳ ಪರಸ್ಪರ ಸ್ಪರ್ಧೆ ಮತ್ತು ಒಂದರ ಮೇಲೆ ಇನ್ನೊಂದು ಅಧಿಕಾರ ಗಳಿಸಲು ಮಾಡುವ ಹೋರಾಟ ಜಾಗತಿಕ ಶಾಂತಿಗೆ ಹಿರಿದಾದ ಬೆದರಿಕೆ ಒಡ್ಡಲಾರದೆ?

ಧರ್ಮಗಳಲ್ಲಿ ಜಾಗತಿಕವಾಗಿ ನಡೆಸಲಾಗುವ ಇಂತಹ ಚಳುವಳಿಗಳು ಅತ್ಯಂತ ಆತಂಕಕರವಾಗಿವೆ. ಇಂತಹ ಚಳುವಳಿಗಳು ಬೇಜವಾಬ್ದಾರಿ, ಮತ ಭ್ರಾಂತ ಮತ್ತು ಅಸಹನೆಯ ನಾಯಕತ್ವಕ್ಕೆ ಅಧೀನವಾದರೆ ಅಂತಹ ಅಪಾಯಗಳು ಅನೇಕವಾಗುವುವು. ಅವುಗಳು ವಾಸ್ತವಿಕವಾಗಿ ಕಂಡು ಬರುವುವು; ಕೇವಲ ಸೈದ್ಧಾಂತಿಕವಾಗಿ ಮಾತ್ರವಲ್ಲ.

ಇಸ್ಲಾಮಿಗೆ ಸಂಬಂಧಿಸಿ ಹೇಳುವುದಾದರೆ, ಇಸ್ಲಾಮ್ ತನ್ನ ತತ್ವಗಳನ್ನು ಪ್ರಚಾರ ಮಾಡಲು ಸಾಧ್ಯವಿರುವಲ್ಲೆಲ್ಲ ಬಲಪ್ರಯೋಗ ಮಾಡುತ್ತಿದೆ ಎಂದು ವ್ಯಾಪಕವಾಗಿ ಪ್ರಚಾರ ಮಾಡಲಾಗುತ್ತಿದೆ. ಇಂತಹ ಅಭಿಪ್ರಾಯವನ್ನು ಇಸ್ಲಾಮಿನ ವಿರೋಧಿಗಳು ಮಾತ್ರವಲ್ಲ, ಮಧ್ಯಕಾಲೀನ ಕಾಲದ ಮನೋಭಾವ ಹೊಂದಿದ ಮತಪಂಡಿತರು ಸಹ ಪ್ರಕಟಿಸುತ್ತಿದ್ದಾರೆ. ಸ್ಪಷ್ಟವಾದ ವಿಷಯವೇನೆಂದರೆ, ಒಂದು ಧರ್ಮವು ಅಕ್ರಮವನ್ನು ಆಯ್ಕೆ ಮಾಡುವುದಾದರೆ ಇತರ ಧರ್ಮದವರು ಅದನ್ನು ಅದೇ ರೀತಿಯ ಆಯುಧಗಳನ್ನು ಬಳಸಿ ಪ್ರತಿರೋಧಿಸಲು ಅಧಿಕಾರ ಹೊಂದುತ್ತಾರೆ. ಇಸ್ಲಾಮ್ ಧರ್ಮ ತನ್ನ ಪ್ರಚಾರಕ್ಕೋಸ್ಕರ ಬಲಪ್ರಯೋಗ ಮಾಡಲು ಹೇಳುತ್ತದೆ ಎಂಬ ಅಭಿಪ್ರಾಯವನ್ನು ನಾನು ಬಲವತ್ತಾಗಿ ಖಂಡಿಸುತ್ತೇನೆ. ಆದರೆ ಇದರ ಬಗ್ಗೆ ವಿವರಣೆಗಳನ್ನು ಮುಂದೆ ನೀಡುವೆನು.

ಯಾವುದೇ ಧರ್ಮವು ತನ್ನದು ಸಾರ್ವಲೌಕಿಕ ಧರ್ಮವೆಂದು ಘೋಷಿಸುವುದರ ವೈಚಾರಿಕತೆ ಬಗ್ಗೆ ಮೊದಲು ಪರಿಶೀಲಿಸುವ. ಇಸ್ಲಾಮ್, ಕ್ರೈಸ್ತ ಧರ್ಮ ಮತ್ತು ಬೇರೆ ಯಾವುದೇ ಹೆಸರು ಹೊಂದಿರುವ ಧರ್ಮವು ಅದರ ತತ್ವಗಳ ಪ್ರಕಾರ ಸಾರ್ವಲೌಕಿಕವಾಗಲು ಸಾಧ್ಯವೇ? ಲೋಕದ ಎಲ್ಲ ಜನರಿಗೆ ಅವರು ಯಾವ ವರ್ಣ ಮತ್ತು ಜನಾಂಗಗಳಿಗೆ ಸೇರಿದ್ದರೂ ಅನ್ವಯಿಸುವಂತಹ ತತ್ವಗಳನ್ನು ಹೊಂದಿರುವ ಧರ್ಮ ಎಂಬ ಅರ್ಥದಲ್ಲಿ ಸಾರ್ವಲೌಕಿಕತೆ. ವಿವಿಧ ಬುಡಕಟ್ಟಿನ, ವಿವಿಧ ಗೋತ್ರಗಳ, ವಿವಿಧ ರಾಷ್ಟ್ರೀಯ ಪರಂಪರೆಯ ಸಾಮಾಜಿಕ ಆಚಾರಗಳ ಮತ್ತು ಸಾಂಸ್ಕೃತಿಕ ವೈವಿಧ್ಯಗಳ ಬಗ್ಗೆ ಏನು ಹೇಳಲಿಕ್ಕಿದೆ?

ಧರ್ಮವು ಪ್ರತಿಪಾದಿಸುವ ಸಾರ್ವಲೌಕಿಕತೆ ದೇಶೀಯ ಮತ್ತು ಭೌಗೋಳಿಕ ಗಡಿಗಳನ್ನು ದಾಟಿ ಹೋಗಬೇಕಲ್ಲದೆ ಕಾಲವನ್ನೂ ದಾಟಿ ಹೋಗುವಂತಹದಾಗಿರಬೇಕು. ಆದುದರಿಂದ ಪ್ರಶ್ನೆ ಉದಿಸುವುದೇನೆಂದರೆ, ಒಂದು ಧರ್ಮ ಕಾಲಾತೀತವಾಗಬಲ್ಲದೆ? ಎಂದರೆ ಒಂದು ಧರ್ಮದ ತತ್ವಗಳು ಈ ಕಾಲಘಟ್ಟದ ಜನರಿಗೂ ಸಾವಿರ ವರ್ಷಗಳ ಹಿಂದೆ ಇದ್ದ ಜನರಿಗೂ ಮುಂದೆ ಸಾವಿರ ವರ್ಷಗಳ ನಂತರದ ಜನರಿಗೂ ಅನುಸರಿಸಲು ಅನುಯೋಜ್ಯವಾಗಿ ಎಲ್ಲ ಕಾಲಗಳಲ್ಲಿಯೂ ಇರುವ ಜನರಿಗೆ ಅನುಸರಣೀಯವಾಗಿ ಇರಬಲ್ಲದೇ? ಒಂದು ಧರ್ಮವು ಜಾಗತಿಕವಾಗಿ ಎಲ್ಲ ಮನುಷ್ಯರಿಂದಲೂ ಅಂಗೀಕರಿಸಲ್ಪಟ್ಟರೂ ಅದು ಮುಂದಿನ ಪೀಳಿಗೆಗಳ ಜನರ ಆವಶ್ಯಕತೆಗಳನ್ನು ಈಡೇರಿಸುವ ಸಾಮರ್ಥ್ಯ ಹೊಂದಿರುವುದೇ?

ಮೇಲೆ ವಿವರಿಸಿದ ಸಮಸ್ಯೆಗಳಿಗೆ ತಮ್ಮ ಧರ್ಮ ನೀಡುವ ಪರಿಹಾರಗಳ ಬಗ್ಗೆ ವಿವರಣೆ ನೀಡುವುದು ಪ್ರತಿಯೊಂದು ಧರ್ಮದ ಅನುಯಾಯಿಗಳ ಕರ್ತವ್ಯವಾಗಿದೆ. ನಾನು ಸಂಕ್ಷಿಪ್ತವಾಗಿ ಈ ಸಮಸ್ಯೆಗಳ ಬಗ್ಗೆ ಇಸ್ಲಾಮ್ ಧರ್ಮ ನೀಡುವ ಉತ್ತರವನ್ನು ವಿವರಿಸುವೆನು.

## ಇಸ್ಲಾಮ್ ಸಾರ್ವಲೌಕಿಕ ಧರ್ಮವಾಗಿದೆ

ಪವಿತ್ರ ಖುರ್‌ಆನ್ ಪದೇ ಪದೇ ಹೀಗೆ ಸ್ಪಷ್ಟಪಡಿಸುತ್ತಿದೆ: ಇಸ್ಲಾಮ್ ಮನುಷ್ಯ ಪ್ರಕೃತಿಗೆ ಅನುಯೋಜ್ಯವಾದ ಧರ್ಮವಾಗಿದೆ. ಯಾವ ಧರ್ಮವು ಮನುಷ್ಯ ಪ್ರಕೃತಿಗೆ ಅನುಯೋಜ್ಯವಾಗಿದೆಯೋ ಅದು ಕಾಲಾತೀತವಾಗಿರುವುದು. ಏಕೆಂದರೆ ಮನುಷ್ಯ ಪ್ರಕೃತಿ ಎಂದೂ

ಬದಲಾವಣೆ ಹೊಂದಲಾರದು. ಆದುದರಿಂದ ಯಾವ ಧರ್ಮವು ಮನುಷ್ಯ ಪ್ರಕೃತಿಯಲ್ಲಿ ಬೇರೂರಿದೆಯೋ ಅದು ಎಂದೂ ಬದಲಾವಣೆ ಗೊಳಿಸಲ್ಪಡಲಾರದು. ಮನುಷ್ಯನ ತಾತ್ಕಾಲಿಕ ಅವಸ್ಥೆಗಳಿಂದ ಅದು ಪ್ರಭಾವಿತವಾಗದಿದ್ದರೆ ಮನುಷ್ಯನು ಅಭಿವೃದ್ಧಿ ಹೊಂದುತ್ತಿರುವಾಗ ಯಾವುದೇ ಕಾಲಘಟ್ಟದಲ್ಲಿ ಅದು ಬದಲಾಯಿಸಲ್ಪಡಲಾರದು. ಮನುಷ್ಯ ಪ್ರಕೃತಿಗೆ ಅನುಯೋಜ್ಯವಾದ ತತ್ವಗಳನ್ನು ಒಳಗೊಂಡಿರುವ ಧರ್ಮವು ಸಾರ್ವಲೌಕಿಕ ಧರ್ಮವಾಗುವ ಅರ್ಹತೆಯನ್ನು ಹೊಂದಿರುತ್ತದೆ ಎಂಬುದು ತರ್ಕಬದ್ಧವಾದುದಾಗಿದೆ.

ಇಸ್ಲಾಮ್ ಧರ್ಮ ಒಂದು ಹೆಜ್ಜೆ ಮುಂದೆ ಸಾಗಿದೆ. ಅದು ಅದ್ವಿತೀಯವಾದ ಮನೋಭಾವವನ್ನು ಪ್ರದರ್ಶಿಸುತ್ತಾ ಎಲ್ಲ ಧರ್ಮಗಳು ಸಾರ್ವಲೌಕಿಕತೆಯ ಗುಣವನ್ನು ಸೀಮಿತ ಮಟ್ಟದಲ್ಲಿ ಹೊಂದಿವೆ ಎಂದು ಘೋಷಿಸುತ್ತದೆ. ವಾಸ್ತವಿಕವಾಗಿ ದೇವನ ಸಂದೇಶವಾಣಿಯ ಮೂಲಕ ಸ್ಥಾಪಿತವಾದ ಪ್ರತಿಯೊಂದು ಧರ್ಮದಲ್ಲಿ ಯಾವಾಗಲೂ ಒಂದು ಮೂಲ ತತ್ವವು ಇರುತ್ತದೆ. ಅದು ಮನುಷ್ಯ ಪ್ರಕೃತಿಗೂ ಶಾಶ್ವತ ಸತ್ಯದೊಂದಿಗೂ ಜೋಡಿಸಲ್ಪಟ್ಟಿರುತ್ತದೆ. ಧರ್ಮಗಳ ಈ ಮೂಲ ತತ್ವ ಬದಲಾವಣೆ ಹೊಂದದೆ ಇರುತ್ತದೆ. ಆದರೆ ಧರ್ಮದ ಅನುಯಾಯಿಗಳು ಮುಂದೆ ಕಾಲ ದಾಟಿಹೋದ ನಂತರ ಆ ತತ್ವವನ್ನು ಕೆಡಿಸುತ್ತಾರೆ.

ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ಈ ವಿಷಯವನ್ನು ಹೀಗೆ ಚಿತ್ರೀಕರಿಸುತ್ತದೆ: "ಅವರು (ಗ್ರಂಥ ನೀಡಲ್ಪಟ್ಟವರು) ಅಲ್ಲಾಹನಿಗೆ ಸಂಪೂರ್ಣ ವಿಧೇಯರಾಗಿದ್ದುಕೊಂಡು ಅವನನ್ನು ಆರಾಧಿಸಬೇಕೆಂದು, ಋಜುಮಾರ್ಗವನ್ನು ಅವಲಂಬಿಸಬೇಕೆಂದು, ಪ್ರಾರ್ಥನೆಯನ್ನು ನಿಷ್ಠೆಯಿಂದ ಸಲ್ಲಿಸಬೇಕೆಂದು, ಝಕಾತ್ ನೀಡಬೇಕೆಂದು ಹೊರತು ಅವರೊಡನೆ ಆಜ್ಞಾಪಿಸಲಾಗಿರಲಿಲ್ಲ. ಅದೇ ಶಾಶ್ವತವಾದ ಸತ್ಯಾಧಿಷ್ಠಿತ ಧರ್ಮ." (98 : 6).

"ಆದ್ದರಿಂದ ನಿಷ್ಠೆಯಿಂದ ನಿನ್ನ ಗಮನವನ್ನೆಲ್ಲ ಧರ್ಮ ಸೇವೆಗಾಗಿ ಕೇಂದ್ರೀಕರಿಸಲು ಇದು ಅಲ್ಲಾಹನಿಂದ ರೂಪಿತವಾದ ಪ್ರಕೃತಿಯಾಗಿದೆ. ಆ ಪ್ರಕೃತಿಯನುಸಾರ ಅವನು ಮನುಷ್ಯರನ್ನು ಸೃಷ್ಟಿಸಿದ್ದಾನೆ. ಅಲ್ಲಾಹನ ಸೃಷ್ಟಿಕಾರ್ಯದಲ್ಲಿ ಏನೂ ಬದಲಾವಣೆ ಇಲ್ಲ. ಅದೇ ಸದಾ ನೆಲೆನಿಲ್ಲುವ ಸತ್ಯ ಧರ್ಮ. ಆದರೆ ಹೆಚ್ಚಿನವರು ಅದನ್ನು ತಿಳಿಯುವುದಿಲ್ಲ." (30:31).

ಮೇಲೆ ಉಲ್ಲೇಖಿಸಲಾದ ಪವಿತ್ರ ಖುರ್‌ಆನ್ ವಚನಗಳಿಗೆ ಸಂಬಂಧಿಸಿ ಹೀಗೆ ಪ್ರಶ್ನೆ ಉದಿಸಬಹುದು: ಒಂದೇ ರೀತಿಯ ಉಪದೇಶಗಳನ್ನೊಳಗೊಂಡ ಧರ್ಮಗಳನ್ನು ಒಂದರ ನಂತರ ಇನ್ನೊಂದರಂತೆ ಕಳುಹಿಸಿದುದರ ಕಾರಣವೇನು? ಎಲ್ಲ ಧರ್ಮಗಳು ಒಂದೇ ರೀತಿಯ ಬದಲಾವಣೆ ಮಾಡಲಾಗದ ಉಪದೇಶಗಳನ್ನೊಳಗೊಂಡ ಎಲ್ಲ ಕಾಲಗಳಲ್ಲೂ ಮನುಷ್ಯರಿಗೆ ಸಾರ್ವಲೌಕಿಕವಾಗಿ ಅನ್ವಯಿಸುವ ರೀತಿಯಲ್ಲಿದ್ದರೆ ಇಸ್ಲಾಮ್ ಧರ್ಮ ಮಾತ್ರ ಹೆಚ್ಚು ಪರಿಪೂರ್ಣವೂ ಸಾರ್ವಲೌಕಿಕವೂ ಆಗಿದೆ ಎಂದು ವಾದಿಸುತ್ತಿರುವುದೇಕೆ? ಎಂದು ಯಾರಾದರೂ ಆಶ್ಚರ್ಯಚಕಿತನಾಗಿ ಕೇಳಬಹುದು.

1. ಪ್ರಥಮ ಪ್ರಶ್ನೆಗೆ ಉತ್ತರ ಹೀಗಿದೆ: ಪವಿತ್ರ ಖುರ್‌ಆನ್ ಒಂದು ಚಾರಿತ್ರಿಕ ಸತ್ಯದ ಕಡೆಗೆ ಮಾನವರ ಗಮನ ಸೆಳೆಯುತ್ತದೆ. ಪವಿತ್ರ ಖುರ್‌ಆನಿಗೆ ಮೊದಲು ಅವತೀರ್ಣಗೊಂಡ ಎಲ್ಲ ಧಾರ್ಮಿಕ ಗ್ರಂಥಗಳು ಮಾನವರ ಹಸ್ತಕ್ಷೇಪಗಳಿಗೆ ಗುರಿಯಾಗಿವೆ ಎಂಬುದು ಅಖಂಡನೀಯ ಚಾರಿತ್ರಿಕ ಸತ್ಯವಾಗಿದೆ. ಹಿಂದೆ ಅವತೀರ್ಣಗೊಂಡ ಧರ್ಮ ಗ್ರಂಥಗಳು ಕ್ರಮೇಣ ಬದಲಾವಣೆಗಳಿಗೆ ಈಡಾದುವು ಅಥವಾ ಹೊಸ ವಿಷಯಗಳು ಸೇರಿಸಲ್ಪಟ್ಟವು. ಆದುದರಿಂದ ಅವುಗಳ ಅಧಿಕೃತತೆಯು ಸಂದೇಹಕರವಾದುವು ಮತ್ತು ಪ್ರಶ್ನಾರ್ಹವಾದುವು.

ತಮ್ಮ ಧಾರ್ಮಿಕ ಗ್ರಂಥಗಳಲ್ಲಿ ಯಾವುದೇ ಹಸ್ತಕ್ಷೇಪ ನಡೆದಿಲ್ಲ ಎಂದು ಒಂದು ಧರ್ಮದ ಅನುಯಾಯಿಗಳು ವಾದಿಸುವರಾದರೆ ಅದರ ಬಗ್ಗೆ ಸಾಕ್ಷ್ಯಾಧಾರಗಳನ್ನು ಒದಗಿಸುವ ಹೊಣೆಗಾರಿಕೆ ಅವರ ಮೇಲಿದೆ. ಪವಿತ್ರ ಖುರ್‌ಆನ್ ಬಗ್ಗೆ ಹೇಳುವುದಾದರೆ, ಅದು ದೈವಿಕ ಗ್ರಂಥಗಳಲ್ಲಿ ಅದ್ವಿತೀಯ ಸ್ಥಾನವನ್ನು ಪಡೆದಿದೆ. ಪವಿತ್ರ ಖುರ್‌ಆನ್ ದೇವನ ವಚನ ಗ್ರಂಥ ಎಂದು ನಂಬದಂತಹ ಇಸ್ಲಾಮಿನ ಕಠಿಣ ಶತ್ರುಗಳು ಕೂಡ ಪವಿತ್ರ ಖುರ್‌ಆನ್ ಯಾವುದೇ ಬದಲಾವಣೆಗೆ ಗುರಿಯಾಗದ, ದೇವನ ವಚನವೆಂದು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ವಾದಿಸಿದ ಗ್ರಂಥವೆಂದು ಅಂಗೀಕರಿಸಿದ್ದಾರೆ.

ಉದಾಹರಣೆಗೆ ಸರ್ ಮಿಲ್‌ಯಮ್ ಮ್ಯೂರ್ ಹೀಗೆ ಹೇಳಿದ್ದಾರೆ: "ಮುಹಮ್ಮದ್ ಸ್ವತಃ ಪ್ರಕಟಿಸಿದ ಮತ್ತು ಉಪಯೋಗಿಸಿದ ಅದೇ ಮೂಲ ಗ್ರಂಥ ಇದು ಎಂಬುದರ ಬಗ್ಗೆ ಎಲ್ಲ ರೀತಿಯ ಆಂತರಿಕ ಮತ್ತು ಬಾಹ್ಯ ಖಾತರಿ ನಮಗೆ ಲಭಿಸಿದೆ." (ಲೈಫ್ ಆಫ್ ಮುಹಮ್ಮದ್ ಪುಟ XXVII).

"ಖುರ್‌ಆನಿನ ಪ್ರತಿಯೊಂದು ವಚನ ಸಾಚಾ ಎಂದೂ ಮುಹಮ್ಮದ್ ಸ್ವತಃ ರಚಿಸಿದ, ಬದಲಾಯಿಸಲ್ಪಡದ ವಚನ ಎಂದೂ ಬಲಿಷ್ಠವಾದ ಅನುಮಾನದ ಮೂಲಕ ದೃಢೀಕರಿಸುತ್ತೇವೆ." (ಲೈಫ್ ಆಫ್ ಮುಹಮ್ಮದ್ ಪುಟ XXVIII).

ಪ್ರೊಫೆಸರ್ ನೋಲ್ ಡೀಕ್ ಹೀಗೆ ಹೇಳಿದ್ದಾರೆ: "ಬರಹಗಾರನ ಚಿಕ್ಕಪುಟ್ಟ ತಪ್ಪುಗಳು ಇರಬಹುದಾದರೂ ಉಸ್ಮಾನ್ ಪ್ರಕಟಿಸಿದ ಖುರ್‌ಆನ್ ಕೆಲವು ಸಾರಿ ವಿಚಿತ್ರವಾಗಿ ಕ್ರಮೀಕರಿಸಲಾಗಿದ್ದರೂ ಸಾಚಾ ಆಗಿದೆ. ಖುರ್‌ಆನಿನಲ್ಲಿ ಅನಂತರ ಏನಾದರೂ ಸೇರಿಸಲಾಗಿದೆ ಎಂದು ಸಾಬೀತುಗೊಳಿಸಲು ಪಾಶ್ಚಿಮಾತ್ಯ ವಿದ್ವಾಂಸರು ನಡೆಸಿದ ಪ್ರಯತ್ನಗಳು ವಿಫಲಗೊಂಡಿವೆ." (ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕ – 9ನೇ ಮುದ್ರಣ, ಶೀರ್ಷಿಕೆ 'ಖುರ್‌ಆನ್').

ಯಾವ ದೈವಿಕ ಗ್ರಂಥ ಯಾರಿಂದ ಬರೆಯಲಾಯಿತು ಎಂಬ ವಿಷಯದ ಬಗ್ಗೆ ಚರ್ಚೆ ಇಲ್ಲಿ ಪ್ರಸ್ತುತವಲ್ಲ. ಪವಿತ್ರ ಖುರ್‌ಆನ್ ದೇವನ ವಚನವೆಂದು ವಾದಿಸುವುದನ್ನು ಪ್ರಶ್ನಿಸಿದ ಗ್ರಂಥ ನೀಡಲ್ಪಟ್ಟ ಜನರ ಗ್ರಂಥಗಳ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಸಾಕ್ಷ್ಯ ಹೇಳುತ್ತದೆ: ತೌರಾತ್ ಮತ್ತು ಇಂಜೀಲ್ (ಹಳೆಯ ಒಡಂಬಡಿಕೆ ಮತ್ತು ಸುವಾರ್ತೆಗಳು) ದೇವನಿಂದ ಭಾಗಶಃ ರಚಿಸಲ್ಪಟ್ಟಿವೆ. ಅಲ್ಲದೆ ಲೋಕದ ವಿವಿಧ ಭಾಗಗಳಲ್ಲಿರುವ ಧರ್ಮಗಳ ಗ್ರಂಥಗಳು ಸಹ ದೇವನಿಂದ ರಚಿಸಲ್ಪಟ್ಟಿವೆ. ಅವುಗಳಲ್ಲಿರುವ ವೈರುದ್ಧ್ಯಗಳು ಮಾನವರ ಹಸ್ತಕ್ಷೇಪದಿಂದ ಉಂಟಾದವುಗಳಾಗಿವೆ. ಪವಿತ್ರ ಖುರ್‌ಆನಿನ ನಿಲುವು ವಾಸ್ತವಿಕತೆಗೆ ಅತ್ಯಂತ ನಿಕಟವೂ ಧರ್ಮಗಳ ಮಧ್ಯೆ ಶಾಂತಿ ಸ್ಥಾಪಿಸಲು ಸಹಾಯಕವೂ ಆಗಿದೆ ಎಂದು ಹೇಳುವ ಆವಶ್ಯಕತೆ ಇದೆಯೇ?

2. ಎರಡನೆಯ ಪ್ರಶ್ನೆಗೆ ಉತ್ತರವಾಗಿ ಪವಿತ್ರ ಖುರ್‌ಆನ್ ಮಾನವ ಸಮಾಜದ ಎಲ್ಲ ಕ್ಷೇತ್ರಗಳಲ್ಲೂ ವಿಕಾಸದ ಪ್ರಕ್ರಿಯೆ ಬಗ್ಗೆ ನಮ್ಮ ಗಮನ ಸೆಳೆಯುತ್ತದೆ. ಹೊಸ ಧರ್ಮಗಳು ಆವಶ್ಯಕವಾಗುವುದು ಮಾನವರ ಹಸ್ತಕ್ಷೇಪಕ್ಕೊಳಗಾದ ಹಳೆಯ ಧರ್ಮಗಳ ಮೂಲ ವಿಶ್ವಾಸಗಳನ್ನು ಪುನಃ ಸ್ಥಾಪಿಸಲು ಮಾತ್ರವಲ್ಲ ವಿಕಾಸಗೊಳ್ಳುತ್ತಿರುವ, ಅಭಿವೃದ್ಧಿಗೊಳ್ಳುತ್ತಿರುವ ಸಾಮಾಜಿಕ ಸ್ಥಿತಿಗೆ ಅನುಸಾರವಾಗಿ ಹೊಸದಾದ ಹೆಚ್ಚು ಉಪದೇಶಗಳನ್ನು ಧರ್ಮದಲ್ಲಿ ಅಳವಡಿಸಿ ಅಭಿವೃದ್ಧಿಯ ವೇಗದೊಂದಿಗೆ ಸಮನ್ವಯತೆಯನ್ನು ಸ್ಥಾಪಿಸಲಿಕ್ಕಾಗಿದೆ.

3. ಇದು ಮಾತ್ರವಲ್ಲ. ಬದಲಾವಣೆಯ ಪ್ರಕ್ರಿಯೆ ಜಾರಿಗೊಳ್ಳಲು ಇನ್ನೊಂದು ಕಾರಣವೇನೆಂದರೆ, ಕೆಲವು ಧರ್ಮಗಳ ಉಪದೇಶಗಳು ತಾತ್ಕಾಲಿಕ ಆವಶ್ಯಕತೆಗಳಿಗಾಗಿದ್ದುವು. ಕೆಲವು ಜನಾಂಗಗಳ ಆವಶ್ಯಕತೆಗಳನ್ನು ಈಡೇರಿಸಲು ಮತ್ತು ಕೆಲವು ಕಾಲಘಟ್ಟಗಳ ಆವಶ್ಯಕತೆಗಳನ್ನು ಈಡೇರಿಸಲು ಆ ಉಪದೇಶಗಳು ಅವತೀರ್ಣಗೊಂಡುವು. ಇದರಿಂದ ತಿಳಿಯುವುದೇನೆಂದರೆ, ಧರ್ಮಗಳಲ್ಲಿ ಬದಲಾಯಿಸಲ್ಪಡದ ಮೂಲ ತತ್ವಗಳೊಂದಿಗೆ ಕೆಲವು ತಾತ್ಕಾಲಿಕವಾಗಿ ಪಾಲಿಸಬೇಕಾದ ಉಪದೇಶಗಳೂ ಸೇರಿರುತ್ತವೆ.

4. ಕೊನೆಯದಾಗಿ ಹೇಳಲಿಕ್ಕಿರುವುದೇನೆಂದರೆ, ಮನುಷ್ಯನಿಗೆ ದಿವ್ಯಜ್ಞಾನವು ಒಂದೇ ನೆಗೆತದ ಮೂಲಕ ದೊರಕುವುದಿಲ್ಲ. ಮನುಷ್ಯನನ್ನು ಹೆಜ್ಜೆ ಮೇಲೆ ಹೆಜ್ಜೆ ಹಾಕಿ ನಡೆಯುವಂತೆ ಮಾಡಿ ಮಾನಸಿಕ ಪಕ್ವತೆ ಗಳಿಸುವಂತೆ ಮಾಡಲಾಗುತ್ತದೆ. ಮನುಷ್ಯನು ಪರಿಪೂರ್ಣ ಬೆಳವಣಿಗೆ ಹೊಂದಿ ಎಲ್ಲ ಮೂಲಭೂತ ಧಾರ್ಮಿಕ ತತ್ವಗಳನ್ನು ಪಡೆಯಲು ಸಾಮರ್ಥ್ಯ ಗಳಿಸುವಾಗ ಅವನಿಗೆ ಆವಶ್ಯಕವಾದ ಸಂಪೂರ್ಣ ಮಾರ್ಗದರ್ಶನ ನೀಡಲಾಗುತ್ತದೆ. ಪವಿತ್ರ ಖುರ್‌ಆನಿನ ಪ್ರಕಾರ, ಅಂತಿಮ, ಪರಿಪೂರ್ಣ, ಸಮಗ್ರ ಧರ್ಮವಾದ ಇಸ್ಲಾಮ್‌ಗೆ ಮೊದಲು ಶಾಶ್ವತ ಮೂಲ ತತ್ವಗಳೊಂದಿಗೆ ತಾತ್ಕಾಲಿಕವಾಗಿ ಜಾರಿಯಲ್ಲಿರಿಸಬೇಕಾದ ಉಪದೇಶಗಳೊಂದಿಗೆ ಧರ್ಮಗಳು ಸ್ಥಾಪಿಸಲ್ಪಟ್ಟವು. ಹೀಗೆ ಸ್ಥಾಪಿಸಲ್ಪಟ್ಟ ಧರ್ಮಗಳಲ್ಲಿದ್ದ ಪ್ರಾದೇಶಿಕ ಅಥವಾ ತಾತ್ಕಾಲಿಕ ಸ್ವರೂಪದ ಉಪದೇಶಗಳು ರದ್ದುಗೊಳಿಸಲ್ಪಟ್ಟವು ಅಥವಾ ಬಿಟ್ಟುಬಿಡಲಾಯಿತು. ಆ ಧರ್ಮಗಳಲ್ಲಿದ್ದ ಇನ್ನು ಮುಂದೆಯೂ ಆವಶ್ಯಕವಾದ ಉಪದೇಶಗಳನ್ನು ಕಾಪಾಡಿ ಇಟ್ಟುಕೊಳ್ಳಲಾಯಿತು.*

ಇಸ್ಲಾಮ್ ಪ್ರತಿಪಾದಿಸುವ ಮತ್ತು ಅದು ತನ್ನಲ್ಲಿ ಇದೆ ಎಂದು ವಾದಿಸುವ ಸಾರ್ವಲೌಕಿಕತೆಯ ಮುಖ್ಯ ಅಂಶಗಳು ಮೇಲೆ ವಿವರಿಸಿದವುಗಳಾಗಿವೆ. ಬೇರೆ ಬೇರೆ ಧರ್ಮಗಳು ತಮ್ಮದು ಸಾರ್ವಲೌಕಿಕ ಧರ್ಮವೆಂದು ವಾದಿಸುವಾಗ ಅವುಗಳು ಹಾಗೆ ವಾದಿಸಲು ಅರ್ಹತೆ ಹೊಂದಿವೆಯೋ ಎಂದು ಪರಿಶೀಲಿಸುವುದು ಮನುಷ್ಯರ ಕರ್ತವ್ಯವಾಗಿದೆ.

ಇಸ್ಲಾಮಿನ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: “ಹೇಳು, ಎಲೈ ಮನುಷ್ಯರೇ, ದಿಟವಾಗಿಯೂ ನಾನು ನಿಮ್ಮೆಲ್ಲರೆಡೆಗೆ ಅಲ್ಲಾಹನ ಸಂದೇಶವಾಹಕನಾಗಿ ನಿಯೋಜಿತನಾಗಿದ್ದೇನೆ. ಆಕಾಶಗಳ ಮತ್ತು ಭೂಮಿಯ ಒಡೆತನ ಅವನದ್ದಾಗಿದೆ. ಅವನ ಹೊರತು ಬೇರೆ ದೇವನಿಲ್ಲ. ಅವನೇ ಜೀವಂತಗೊಳಿಸುತ್ತಾನೆ ಹಾಗೂ ಮೃತಪಡಿಸುತ್ತಾನೆ. ಆದ್ದರಿಂದ ನೀವು ಅಲ್ಲಾಹನಲ್ಲಿ ವಿಶ್ವಾಸವಿಡಿರಿ. ಹಾಗೆಯೇ ಅಲ್ಲಾಹನಲ್ಲೂ ಅವನ ವಚನಗಳನ್ನು ನಂಬುವ ಅನಕ್ಷರಸ್ಥ ಪ್ರವಾದಿಯಾದ ಅವನ ಸಂದೇಶವಾಹಕನಲ್ಲೂ ವಿಶ್ವಾಸವಿಡಿರಿ. ನೀವು ಸರಿಯಾದ ಮಾರ್ಗವನ್ನು ಪಡೆಯಲಿಕ್ಕಾಗಿ ಅವರನ್ನು ಅನುಸರಿಸಿರಿ.” (7:159).

ಸಂಘರ್ಷಗಳನ್ನೂ ತಪ್ಪುಗ್ರಹಿಕೆಗಳನ್ನೂ ಮುಂಚಿತವಾಗಿ ತಡೆಯಲು ಇಸ್ಲಾಮ್ ಮನುಷ್ಯರ ನಡೆವಳಿಕೆಗಳನ್ನು ನಿಯಂತ್ರಿಸಲು ಸ್ಪಷ್ಟವಾದ ನಿಯಮಗಳನ್ನು ರೂಪಿಸಿ ಉತ್ತಮ ವರ್ತನೆ, ನ್ಯಾಯಪಾಲನೆ, ಅಭಿಪ್ರಾಯ ಸ್ವಾತಂತ್ರ್ಯ, ಭಿನ್ನಾಭಿಪ್ರಾಯ ಸೂಚಿಸುವ ಸ್ವಾತಂತ್ರ್ಯವನ್ನು ಎಲ್ಲರಿಗೂ ಸಮಾನವಾಗಿ ಖಾತರಿಪಡಿಸಿದೆ. ♦

* ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 14ರಿಂದ 16 ನೋಡಿರಿ.

**“ದೇಶಪ್ರೇಮ (ಧಾರ್ಮಿಕ) ವಿಶ್ವಾಸದ ಅಂಶವಾಗಿದೆ.”**

**– ಹಝ್ರತ್ ಮುಹಮ್ಮದ್ ಪೈಗಂಬರ್(ಸ)**

# ಇಸ್ಲಾಮಿನ ಸತ್ಯಸಾಕ್ಷ್ಯ – 2

**ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ (ದ್ವಿತೀಯ ಖಲೀಫ)ರವರ ಭಾಷಣ**

## ಅಲ್ಲಾಹನೊಂದಿಗೆ ಸಂಬಂಧವನ್ನು ಹೇಗೆ ಸ್ಥಾಪಿಸಲು ಸಾಧ್ಯ?

ಅಲ್ಲಾಹನೊಂದಿಗೆ ಸಂಬಂಧವನ್ನು ಯಾವ ಮಾರ್ಗಗಳ ಮೂಲಕ ಸ್ಥಾಪಿಸಲು ಸಾಧ್ಯ ಎಂದು ನೋಡುವ. ಲೋಕದಲ್ಲಿ ಯಾರೊಂದಿಗಾದರೂ ಸಂಬಂಧ ಸ್ಥಾಪಿತವಾಗುವುದು ಎರಡು ರೀತಿಗಳಲ್ಲಾಗಿದೆ. ಸಂಬಂಧ ಸ್ಥಾಪನೆ ಆಗುವುದು ಪ್ರೀತಿಯ ಮೂಲಕವಾಗಿರುತ್ತದೆ ಅಥವಾ ಭಯದ ಮೂಲಕವಾಗಿರುತ್ತದೆ. ನಾವು ನೋಡುವ – ಅಲ್ಲಾಹನೊಂದಿಗೆ ಪರಿಪೂರ್ಣವಾದ ಪ್ರೀತಿ ಮತ್ತು ಭಯದ ಸಂಬಂಧ ಸ್ಥಾಪಿಸುವ ಉಪದೇಶಗಳನ್ನು ಇಸ್ಲಾಮ್ ನೀಡಿದೆಯೋ ಇಲ್ಲವೋ ಎಂದು. ಅಂತಹ ಉಪದೇಶಗಳನ್ನು ನೀಡಿದ್ದರೆ ಸಾಬೀತಾಗುವುದೇನೆಂದರೆ, ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸುವ ಸರಿಯಾದ ಮಾರ್ಗ ತೋರಿಸುವ ಧರ್ಮ ಇಸ್ಲಾಮ್ ಆಗಿದೆ ಎಂದು. ಆದರೆ ಹಾಗೆ ಸಾಬೀತಾಗುವುದಿಲ್ಲವಾದರೆ ಇಸ್ಲಾಮ್‌ಗಿಂತ ಬೇರೆಯಾದ ಧರ್ಮವನ್ನು ಹುಡುಕಬೇಕಾದೀತು.

## ಪವಿತ್ರ ಖುರ್‌ಆನ್ ಈ ಮಾರ್ಗಗಳನ್ನು ಹೇಗೆ ಸ್ಪಷ್ಟಪಡಿಸಿದೆ?

ನಾನು ಪವಿತ್ರ ಖುರ್‌ಆನ್ ಬಗ್ಗೆ ಸವಿವರವಾಗಿ ಪ್ರತಿಪಾದಿಸದೆ ಕೇವಲ ಸೂರತುಲ್ ಫಾತಿಹ ಬಗ್ಗೆ ವಿವರಿಸುವೆನು. ಇದು ಪವಿತ್ರ ಖುರ್‌ಆನಿನ ಪ್ರಥಮ ಅಧ್ಯಾಯವಾಗಿದೆ. ಇದರಲ್ಲಿ ಕೇವಲ ಏಳು ವಚನಗಳಿವೆ. ಲೋಕದ ಎಲ್ಲ ದಾರ್ಶನಿಕ ಶಾಸ್ತ್ರಗಳು ಒಮ್ಮತದಿಂದ ಹೇಳುವುದೇನೆಂದರೆ, ಬಾಂಧವ್ಯ ಸ್ಥಾಪನೆಗೆ ಪ್ರೀತಿ ಮತ್ತು ಭಯದ ಆವಶ್ಯಕತೆ ಇದೆ. ಉದಾಹರಣೆಗೆ, ಬೆಳಗ್ಗೆ ಮಗುವನ್ನು ಕಲಿಯಲು ಕಳುಹಿಸುವಾಗ ಮೊದಲು ಪ್ರೀತಿಯಿಂದ ಹೇಳಲಾಗುತ್ತದೆ – "ಮಗು, ನೀನು ಕಲಿಯಲು ಹೋಗು." ಮಗು ಎದ್ದ ಕೂಡಲೆ, ಮುಖಕ್ಕೆ ಹೊಡೆದು ನೀನು ಶಾಲೆಗೆ ಹೋಗು ಎಂದು ಯಾರೂ ಹೇಳುವುದಿಲ್ಲ. ಮಗು ಶಾಲೆಗೆ ಹೋಗಲು ಸಿದ್ಧನಾಗದಿದ್ದರೆ ಅದಕ್ಕೆ ಮಿಠಾಯಿ ಕೊಟ್ಟು ಅಥವಾ ಕಲಿತು ಬಂದ ನಂತರ ಮಿಠಾಯಿ ಕೊಡುತ್ತೇನೆ ಎಂದು ಹೇಳಲಾಗುತ್ತದೆ. ಆಗಲೂ ಅದು ಒಪ್ಪದಿದ್ದರೆ ಹೊಡೆಯಲಾಗುತ್ತದೆ. ಎಂದರೆ ಮಗುವನ್ನು ಪ್ರೀತಿಯಿಂದ ಅಥವಾ ಭಯಪಡಿಸಿ ಶಾಲೆಗೆ ಕಳುಹಿಸಲಾಗುವುದು. ಪವಿತ್ರ ಖುರ್‌ಆನ್ ಈ ಸಹಜ ರೀತಿಯನ್ನು ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸುವುದಕ್ಕೆ ಸಂಬಂಧಿಸಿ ಬಳಸಿದೆಯೋ ಇಲ್ಲವೋ ಎಂದು ನೋಡುವ. ಪವಿತ್ರ ಖುರ್‌ಆನಿನ ಈ ಅಧ್ಯಾಯದ ಆರಂಭದಲ್ಲಿ ಅಲ್‌ಹಮ್‌ದುಲಿಲ್ಲಾಹ್ (ಅಲ್ಲಾಹನಿಗೆ ಸರ್ವಸ್ತುತಿಗಳು) ಎಂದು ಹೇಳಿ ಅಲ್ಲಾಹನ ಬಗ್ಗೆ ಪ್ರೀತಿಯನ್ನು ಸೂಚಿಸಲಾಗಿದೆ. ಇದರಿಂದ ತಿಳಿಯುವುದೇನೆಂದರೆ, ಬಹಳ ಸಂಶೋಧನೆಯ ನಂತರ ಕಂಡುಹಿಡಿದ ಸತ್ಯವನ್ನು ಪವಿತ್ರ ಖುರ್‌ಆನ್ ಬಹಳ ಹಿಂದೆಯೇ ಪ್ರಸ್ತಾಪಿಸಿದೆ. ಸಂಬಂಧಕ್ಕೆ ಎರಡು ಕಾರಣಗಳಿರುತ್ತವೆ. ಯಾವುದಾದರೂ ವಸ್ತು ಪ್ರಿಯಕರವಾಗಿರುತ್ತದೆ ಅಥವಾ ಅದರಿಂದ ಪ್ರಯೋಜನ ಸಿಗುತ್ತದೆ. ಆಂಗ್ಲ ಭಾಷೆ ಬಲ್ಲವರಿಗೆ ಒಂದು ಗಾದೆಯ ಬಗ್ಗೆ ತಿಳಿದಿದೆ – ಒಳಿತನ್ನು ಒಳಿತಿಗೋಸ್ಕರ ಸ್ವೀಕರಿಸಬೇಕು ಎಂದು. ಇವುಗಳ ಬಗ್ಗೆ ಪವಿತ್ರ ಖುರ್‌ಆನ್ ಏನು ಹೇಳುತ್ತದೆ ಎಂದು ನೋಡುವ.

## ಸೂರತುಲ್ ಫಾತಿಹದ ಸೂಕ್ಷ್ಮ ವ್ಯಾಖ್ಯಾನ

ಸೂರತುಲ್ ಫಾತಿಹದಲ್ಲಿ ಈ ಎರಡು ತತ್ವಗಳನ್ನು ಪ್ರತಿಪಾದಿಸಲಾಗಿದೆ. ಅದರಲ್ಲಿ ಎಂತಹ ಮೂಲ ತತ್ವಗಳಿವೆ ಎಂದರೆ ಅವುಗಳನ್ನು ಅನುಷ್ಠಾನಕ್ಕೆ ತಂದ ಮನುಷ್ಯನಿಗೆ ಅಲ್ಲಾಹನೊಂದಿಗೆ ಸಂಬಂಧ ಸ್ಥಾಪನೆಯಾಗದಿರಲು ಸಾಧ್ಯವಿಲ್ಲ. ಸೂರತುಲ್ ಫಾತಿಹದಲ್ಲಿ ಅಲ್‌ಹಮ್‌ದುಲಿಲ್ಲಾಹ್ – ಎಲ್ಲ ಸ್ತುತಿಗಳು ಅಲ್ಲಾಹನಿಗೆ ಎಂದು ಹೇಳಲಾಗಿದೆ. ಅಲ್ಲಾಹ್ – ಯಾವುದೇ ನ್ಯೂನತೆಗಳಿಲ್ಲದೆ ಎಲ್ಲ ಒಳಿತುಗಳ ಸಂಗ್ರಹವಾಗಿರುವವನು ಎಂದು ಅರ್ಥ. ಲೋಕದಲ್ಲಿ ಜನರು ಎಂತಹ ವಸ್ತುಗಳನ್ನು ಪ್ರೀತಿಸುತ್ತಾರೆಂದರೆ ಅವು ಎಲ್ಲ ಒಳಿತುಗಳನ್ನು ಹೊಂದಿರುವುದಿಲ್ಲ. ಅವುಗಳಲ್ಲಿ ಯಾವುದೇ ನ್ಯೂನತೆ ಇಲ್ಲದಿರುವುದೂ ಇಲ್ಲ. ಉದಾಹರಣೆಗೆ, ಸ್ತ್ರೀಯರನ್ನು ಪ್ರೇಮಿಸುವವರನ್ನು ನೋಡಿರಿ. ಒಬ್ಬನು ಒಬ್ಬ ಸ್ತ್ರೀಯನ್ನು ಪ್ರೀತಿಸುವಾಗ ಆ ಸ್ತ್ರೀ ಸೌಂದರ್ಯವತಿಯಾಗಿರಬೇಕೆಂದೇನೂ ಇಲ್ಲ. ಒಂದು ಕಥೆ ಪ್ರಸಿದ್ಧವಾಗಿದೆ. ಲೈಲಾಳನ್ನು ಒಬ್ಬನು ನೋಡಿದ ನಂತರ ಅವಳನ್ನು ಪ್ರೇಮಿಸುತ್ತಿದ್ದ ಮಜ್ನೂನ್‌ನೊಂದಿಗೆ ಹೇಳಿದನು: ಲೈಲಾ ಸೌಂದರ್ಯವತಿಯೇನೂ ಅಲ್ಲ. ಹೀಗಿರುವಾಗ ನೀನು ಏಕೆ ಆಕೆಯನ್ನು ಪ್ರೇಮಿಸುತ್ತಿರುವೆ? ಆಗ ಮಜ್ನೂನ್ ಹೇಳಿದನು: ಲೈಲಾಳನ್ನು ನನ್ನ ಕಣ್ಣುಗಳಿಂದ ನೋಡಬೇಕು. ಇದರ ಬಗ್ಗೆ ಫಾರ್ಸಿ ಭಾಷೆಯಲ್ಲಿ ಹೇಳುತ್ತಾರೆ: **ಲೈಲಾ ರಾ ಬಚಶ್ಮೆ ಮಜ್‌ನೂನ್ ಬಾಇದ್ ದೀದ್** (ಲೈಲಾಳನ್ನು ಮಜ್ನೂನ್‌ನ ಕಣ್ಣುಗಳಿಂದ ನೋಡಬೇಕು). ಆದುದರಿಂದ ಯಾವುದೇ ಸ್ತ್ರೀ ಎಲ್ಲ ಸೌಂದರ್ಯಗಳ ಸಂಗ್ರಹವಾಗಲಾರಳು. ಯಾವುದೇ ಕುಂದುಕೊರತೆ ಇಲ್ಲದ ಬೇರೆ ವಸ್ತುಗಳನ್ನು ಕಾಣಲು ಸಾಧ್ಯವಿಲ್ಲ. ಆದರೆ ಅಲ್ಲಾಹನು ಎಲ್ಲ ಒಳಿತುಗಳ ಸಂಗ್ರಹ ಮತ್ತು ಎಲ್ಲ ಲೋಪ ದೋಷಗಳಿಂದ ಮುಕ್ತನು. ಆದುದರಿಂದ ಅಲ್ಲಾಹನು ಎಲ್ಲ ಒಳಿತುಗಳ ಸಂಗ್ರಹ ಎಂದು ಹೇಳಲಾಗಿದೆ. ನಾವು ಚಂದ್ರನನ್ನು ನೋಡಿ ಸಂತೋಷಪಡುತ್ತೇವೆ. ಸುಂದರವಾಗಿ ಕಾಣುವ ಪರ್ವತಗಳನ್ನು ನೋಡಿ ಸಂತೋಷಪಡುತ್ತೇವೆ. ಇದಕ್ಕೆ ಕಾರಣ ಅವು ನಮಗೇನನ್ನಾದರೂ ಕೊಡುವುದರಿಂದಲ್ಲ. ಅವು ಸ್ವತಃ ಸುಂದರವಾಗಿರುವುದರಿಂದ ಹೀಗೆ ನಾವು ಸಂತೋಷಪಡುತ್ತೇವೆ. ಅಲ್ಲಾಹನು ಹೇಳುತ್ತಾನೆ: ಅಲ್‌ಹಮ್‌ದುಲಿಲ್ಲಾಹಿ ರಬ್ಬಿಲ್ ಆಲಮೀನ್.

ಹೇ ಮನುಷ್ಯ, ನೀನು ವಸ್ತುಗಳ ವ್ಯಕ್ತಿಗತ ಸೌಂದರ್ಯದ ಕಾರಣ ಅವುಗಳನ್ನು ಪ್ರೀತಿಸುವಿಯಾದರೆ ನೀನು ಬಾ, ನಾನು ನಿನಗೆ ಹೇಳುತ್ತೇನೆ– ಇಸ್ಲಾಮ್ ಯಾವ ದೇವನನ್ನು ತೋರಿಸುತ್ತದೆಯೋ ಅವನು ಎಲ್ಲ ನ್ಯೂನತೆಗಳಿಂದ ಮುಕ್ತನಾಗಿದ್ದಾನೆ; ಎಲ್ಲ ಒಳಿತುಗಳನ್ನು ಒಳಗೊಂಡವನಾಗಿದ್ದಾನೆ. ಆದರೆ ಎಲ್ಲ ಮನುಷ್ಯ ಪ್ರಕೃತಿಗಳು ಕೇವಲ ಒಂದು ವಸ್ತು ಚೆನ್ನಾಗಿರುವ ಕಾರಣ ಪ್ರೀತಿಸಲಾರವು. ನಮಗೆ ಅದರಿಂದ ಪ್ರಯೋಜನ ಸಹ ದೊರಕಬೇಕೆಂದು ಆಶಿಸುತ್ತಾರೆ. ಇಂತಹ ಜನರಿಗೋಸ್ಕರ ಅಲ್ಲಾಹನು ಹೇಳುತ್ತಾನೆ: ಅಲ್‌ಹಮ್‌ದುಲಿಲ್ಲಾಹಿ ರಬ್ಬಿಲ್ ಆಲಮೀನ್. (ಎಲ್ಲ ಸ್ತುತಿ ಸರ್ವ ಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ).

ನಿಮಗೆ ಸೌಂದರ್ಯದೊಂದಿಗೆ ಔದಾರ್ಯವೂ ಆವಶ್ಯಕವಾದರೆ ನಿಮಗೆ ಯಾವ ದೇವನನ್ನು ಇಸ್ಲಾಮ್ ತೋರಿಸಿಕೊಡುತ್ತದೆ ಎಂದರೆ ಅವನು ನಿಮ್ಮನ್ನು ಕೆಳಮಟ್ಟದಿಂದ ಅಭಿವೃದ್ಧಿ ನೀಡಿ ನಿಮ್ಮನ್ನು ಉನ್ನತ ಸ್ಥಾನಕ್ಕೆ ತಲಪಿಸುತ್ತಾನೆ. ಮನುಷ್ಯನ ದೇಹಭಾಗಗಳು ಅಕ್ಕಿ, ಗೋದಿ, ಜೋಳ, ಕಡಲೆ, ಬೇಳೆ ಮೊದಲಾದ ಅವನು ತಿನ್ನುವ ವಸ್ತುಗಳಿಂದ ನಿರ್ಮಿಸಲ್ಪಡುತ್ತವೆ. ಅವುಗಳಿಂದ ಉತ್ಪಾದಿಸಲ್ಪಡುವ ಪದಾರ್ಥದಿಂದ ಮನುಷ್ಯನು ಲೋಕದಲ್ಲಿ ಜನಿಸಿ ದೊಡ್ಡ ದೊಡ್ಡ ಕೆಲಸಗಳನ್ನು ಮಾಡುತ್ತಾನೆ. ಇವುಗಳೆಲ್ಲ ಅಲ್ಲಾಹನ **ರುಬೂಬಿಯ್ಯತ್** (ಪರಿಪಾಲಕತನದ) ಕಾರ್ಯಗಳಾಗಿವೆ. ಪವಿತ್ರ ಖುರ್‌ಆನ್ ಹೇಳುವುದೇನೆಂದರೆ, ಅಲ್ಲಾಹನು ನಿಮ್ಮ ಪರಿಪಾಲಕನೂ ನಿಮಗೆ ಔದಾರ್ಯ ನೀಡುವವನೂ ಆಗಿದ್ದಾನೆ. ಅವನು ಒಬ್ಬಿಬ್ಬರ ಪಾಲಕ ಪೋಷಕನಲ್ಲ. ಅವನು ಸರ್ವಲೋಕಗಳ ಪಾಲಕ ಪೋಷಕನಾಗಿದ್ದಾನೆ. ಯುರೋಪುವಾಸಿಯಾಗಿರಲಿ, ಆಫ್ರಿಕದ ನಿವಾಸಿಯಾಗಿರಲಿ, ಅಮೇರಿಕದ ನಿವಾಸಿಯಾಗಿರಲಿ ಅಥವಾ ಬೇರೆ ಯಾವ ದೇಶದವನೇ ಆಗಿರಲಿ, ಯಾವುದೇ ಧರ್ಮವನ್ನು ಅವಲಂಬಿಸುವವನಾಗಿರಲಿ ಅವರೆಲ್ಲರ ಪರಿಪಾಲಕನು ಅಲ್ಲಾಹನಾಗಿದ್ದಾನೆ. ಅವನು ಮೃಗಗಳ ಮತ್ತು ಪಕ್ಷಿಗಳ ಪರಿಪಾಲಕನೂ ಆಗಿದ್ದಾನೆ. ಮೃಗಗಳಿಗೆ ಸಂಬಂಧಿಸಿ ಅಲ್ಲಾಹನ ಪರಿಪಾಲಕತ್ವವನ್ನು ನೋಡುವುದಾದರೆ ಅದ್ಭುತ ದೃಶ್ಯಗಳು ಕಾಣಿಸುತ್ತವೆ. ನೀವು ನೋಡಿರಿ, ಎತ್ತುಗಳನ್ನು ನೊಗಕ್ಕೆ ಹೂಡಿ ಗದ್ದೆಯನ್ನು ಬೀಜ ಬಿತ್ತಲು ಸಿದ್ಧತೆಗೊಳಿಸಲಾಗುತ್ತಿದೆ. ಬೀಜ ಬಿತ್ತಿದ ಪರಿಣಾಮವಾಗಿ ಗದ್ದೆಯಲ್ಲಿ ಹುಲ್ಲು ಇಲ್ಲದೆ ಬರೇ ಕಾಳು ದೊರಕುವುದಾದರೆ ಎತ್ತುಗಳಿಗೆ ತಿನ್ನಲು ಆಹಾರ ಸಿಗುತ್ತಿರಲಿಲ್ಲ. ಆದುದರಿಂದ ಅಲ್ಲಾಹನು ಧಾನ್ಯದೊಂದಿಗೆ ಹುಲ್ಲನ್ನೂ ಬೆಳೆಯಿಸಿಕೊಟ್ಟನು. ಮನುಷ್ಯನೊಂದಿಗೆ ಕೆಲಸ ಮಾಡುವ ಮೃಗಗಳಿಗೆ ಆಹಾರಕ್ಕಾಗಿ ಹೀಗೆ ಅಲ್ಲಾಹನು ಮಾಡಿರುವನು. ಅಲ್ಲಾಹನು ಪ್ರತಿಯೊಂದು ಸೃಷ್ಟಿಗೆ ಅದರ ಪಾಲನ್ನು ಇರಿಸಿದ್ದಾನೆ. ಅವನೇ ಅವುಗಳಿಗೆ ಆಹಾರ ತಲಪಿಸುತ್ತಾನೆ. ಅಲ್ಲಿಗೆ ಆಹಾರ ಹೇಗೆ ತಲಪಿಸುವುದು ಎಂದು ಮನುಷ್ಯನು ಯೋಚಿಸಲಾಗದಂತಹ ಸ್ಥಳಗಳಲ್ಲೂ ಎಂದರೆ ಸಮುದ್ರದ ಭೂಮಿಯ ಒಳಭಾಗದಲ್ಲಿ ಜೀವಿಗಳಿರುವಲ್ಲಿಗೆ ಮತ್ತು ಸಮುದ್ರದ ತಳಭಾಗದಲ್ಲಿ ಇರುವ ಜೀವಿಗಳಿಗೆ ಅವನು ಆಹಾರ ತಲಪಿಸುತ್ತಿದ್ದಾನೆ. ಅಲ್ಲಾಹನು ಎಲ್ಲ ಜೀವಿಗಳ ಮೇಲೆ ಔದಾರ್ಯ ತೋರುವವನಾಗಿದ್ದಾನೆ. ಔದಾರ್ಯ ಮೂರು ವಿಧಗಳಲ್ಲಿರುತ್ತವೆ. ಭೂತಕಾಲದಲ್ಲಿ ಮಾಡಿದುದು, ವರ್ತಮಾನ ಕಾಲದಲ್ಲಿ ಮಾಡುವುದು ಮತ್ತು ಭವಿಷ್ಯತ್‌ಕಾಲದಲ್ಲಿ ಮಾಡಲಿರುವುದು. ಲೋಕದಲ್ಲಿ ಅನೇಕ ಜನರು ಭೂತಕಾಲದ ಔದಾರ್ಯಗಳ ಬಗ್ಗೆ ಮೆಚ್ಚಿಗೆ ಸೂಚಿಸುತ್ತಾರೆ. ಅನೇಕ ಜನರು ವರ್ತಮಾನ ಕಾಲದ ಔದಾರ್ಯಗಳ ಬಗ್ಗೆ ಮೆಚ್ಚಿಗೆ ಸೂಚಿಸುತ್ತಾರೆ. ಬೇರೆ ಅನೇಕ ಜನರು ಮುಂದೆ ಸಿಗಲಿರುವ ಔದಾರ್ಯಗಳು ಮಹತ್ವಪೂರ್ಣ ಎಂದು ಗಣಿಸುತ್ತಾರೆ. ಅಲ್ಲಾಹನು ಸೂರತುಲ್ ಫಾತಿಹದಲ್ಲಿ ಈ ಮೂರು ವಿಧಗಳ ಜನರ ಬಗ್ಗೆ ಪ್ರಸ್ತಾಪಿಸಿದ್ದಾನೆ ಮತ್ತು ಹೇಳುತ್ತಾನೆ, ತಾನು **ರಬ್ಬುಲ್ ಆಲಮೀನ್** – ಸರ್ವಲೋಕಗಳ ಪಾರಿಪಾಲಕನೆಂದು. ಹಿಂದಿನ ಕಾಲದ ಔದಾರ್ಯಗಳ ಬಗ್ಗೆ ನೆನಪಿಡುವವರು ತಿಳಿಯಬೇಕಾದುದೇನೆಂದರೆ, ಅದೇ ಅಲ್ಲಾಹನು ಈಗ ಸಹ ಅವರಿಗೆ ಔದಾರ್ಯ ತೋರಿಸುತ್ತಿದ್ದಾನೆ. ಮುಂದಿನ ಕಾಲದ ಔದಾರ್ಯದ ಬಗ್ಗೆ ಯೋಚಿಸುವವರು ತಿಳಿದುಕೊಳ್ಳಬೇಕಾದುದೇನೆಂದರೆ ಅದೇ ಅಲ್ಲಾಹನು ಅವರ ಮೇಲೆ ಭವಿಷ್ಯತ್ ಕಾಲದಲ್ಲಿ ಔದಾರ್ಯದಿಂದ ವರ್ತಿಸುವನು. ಪ್ರೀತಿಸಬೇಕಾದುದು ಅವನನ್ನೇ ಆಗಿದೆ.

ಅಲ್ಲಾಹನ ರುಬೂಬಿಯ್ಯತ್ (ಪಾಲನೆ ಪೋಷಣೆ) ಮೂಲಕ ಮನುಷ್ಯನು ಪರಿಪೂರ್ಣ ಸ್ಥಿತಿಗೆ ತಲಪಿ ಕೆಲಸ ಮಾಡಲು ಸಾಮರ್ಥ್ಯ ಗಳಿಸುವಾಗ ತಂದೆ ತಾಯಂದಿರು ಯುವಕನಾದ ಮಗನಿಗೆ ಕೆಲಸ ಮಾಡಲು ವ್ಯವಸ್ಥೆ ಮಾಡುವ ಹಾಗೆ ಮನುಷ್ಯನಿಗೆ ಅಲ್ಲಾಹನು ವ್ಯವಸ್ಥೆ ಒದಗಿಸಿ ಕೊಡುತ್ತಾನೆ. ಮನುಷ್ಯನು ಕೆಲಸ ಮಾಡುವ ಸಾಮರ್ಥ್ಯ ಗಳಿಸಿದಾಗ ಅಲ್ಲಾಹನು ತನ್ನ ಅನುಗ್ರಹ ಮೂಲಕ ಮನುಷ್ಯನ ಪ್ರಯತ್ನ ಮತ್ತು ದುಡಿಮೆ ಫಲವಾಗಿ ಅಲ್ಲ – ಕೆಲಸ ಮಾಡುವ ಸಾಮಗ್ರಿಗಳನ್ನು ಒದಗಿಸುತ್ತಾನೆ. ಈ ವಿಷಯಕ್ಕೆ ಸಂಬಂಧಿಸಿ ಇಸ್ಲಾಮ್ ಇತರ ಧರ್ಮಗಳ ಮೇಲೆ ಶ್ರೇಷ್ಠತೆ ಸಾಬೀತುಗೊಳಿಸುತ್ತದೆ. ಏಕೆಂದರೆ ಕೆಲವು ಧರ್ಮಗಳ ಜನರು ಹೇಳುತ್ತಾರೆ – ಮೋಕ್ಷ ನಮ್ಮ ಧರ್ಮದಲ್ಲಿ ಮಾತ್ರ ಇದೆ; ಆದರೆ ಆ ಧರ್ಮದಲ್ಲಿ ಪ್ರವೇಶಿಸಲು ಬೇರೆ ಯಾರಿಗೂ ಸಾಧ್ಯವಿರುವುದಿಲ್ಲ. ಆದರೆ ಪವಿತ್ರ ಖುರ್‌ಆನ್ ಹಾಗೆ ಹೇಳುವುದಿಲ್ಲ. ಅದು ಹೇಳುವುದು, ಅಲ್ಲಾಹನು ಸರ್ವ ಜನರ **ರಬ್ಬ್** (ಪಾಲಕ ಪೋಷಕ) ಎಂದು. ಜನರಿಗೆ ಮೋಕ್ಷ ದೊರಕಲು ಅಲ್ಲಾಹನು ಕಳುಹಿಸಿದ ಧರ್ಮದ ಬಾಗಿಲು ಪ್ರತಿಯೊಬ್ಬನಿಗೆ ತೆರೆದಿದೆ. ಇಸ್ಲಾಮ್ **ರಹ್ಮಾನಿಯ್ಯತ್** ಎಂಬ ಗುಣ ಹೊಂದಿದ ದೇವನ ಬಗ್ಗೆ ಪ್ರಸ್ತಾಪಿಸುತ್ತದೆ. ಅಲ್ಲಾಹನು ಕೇವಲ ಪಾಲನೆ ಪೋಷಣೆ ಮಾಡುತ್ತಾನಲ್ಲದೆ ಅವನು ಎಂತಹ ಸಾಮಗ್ರಿಗಳನ್ನು ಜನರಿಗೆ ಒದಗಿಸಿ ಕೊಡುತ್ತಾನೆಂದರೆ ಅವುಗಳನ್ನು ಗಳಿಸಲು ಮನುಷ್ಯನು ಯಾವ ಕೆಲಸವನ್ನೂ ಮಾಡುವುದಿಲ್ಲ. ಈ ವಿಷಯದಲ್ಲೂ ಇಸ್ಲಾಮ್ ಇತರ ಕೆಲವು

ಧರ್ಮಗಳ ಮೇಲೆ ಶ್ರೇಷ್ಠತೆ ಹೊಂದಿರುವುದು ಸಾಬೀತಾಗುತ್ತದೆ. ಆ ಧರ್ಮಗಳು ಹೇಳುವುದೇನೆಂದರೆ, ಮನುಷ್ಯನಿಗೆ ಪ್ರಯತ್ನ ಮಾಡದಿದ್ದರೆ ದೇವನು ಏನನ್ನೂ ಕೊಡುವುದಿಲ್ಲ ಎಂದು. ಆದರೆ ಇದು ಅನುಭವ, ನೋಟ ಮತ್ತು ಪ್ರಕೃತಿಗೆ ಸಂಪೂರ್ಣ ವಿರುದ್ಧವಾಗಿದೆ. ಏಕೆಂದರೆ ಸೂರ್ಯ, ಭೂಮಿ, ನೀರು, ಗಾಳಿ ಮೊದಲಾದುವುಗಳಿಲ್ಲದಿದ್ದರೆ ಮನುಷ್ಯನು ಜೀವಿಸಿರಲಾರ. ಆದರೆ ಮನುಷ್ಯನು ಕೆಲಸ ಮಾಡದಿದ್ದರೆ ದೇವನಿಂದ ಏನೂ ಸಿಗುವುದಿಲ್ಲವಾದರೆ ದೇವನು ಇವುಗಳನ್ನು ಸೃಷ್ಟಿಸುತ್ತಿರಲಿಲ್ಲ. ಆದರೆ ಅಲ್ಲಾಹನು ಅವುಗಳನ್ನು ಸೃಷ್ಟಿರುವನು. ಇದರಿಂದ ತಿಳಿಯುವುದೇನೆಂದರೆ, ಅಲ್ಲಾಹನು ಮನುಷ್ಯನು ಕೆಲಸ ಮಾಡದಿದ್ದರೂ ಕೊಡುತ್ತಾನೆಂದು. ಮೇಲೆ ವಿವರಿಸಿದವುಗಳು ಮನುಷ್ಯನ ದುಡಿಮೆ ಫಲಸ್ವರೂಪಗಳೆಂದು ಹೇಳುವುದು ಯಾವ ರೀತಿಯಲ್ಲೂ ಸರಿಯಾಗಲಾರದು. ಮನುಷ್ಯನು ಕೆಲಸ ಮಾಡಬೇಕಾದರೆ ಅವನು ಜೀವದಿಂದಿರಬೇಕು. ಅದರೆ ಗಾಳಿಯಿಲ್ಲದೆ ಜೀವಿಸಿರಲು ಸಾಧ್ಯವಿಲ್ಲ. ಇದರಿಂದ ಸಾಬೀತಾಗುವುದೇನೆಂದರೆ, ಮನುಷ್ಯನಿಗೆ ಉಸಿರಾಡಲು ಗಾಳಿ ಮೊದಲು ಲಭಿಸಿತು. ಅನಂತರ ಅವನು ಕೆಲಸ ಮಾಡಲು ತೊಡಗಿದನು. ಇದೇ ರೀತಿ ಆಹಾರ. ಕೆಲಸ ಮಾಡುವ ಮೊದಲು ಆಹಾರ ಸಿಗದಿದ್ದರೆ ಅವನಿಗೆ ಜೀವಿಸಲು ಸಾಧ್ಯವಾಗುತ್ತಿರಲಿಲ್ಲ. ಅವನಿಗೆ ಜೀವಿಸಿರಲು ಸಾಧ್ಯವಿಲ್ಲದಿರುವಾಗ ಕೆಲಸ ಮಾಡಲು ಸಹ ಸಾಧ್ಯವಾಗುತ್ತಿರಲಿಲ್ಲ. ಇಸ್ಲಾಮಿನ ಉಪದೇಶಗಳ ಪ್ರಕಾರ ಅಲ್ಲಾಹನು **ರಹ್ಮಾನ್** ಆಗಿದ್ದಾನೆ. ಅಂದರೆ, ಮನುಷ್ಯನು ದುಡಿಮೆ ಮಾಡದಿದ್ದರೂ ಅಲ್ಲಾಹನು ಕೊಡುವವನಾಗಿದ್ದಾನೆ. ಅವನು ಅಪರಿಮಿತವಾಗಿ ಕೊಡುತ್ತಾನೆ. ನೀವು ನೋಡಿರಿ, ಮನುಷ್ಯರಿಗೆ ಗಾಳಿ ಮುಫತ್ತಾಗಿ ದೊರಕಿತು. ಅದನ್ನು ಪಡೆಯಲು ಮನುಷ್ಯನು ಕಷ್ಟಪಡಲಿಲ್ಲ, ಕೆಲಸ ಮಾಡಲಿಲ್ಲ. ಅದು ಹೇಗಿದೆ ಎಂದರೆ ಅದರಲ್ಲಿ ಯಾವುದೇ ನಿಯಂತ್ರಣವಿರುವುದಿಲ್ಲ. ಪ್ರತಿಯೊಬ್ಬನಿಗೆ ದೊರಕುತ್ತದೆ. ಇದೇ ರೀತಿ ನೀರು ಇದೆ. ಇದು ಸಹ ಅಪರಿಮಿತವಾಗಿ ಲಭಿಸುತ್ತದೆ. ನಾವು ನೋಡುತ್ತಿರುವುದೇನೆಂದರೆ, ಮನುಷ್ಯನು ಜೀವಿಸಲು ಯಾವುದೆಲ್ಲ ವಸ್ತುಗಳು ಹೆಚ್ಚು ಆವಶ್ಯಕವಾಗಿವೆಯೋ ಅವು ಅಷ್ಟೇ ಸುಲಭವಾಗಿ ಲಭಿಸುತ್ತವೆ. ಉದಾಹರಣೆಗೆ ಆಹಾರ, ಒಬ್ಬ ಮನುಷ್ಯನಿಗೆ ದೊರಕದಿದ್ದರೆ ಅವನು ಒಂದು ಪರಿಮಿತ ಸಮಯದ ತನಕ ಸಹನೆಯಿಂದಿರಬಹುದು. ಆದರೆ ನೀರು ಸಿಗದಿದ್ದರೆ ಅದಕ್ಕಿಂತ ಕಡಿಮೆ ಕಾಲ ಜೀವಿಸುತ್ತಾನೆ. ಗಾಳಿ ಸಿಗದಿದ್ದರೆ ಅದಕ್ಕಿಂತಲೂ ಕಡಿಮೆ ಕಾಲ ಜೀವಿಸಿರುತ್ತಾನೆ. ಆದುದರಿಂದ ಆಹಾರ ಗಳಿಸಲು ಎಷ್ಟು ಕಷ್ಟಪಡಬೇಕಾಗಿದೆ ಎಂದು ಅಲ್ಲಾಹನು ನಿಗದಿ ಪಡಿಸಿರುವನೋ ಅದಕ್ಕಿಂತ ಕಡಿಮೆ ಪ್ರಯತ್ನ ನೀರು ದೊರಕಲು ನಿಶ್ಚಯಿಸಿದ್ದಾನೆ. ಗಾಳಿಯನ್ನು ಪಡೆಯಲು ಅದಕ್ಕಿಂತ ಕಡಿಮೆ ಪ್ರಯತ್ನ ನಿಗದಿಪಡಿಸಿದ್ದಾನೆ. ಈ ರೀತಿ ಮನುಷ್ಯನಿಗೆ ಯಾವುದೆಲ್ಲ ವಸ್ತುಗಳು ಹೆಚ್ಚು ಆವಶ್ಯಕವಾಗಿವೆಯೋ ಅವುಗಳನ್ನು ಪಡೆಯುವುದನ್ನು ಹೆಚ್ಚು ಸುಲಭಗೊಳಿಸಿದ್ದಾನೆ. ನೀರಿಲ್ಲದೆ ಮನುಷ್ಯನು ಸ್ವಲ್ಪ ಕಾಲ ಸಹನೆಯಿಂದ ಜೀವಿಸಿರಬಹುದು. ಆದರೆ ಗಾಳಿಯನ್ನು ಪಡೆಯದೆ, ಒಂದಿಷ್ಟು ಕಾಲ ಜೀವಿಸಿರಲಾರ. ಆದುದರಿಂದ ಅಲ್ಲಾಹನು ಗಾಳಿ ದೊರಕಲು ಯಾವುದೇ ಪ್ರಯತ್ನದ ಆವಶ್ಯಕತೆ ಇರಿಸಲಿಲ್ಲ. ಇದು ಅಲ್ಲಾಹನು ರಹ್ಮಾನ್ (ಅಪರಿಮಿತವಾಗಿ ಅನುಗ್ರಹ ನೀಡುವವನು) ಎಂಬುದಕ್ಕೆ ಸಾಕ್ಷ್ಯವಾಗಿದೆ. ಪವಿತ್ರ ಖುರ್‌ಆನ್ ಅಲ್ಲಾಹನನ್ನು ರಹ್ಮಾನ್ ಎಂದು ಹೇಳಿದೆ. ಇಸ್ಲಾಮ್ ಹೇಳುತ್ತದೆ – ಅಲ್ಲಾಹನ ಗುಣ ವಿಶೇಷಗಳು ಇಲ್ಲಿಗೆಯೇ ಕೊನೆಗೊಳ್ಳುವುದಿಲ್ಲ. ಅಲ್ಲಾಹನ ಗುಣ ಅದಕ್ಕಿಂತ ಮುಂದೆ ಸಾಗುತ್ತದೆ. ಅಲ್ಲಾಹನ ಒಂದು ಗುಣ ಹೇಗಿದೆ ಎಂದರೆ ಒಬ್ಬ ಮನುಷ್ಯನು ಕೆಲಸಮಾಡಲು ಪ್ರಾರಂಭಿಸಿದರೆ ಆ ಮನುಷ್ಯನು ಅಲ್ಲಾಹನು ನೀಡಿದ ಮಾರ್ಗಗಳನ್ನು ಬಳಸಿ ಕೆಲಸ ಮಾಡಿದುದರಿಂದ **"ಆ ಕೆಲಸಕ್ಕೆ ಪ್ರತಿಫಲ ನಾನು ಕೊಡುವುದಿಲ್ಲ"** ಎಂದು ಹೇಳುವುದಿಲ್ಲ. ಅಲ್ಲಾಹನು ಮೊದಲಿಗಿಂತ ಹೆಚ್ಚಿನ ಮಟ್ಟದಲ್ಲಿ ಆ ಮಾರ್ಗಗಳನ್ನು ವರ್ಧಿಸಿ ಕೊಡುತ್ತಾನೆ. ಉದಾಹರಣೆಗೆ ನೀವು ನೋಡಿರಿ. ಮನುಷ್ಯನು ಅಲ್ಲಾಹನು ನೀಡಿದ ಕೈಯಿಂದ ಕೆಲಸ ಮಾಡಿದರೆ ಆ ಕೈ ಹೆಚ್ಚು ಬಲಶಾಲಿಯಾಗುತ್ತದೆ. ಅಲ್ಲಾಹನು ನೀಡಿದ ಮೆದುಳನ್ನು ಕೆಲಸಕ್ಕೆ ಬಳಸಿದರೆ ಮೆದುಳು ಇನ್ನಷ್ಟು ಶಕ್ತಿಶಾಲಿಯಾಗುತ್ತದೆ. ಇದೇ ಕಾರಣದಿಂದ ವಿದ್ಯಾವಂತರಾದವರ ಸಂತಾನ ವಿದ್ಯೆ ಗಳಿಸದವರ ಸಂತಾನಕ್ಕಿಂತ ಬಹಳ ಬೇಗನೆ ವಿದ್ಯೆ ಗಳಿಸುತ್ತದೆ. ಹಿಂದೂಸ್ಥಾನದಲ್ಲಿಯೇ ನೋಡಿರಿ. ವಿದ್ಯೆಗಳಿಸಿದ ಹಿಂದುಗಳ ಮತ್ತು ಮುಸ್ಲಿಮರ ಮಕ್ಕಳು ವಿದ್ಯೆಗಳಿಸದ ವರ್ಗಗಳ ಮಕ್ಕಳಿಗಿಂತ ಸುಲಭವಾಗಿ ಜ್ಞಾನ ಗಳಿಸುತ್ತಾರೆ. ಇಸ್ಲಾಮ್ ಹೇಳುವುದೇನೆಂದರೆ, ಮನುಷ್ಯನು ಅಲ್ಲಾಹನು ನೀಡಿದ ಸಾಮಗ್ರಿಗಳಿಂದ ಲೌಕಿಕ ಅಥವಾ ಆಧ್ಯಾತ್ಮಿಕ ಪ್ರಯೋಜನ ಪಡೆಯುವಾಗ ಅಲ್ಲಾಹನು ಅವುಗಳ ಕಾರ್ಯ ಕ್ಷಮತೆ ವರ್ಧಿಸುತ್ತಾನೆ ಮತ್ತು ಬಹಳ ಹೆಚ್ಚು ಲಾಭ ದೊರಕುವಂತೆ ಮಾಡುತ್ತಾನೆ.

ಇಸ್ಲಾಮ್ ಪ್ರತಿಪಾದಿಸುವ ಅಲ್ಲಾಹನಿಗೆ ಬೇರೆ ಗುಣಗಳು ಸಹ ಇವೆ. ಕೆಲವು ಜನರು ಸೌಂದರ್ಯ ಮತ್ತು ಔದಾರ್ಯದ ಕಾರಣದಿಂದ ನಂಬುವುದಿಲ್ಲ. ಅವರು ಭಯದ ಕಾರಣದಿಂದ ನಂಬುತ್ತಾರೆ. ಆದುದರಿಂದ ಇಸ್ಲಾಮ್ ಹೀಗೆ ಸಹ ಹೇಳುತ್ತದೆ: ಅಲ್ಲಾಹನು ಎಲ್ಲ ಒಳಿತುಗಳ ಸಂಗ್ರಹ ಮತ್ತು ಪ್ರೀತಿಸುವವನಾಗಿದ್ದು ನಿಮ್ಮ ಮೇಲೆ ಔದಾರ್ಯ ತೋರಿಸುತ್ತಾನೆ. ಆದುದರಿಂದ ಅವನ ಆಜ್ಞೆಗಳನ್ನು ಪಾಲಿಸದಿದ್ದರೆ ನಿಮ್ಮನ್ನು ಶಿಕ್ಷಿಸುವನು. ಏಕೆಂದರೆ ಅವನು **ಮಾಲಿಕಿ ಯೌಮಿದ್ದೀನ್** ಆಗಿದ್ದಾನೆ. ಎಂದರೆ ಶಿಕ್ಷೆ ರಕ್ಷೆಗಳ ದಿನದ ಒಡೆಯ. ನೀವು ನೋಡಿರಿ, ಲೋಕದಲ್ಲಿ ಜನರು ಬಾಹ್ಯ ಸಾಮಗ್ರಿಗಳನ್ನು ಉಪಯೋಗಿಸದಿದ್ದರೆ ಅವರು ಹೀನಾಯಗೊಳಿಸಲ್ಪಡುತ್ತಾರೆ. ಇದೇ ರೀತಿ ಅಲ್ಲಾಹನಿಂದ ಅವತೀರ್ಣಗೊಂಡ ಉಪದೇಶಗಳನ್ನು ಅನುಷ್ಠಾನಕ್ಕೆ ತರದವರು ನಾಶಗೊಳಿಸಲ್ಪಡುತ್ತಾರೆ. ಏಕೆಂದರೆ ಅಲ್ಲಾಹನು **ಮಾಲಿಕಿ ಯೌಮಿದ್ದೀನ್** ಆಗಿದ್ದಾನೆ. ಲೋಕದಲ್ಲಿ ಪ್ರೀತಿಯ ಕಾರಣದಿಂದ ನಂಬುವವರು ಅಲ್ಲಾಹನ ಆಜ್ಞೆಗಳನ್ನು **ಅಲ್‌ಹಮ್‌ದುಲಿಲ್ಲಾಹಿ ರಬ್ಬಿಲ್ ಆಲಮೀನ್, ಅರ್ರಹ್ಮಾನಿರ್ರಹೀಮ್**

ಎಂಬ ಪವಿತ್ರ ಖುರ್‌ಆನ್ ವಚನದ ಅಧೀನರಾಗಿ ನಂಬುತ್ತಾರೆ. ಶಿಕ್ಷೆಯ ಭಯದಿಂದ ನಂಬುವವರು ಮಾಲಿಕಿ ಯೌಮಿದ್ದೀನ್ ಎಂಬ ಗುಣಕ್ಕೆ ಅಧೀನರಾಗಿ ನಂಬುತ್ತಾರೆ. ಏಕೆಂದರೆ ಅಲ್ಲಾಹನ ಆಜ್ಞೆಗಳಿಗೆ ವಿರುದ್ಧವಾಗಿ ವರ್ತಿಸಿದರೆ ಅಲ್ಲಾಹನು ತಮಗೆ ಶಿಕ್ಷೆ ನೀಡುವವನು ಎಂದು ಅವರು ಮನವರಿಕೆ ಮಾಡಿಕೊಂಡಿರುತ್ತಾರೆ.

ಅಲ್ಲಾಹನ ಸಾಮೀಪ್ಯ ಗಳಿಸಲು ಇಸ್ಲಾಮ್ ಉಪದೇಶಿಸುವ ಸೈದ್ಧಾಂತಿಕ ತತ್ವಗಳು ಇವು ಆಗಿವೆ. ಇದರ ಬಗ್ಗೆ ವಿಸ್ತಾರವಾಗಿ ನೋಡುವುದರಿಂದ ಸಾಬೀತಾಗುವುದೇನೆಂದರೆ, ಇಸ್ಲಾಮ್ ಇತರ ಎಲ್ಲ ಧರ್ಮಗಳ ಮೇಲೆ ಬಹಳ ಶ್ರೇಷ್ಠತೆ ಹೊಂದಿದೆ. ಆದರೆ ಅಲ್ಲಾಹನೊಂದಿಗೆ ಮನುಷ್ಯನು ಸಂಬಂಧ ಸ್ಥಾಪಿಸುವುದರ ಪರಿಣಾಮವಾಗಿ ಮನುಷ್ಯನು ಅಲ್ಲಾಹನನ್ನು ಪ್ರೀತಿಸುವುದಕ್ಕೆ ಸೀಮಿತವಾಗುವುದಿಲ್ಲ. ಅದರ ಅನಿವಾರ್ಯ ಪರಿಣಾಮವೇನೆಂದರೆ, ಅಲ್ಲಾಹನ ಸೃಷ್ಟಿಗಳ ಮಧ್ಯೆ ಸಹ ಪ್ರೀತಿ ವಾತ್ಸಲ್ಯ ಸ್ಥಾಪಿತವಾಗುವುದಾಗಿದೆ. ನೀವು ನೋಡಿರಿ, ಸಹೋದರ ಸಹೋದರನನ್ನು ಪರಸ್ಪರ ಪ್ರೀತಿಸುವುದು ಏಕೆ? ಒಂದೇ ತಂದೆ ತಾಯಿಂದಿರೊಂದಿಗೆ ಸಂಬಂಧ ಹೊಂದಿರುವುದರಿಂದ ಹೀಗೆ ಪ್ರೀತಿಸುತ್ತಾರೆ. ಒಂದು ದೇಶದ ನಿವಾಸಿಗಳು ಪರಸ್ಪರ ಪ್ರೀತಿಸುವುದು ಏಕೆ? ಅವರು ಒಂದು ದೇಶದೊಂದಿಗೆ ಸಂಬಂಧ ಹೊಂದಿದವರಾದ ಕಾರಣ ಪ್ರೀತಿಸುತ್ತಾರೆ. ಲೌಕಿಕವಾಗಿ ಒಂದು ವಸ್ತುವಿನೊಂದಿಗೆ ಸಂಬಂಧ ಸ್ಥಾಪಿಸಿದವರು ಪರಸ್ಪರ ಪ್ರೀತಿಸುತ್ತಿರುವಾಗ ಏಕ ದೇವನೊಂದಿಗೆ ಸಂಬಂಧ ಹೊಂದಿದವರು ಪರಸ್ಪರ ಪ್ರೀತಿಸದೆ ಇರುವುದು ಹೇಗೆ? ಏನು ಅಲ್ಲಾಹನು ತಂದೆ ತಾಯಿ ಮತ್ತು ದೇಶಕ್ಕಿಂತ ಕಡಿಮೆ ಸ್ಥಾನದವನೋ? ಅಲ್ಲಾಹನ ಸ್ಥಾನ ಅವರೆಲ್ಲರಿಗಿಂತ ಮೇಲಾಗಿರುವಾಗ ಒಂದು ಬಡಾವಣೆ, ಒಂದು ನಗರ, ಒಂದು ದೇಶ, ಒಬ್ಬ ತಂದೆ ಒಬ್ಬ ತಾಯಿಯೊಂದಿಗೆ ಸಂಬಂಧ ಹೊಂದಿದವರು ಪರಸ್ಪರ ಪ್ರೀತಿಸುವಾಗ ಒಬ್ಬ ದೇವನನ್ನು ಪ್ರೀತಿಸುವವರು ಮತ್ತು ಸಂಬಂಧ ಹೊಂದಿದವರು ಪರಸ್ಪರ ಪ್ರೀತಿಸದಿರುವುದಕ್ಕೆ ಕಾರಣವೇನಿದೆ? ಅವರ ಪರಸ್ಪರ ಪ್ರೀತಿ ಇತರ ಎಲ್ಲದಕ್ಕಿಂತ ಹೆಚ್ಚಿನ ಮಟ್ಟದ್ದು ಮತ್ತು ಅವರ ಸಂಬಂಧ ಇತರ ಎಲ್ಲ ಸಂಬಂಧಗಳಿಗಿಂತ ಬಲವತ್ತಾಗಿರಬೇಕಾಗಿದೆ. ಲೋಕದಲ್ಲಿ ಜನರ ಮೇಲೆ ದೌರ್ಜನ್ಯ ಮಾಡುವವರು ಅಲ್ಲಾಹನೊಂದಿಗೆ ಸಂಬಂಧ ಹೊಂದದವರಾಗಿದ್ದಾರೆ. ಅಲ್ಲಾಹನೊಂದಿಗೆ ಸಂಬಂಧ ಹೊಂದಿದವರು ಅವನ ದಾಸರನ್ನೂ ಆವಶ್ಯಕವಾಗಿ ಪ್ರೀತಿಸುತ್ತಾರೆ.

ಇಸ್ಲಾಮ್ ನಮ್ಮನ್ನು ಅದರ ಕಡೆಗೆ ಒಯ್ಯುತ್ತದೆ ಮತ್ತು ಹೇಳುತ್ತದೆ: ಒಬ್ಬನು ಅಲ್ಲಾಹನ ಈ ಗುಣಗಳನ್ನು ನೋಡುವಾಗ, ಒಂದು ಕಡೆ ಅಲ್ಲಾಹನ ಸೌಂದರ್ಯ ಪರಿಪೂರ್ಣವಾಗಿದೆ. ಅವನಲ್ಲಿ ಪ್ರತಿಯೊಂದು ಒಳಿತು ಇರುತ್ತದೆ. ಅವನು ತನ್ನ ದಾಸರಿಗೆ ಔದಾರ್ಯ ಮಾಡುತ್ತಾನೆ. ಇನ್ನೊಂದು ಕಡೆ ಅವನು ಪರಿಪೂರ್ಣ ಶಕ್ತಿವಂತನಾಗಿದ್ದಾನೆ. ಅವನೊಂದಿಗೆ ಸಂಬಂಧವನ್ನು ಮುರಿಯುವವನನ್ನು ಅವನು ಶಿಕ್ಷಿಸುತ್ತಾನೆ. ಆಗ ಅವನ ಸ್ಥಿತಿ ಹೇಗಾಗುತ್ತದೆ ಎಂದರೆ ಅವನು ಅಲ್ಲಾಹನನ್ನು ತನ್ನ ಎದುರಿಗೆ ಕಾಣುತ್ತಾನೆ. ಅವನ ಹೃದಯದಲ್ಲಿ ಅಲ್ಲಾಹನ ದಾಸರ ಬಗ್ಗೆ ಪ್ರೀತಿ ಉಕ್ಕಿ ಬರುತ್ತದೆ. ಆಗ ಅವನು ತನ್ನ ಮತ್ತು ಇತರ ಧರ್ಮಗಳ ಜನರ ಮಧ್ಯೆ ಲೌಕಿಕವಾಗಿ ವ್ಯತ್ಯಾಸ ಕಾಣುವುದಿಲ್ಲ. ಆಗ ಅವನು ಹೀಗೆ ಹೇಳುವುದಿಲ್ಲ – ಒಬ್ಬನು ಹಿಂದು, ಕ್ರೈಸ್ತ, ಸಿಖ್ ಅಥವಾ ಬೇರೆ ಧರ್ಮಗಳಿಗೆ ಸೇರಿದವನಾದ ಕಾರಣ ಅವನಿಗೆ ಕಷ್ಟಕೊಡಬೇಕೆಂದು. ಅವನು ಹೀಗೆ ಹೇಳುತ್ತಾನೆ: ಎಲ್ಲರೂ ಅಲ್ಲಾಹನ ಸೃಷ್ಟಿಯಾಗಿದ್ದಾರೆ. ಅವರೊಂದಿಗೆ ಪ್ರೀತಿಯನ್ನು ಹೊಂದಬೇಕು. ಇಸ್ಲಾಮ್ ಹೀಗೆ ಹೇಳುತ್ತದೆ: ಮನುಷ್ಯನು ಈ ಸ್ಥಾನಕ್ಕೆ ತಲಪಿ ನಿಂತಾಗ ಹೇಳುತ್ತಾನೆ – **ಇಯ್ಯಾಕನಅ್‌ಬುದು ವ ಇಯ್ಯಾಕನಸ್ತಈನ್**. (ಹೇ ದೇವಾ) ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯವನ್ನು ಯಾಚಿಸುತ್ತೇವೆ. ಹೀಗೆ ಹೇಳುವಾಗ ಅವನು ಹೀಗೆ ಉದ್ದೇಶಿಸುತ್ತಾನೆ: ನಾನು ನನಗೋಸ್ಕರ ಮಾತ್ರವಲ್ಲ ಎಲ್ಲರ ಪರವಾಗಿ ಹೇಳುತ್ತೇನೆ. ನನ್ನ ಆರಾಧನೆ ಅವರ ಆರಾಧನೆಯಾಗಿದೆ. ನಾನು ನನಗೋಸ್ಕರ ಮಾತ್ರವಲ್ಲ ಎಲ್ಲರಿಗೋಸ್ಕರ ಸಹಾಯ ಯಾಚಿಸುತ್ತೇನೆ. ಲೋಕದಲ್ಲಿ ಅನೇಕ ಜನರು ಹೇಗಿದ್ದಾರೆಂದರೆ ಅವರು ಅನ್ಯರೊಂದಿಗೆ ಹೇಳುತ್ತಾರೆ: ನಮ್ಮ ಸಂಪತ್ತು ನಿಮ್ಮ ಸಂಪತ್ತು ಎಂದು. ಆದರೆ ಅವರ ಸಂಪತ್ತಿನಿಂದ ಒಂದು ಪೈಸೆಯನ್ನಾದರೂ ಎತ್ತಿಕೊಂಡರೆ ಜಗಳವಾಡಲು ಪ್ರಾರಂಭಿಸುತ್ತಾರೆ. ಆದರೆ ಇಸ್ಲಾಮ್ ಹೇಳುತ್ತದೆ: ಮನುಷ್ಯನ ಸಂಬಂಧ ಅಲ್ಲಾಹನೊಂದಿಗೆ ಆಗುವಾಗ ಅವನು ತನ್ನ ಬಗ್ಗೆ ಮಾತ್ರ ಅಲ್ಲಾಹನ ಸನ್ನಿಧಿಯಲ್ಲಿ ಬೇಡಿಕೊಳ್ಳುವುದಿಲ್ಲ. ಅವನು ಹೀಗೆ ಹೇಳುತ್ತಾನೆ: ನಾವೆಲ್ಲರೂ ನಿನ್ನನ್ನು ಆರಾಧಿಸುತ್ತೇವೆ. ನೀನು ನಮಗೆಲ್ಲರಿಗೂ ಸಹಾಯ ನೀಡು. ಎಲ್ಲರಿಗೂ ಅನುಗ್ರಹ ನೀಡು. ಇದು ಇಸ್ಲಾಮಿನ ಉಪದೇಶವಾಗಿವೆ. ಇಸ್ಲಾಮ್ ಎಲ್ಲರನ್ನೂ ತನ್ನ ಸಹೋದರನೆಂದು ಗಣಿಸಲು ಮತ್ತು ಎಲ್ಲರಿಗೂ ಲಾಭ ದೊರಕಿಸಿ ಕೊಡುವ ಉಪದೇಶ ನೀಡುತ್ತದೆ.

ಇದು ದಾಸನು ದೇವನೊಂದಿಗೆ ಸಂಬಂಧ ಸ್ಥಾಪಿಸುವ ರೀತಿಯಾಗಿದೆ. ಇದು ಏಕಪಕ್ಷೀಯವಾದುದಾಗಿದೆ. ಪರಿಪೂರ್ಣ ಉಪದೇಶ ಯಾವುದೆಂದರೆ ದೇವನು ಸಹ ದಾಸನೊಂದಿಗೆ ಪ್ರೀತಿಯನ್ನು ಹೊಂದಿದ ಸಾಕ್ಷ್ಯಾಧಾರ ನೀಡುತ್ತದೆ. ಏಕೆಂದರೆ ಒಬ್ಬನು ಅಲ್ಲಾಹನನ್ನು ಭೇಟಿಯಾಗುವ ಅಭಿಲಾಷೆ ಹೊಂದಿರುವಾಗ ಅಲ್ಲಾಹನಿಗೆ ಅವನೊಂದಿಗೆ ಪ್ರೀತಿ ಇಲ್ಲದಿದ್ದರೆ ಏನು ಪ್ರಯೋಜನ? ಮನುಷ್ಯನ ಹೃದಯದಲ್ಲಿ ಮಾತ್ರ ದೇವನ ಬಗ್ಗೆ ಪ್ರೀತಿ ಹುಟ್ಟಿಸುವ ಧರ್ಮ ಸತ್ಯ ಧರ್ಮವಾಗಲಾರದು. ಸತ್ಯ ಧರ್ಮ ಯಾವುದೆಂದರೆ ದೇವನು ಸಹ ತನ್ನ ದಾಸನೊಂದಿಗೆ ಪ್ರೀತಿ ಹೊಂದಿರುತ್ತಾನೆ ಎಂಬ ಸಾಕ್ಷ್ಯಾಧಾರ ನೀಡುವ ಧರ್ಮವಾಗಿದೆ. ಇದರ ಬಗ್ಗೆ ಪವಿತ್ರ ಖುರ್‌ಆನ್ ಏನು ಹೇಳುತ್ತದೆ ಎಂದು ನೋಡುವಾಗ ತಿಳಿಯುವುದೇನೆಂದರೆ, ಅಲ್ಲಾಹನು ಸಹ ತನ್ನ ದಾಸನನ್ನು ಪ್ರೀತಿಸುತ್ತಾನೆ. ಹಝ್ರತ್

ಮುಹಮ್ಮದ್ ಪೈಗಂಬರರನ್ನು[ಸ] ಸಂಬೋಧಿಸಿ ಅಲ್ಲಾಹನು ಹೇಳುತ್ತಾನೆ: **ಖುಲ್, ಇನ್‌ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನಿ ಯುಹ್‌ಬಿಬ್‌ಕುಮುಲ್ಲಾಹು**. – **"**ಹೇಳು: ನೀವು ಅಲ್ಲಾಹನನ್ನು ಪ್ರೀತಿಸುವಿರಾದರೆ ನನ್ನನ್ನು ಅನುಸರಿಸಿರಿ. ಆಗ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು.**"** (ಪವಿತ್ರ ಖುರ್‌ಆನ್ 3:32).

ಇಸ್ಲಾಮ್ ಇತರ ಧರ್ಮಗಳ ಹಾಗೆ ನಿಮ್ಮ ಹೃದಯದಲ್ಲಿ ಅಲ್ಲಾಹನ ಬಗ್ಗೆ ಪ್ರೀತಿ ಉಂಟಾಗುವುದು ಎಂದು ಮಾತ್ರ ಹೇಳುವುದಿಲ್ಲ. ಅಲ್ಲಾಹನು ನಿಮ್ಮನ್ನು ಪ್ರೀತಿಸಲು ತೊಡಗುವನೆಂದು ಅದು ಹೇಳುತ್ತದೆ. ಇದು ಇಸ್ಲಾಮ್ ಮತ್ತು ಇತರ ಧರ್ಮಗಳ ಮಧ್ಯೆ ಇರುವ ಬಹಳ ದೊಡ್ಡ ವ್ಯತ್ಯಾಸವಾಗಿದೆ.

ನಾನು ಇದರ ಮೊದಲು ಹೇಳಿರುವೆನು – ತನ್ನ ಧರ್ಮವನ್ನು ಶ್ರೇಷ್ಠವೆಂದು ಸಾಬೀತುಗೊಳಿಸಲು ಅನ್ಯ ಧರ್ಮಗಳ ಹಿರಿಯರನ್ನು ಬೈಯುವುದು ಮತ್ತು ಅನ್ಯ ಧರ್ಮಗಳಲ್ಲಿರುವ ಒಳಿತುಗಳನ್ನು ಅಂಗೀಕರಿಸದಿರುವುದು ತಪ್ಪು ವಿಧಾನವಾಗಿದೆ. ಯಾವುದಾದರೂ ಧರ್ಮದಲ್ಲಿ ಒಳಿತುಗಳಿದ್ದರೆ ಅವುಗಳನ್ನು ಜನರ ಮುಂದಿರಿಸಬೇಕು. ಅನ್ಯ ಧರ್ಮದವರನ್ನು ಬೈಯ್ಯುವುದರಿಂದ ಪ್ರಯೋಜನವಾದರೂ ಏನು? ಬೇರೆ ರೀತಿಯಲ್ಲಿ ಎದುರಿಸಲು ಸಾಧ್ಯವಾಗದೆ ಇದ್ದಾಗ ಬೈಯ್ಯುವುದರ ಮತ್ತು ಹೊಡೆಯುವುದರ ಆವಶ್ಯಕತೆ ಉಂಟಾಗುತ್ತದೆ. ಒಬ್ಬ ಬಲಶಾಲಿಯಾದವನು ಶಿಕ್ಷೆ ನೀಡುವಾಗ ಸಹ ಮೃದುವಾಗಿ ವರ್ತಿಸುತ್ತಾನೆ. ನೋಡಿರಿ ನೀವು ಬೆಕ್ಕು ಇಲಿಗಳ ಚಿಕ್ಕ ಉದಾಹರಣೆ ನೋಡಿರಿ. ಬೆಕ್ಕು ಚಿಕ್ಕ ಕೆಳವರ್ಗದ ಪ್ರಾಣಿಯಾದರೂ ಅದು ಇಲಿಯನ್ನು ಹಿಡಿಯುವಾಗ ತನ್ನ ಗೌರವ ತೋರಿಸುತ್ತದೆ. ಅದು ಇಲಿಯನ್ನು ಕಚ್ಚಿ ಅನಂತರ ಬಿಡುತ್ತದೆ. ಇಲಿ ಓಡುವಾಗ ಪುನಃ ಹಿಡಿಯುತ್ತದೆ. ಇದೇ ರೀತಿ ಅದು ಅನೇಕ ಸಾರಿ ಇಲಿಯನ್ನು ಹಿಡಿದು ಅನಂತರ ಬಿಡುತ್ತದೆ. ಬಲಶಾಲಿಯಾದವನು ನೀಚ ಪ್ರವೃತ್ತಿ ಹೊಂದುವುದಿಲ್ಲ. ತನ್ನ ಬಲಹೀನತೆಯನ್ನು ಅರಿತವನು ನೀಚ ಕೆಲಸ ಮಾಡುತ್ತಾನೆ. ಆದುದರಿಂದ ಯಾರಾದರೂ ಸತ್ಯ ಮತ್ತು ಒಳಿತಿನ ಸಾಕ್ಷ್ಯಾಧಾರ ಇತರರನ್ನು ನಿಂದಿಸುವುದಾಗಲಾರದು. ಸತ್ಯತೆಯ ಪುರಾವೆ ತನ್ನ ಒಳಿತುಗಳನ್ನು ಪ್ರಕಟಿಸುವುದಾಗಿದೆ. ವಾಸ್ತವಿಕವಾಗಿ ಒಳಿತುಗಳಿದ್ದರೆ ನಿಶ್ಚಯವಾಗಿಯೂ ಅಂಗೀಕರಿಸಲ್ಪಡುವುದು. ದೊಣ್ಣೆಯಿಂದ ಅಥವಾ ಬಲಾತ್ಕಾರದಿಂದ ಯಾವುದಾದರೂ ಒಳಿತನ್ನು ಅಂಗೀಕರಿಸುವಂತೆ ಮಾಡಲು ಸಾಧ್ಯವಿಲ್ಲ.

♦


## READ AHMADIYYA PERIODICALS

### THE REVIEW OF RELIGIONS

English Monthly
Annual Subscription : Rs. 500/-
Contact: The Manager,
The Review of Religions
Mohalla Ahmadiyya,
QADIAN – 143516 (Punjab)
Telephone : +91 1872 500970

==========================================================

**BADAR** – Urdu Weekly
Annual Subscription : Rs. 700/-
Contact: The Manager, The Badar Weekly
Mohalla Ahmadiyya,
QADIAN – 143516 (Punjab)
Telephone : (0091) 94170-20616

==========================================================

**ANSARULLAH** – Urdu & Hindi Monthly
Annual Subscription : Rs. 210/-
Contact: The Manager, Ansarullah Monthly
P.O. Qadian - 143516 (Punjab)
Phone: 01872 220186

# ಉಪಸಂಹಾರ ಮತ್ತು ಪ್ರಾರ್ಥನೆ

ನಾನು ಈ ವಿಷಯದ ವಿವರಣೆಗಳನ್ನು ಮುಗಿತಾಯಗೊಳಿಸಿ ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತೇನೆ. ಅಲ್ಲಾಹನು ತನ್ನ ಅನುಗ್ರಹದ ಮೂಲಕ ಬಹುಮಾನ್ಯರಾದ ವಾಚಕರ ಹೃದಯವನ್ನು ವಿಶಾಲಗೊಳಿಸಲಿ. ತಮ್ಮ ತಪ್ಪು ಗ್ರಹಿಕೆಗಳನ್ನು ಮನವರಿಕೆ ಮಾಡಿಕೊಳ್ಳುವ ವಿಷಯದಲ್ಲಿ ಹಠಮಾರಿತನದಿಂದ ಅವರು ವರ್ತಿಸದಿರಲಿ. ಸತ್ಯವು ಅವರಿಗೆ ತಿಳಿದರೆ ಅದನ್ನು ಅಂಗೀಕರಿಸಲು ಸಿದ್ಧರಾಗಲಿ.

ಈ ವಿಷಯದ ಬಗ್ಗೆ ಚಿಂತಿಸುವಾಗ ನಾನು ಆಶ್ಚರ್ಯ ಚಕಿತನಾಗುತ್ತೇನೆ. ಇಷ್ಟು ಪೊಳ್ಳಾದ ವಿಶ್ವಾಸ ಮುಸ್ಲಿಮರ ಹೃದಯಗಳಲ್ಲಿ ಹೇಗೆ ಸ್ಥಾನ ಪಡೆಯಿತು ಎಂದು ನಾನು ಯೋಚಿಸುತ್ತೇನೆ. ಇಸ್ಲಾಮೀ ಉಪದೇಶಗಳಿಗೆ ವಿರುದ್ಧವೂ ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಪಮಾನಕರವೂ ಆಗಿರುವ ಈ ವಿಶ್ವಾಸವನ್ನು ಇಸ್ಲಾಮಿನಿಂದ ದೂರ ಸರಿಸುವುದು ಅತ್ಯಾವಶ್ಯಕವಾಗಿದೆ. ಅಲ್ಲಾಹನು ಮುಸ್ಲಿಮರ ಕಣ್ಣುಗಳನ್ನು ತೆರೆಯಲಿ. ಈ ತಪ್ಪು ವಿಶ್ವಾಸ ಇಸ್ಲಾಮಿಗೆ ಎಷ್ಟು ಹಾನಿಯನ್ನುಂಟು ಮಾಡಿದೆ ಎಂದು ತಿಳಿದುಕೊಳ್ಳಲಿ. ಹಿಂದೂಸ್ಥಾನದಲ್ಲಿಯೇ ಕಳೆದ ಕೆಲವು ವರ್ಷಗಳಲ್ಲಿ ಲಕ್ಷಾಂತರ ಮುಸ್ಲಿಮರು (ಬ್ರಿಟಿಷರ ಆಡಳಿತೆಯ ಕಾಲದಲ್ಲಿ) ಕ್ರೈಸ್ತ ಧರ್ಮಾವಲಂಬಿಗಳಾದರು. ಇದರ ಪಾಪದೋಷ ಮುಸ್ಲಿಮ್ ಮತಪಂಡಿತರ ಕೊರಳ ಮೇಲಿದೆ. ಕ್ರೈಸ್ತ ಮತ ಪ್ರಚಾರಕರು ಮುಗ್ಧರಾಗಿ ನಟಿಸಿ ಮುಸ್ಲಿಮರ ಸಮೀಪ ಹೋಗಿ ಬಹಳ ಮೃದುವಾಗಿ ಹೇಳುತ್ತಾರೆ: ನಿಮ್ಮ ಪೈಗಂಬರ್ ಮೃತರಾಗಿ ಮದೀನದಲ್ಲಿ ಮಣ್ಣಿನಡಿಯಲ್ಲಿ ಹೂಳಲ್ಪಟ್ಟಿರುವರು. ಆದರೆ ನಮ್ಮ ಈಸಾ ಮಸೀಹ್ ಎರಡು ಸಾವಿರ ವರ್ಷಗಳಿಂದ ಜೀವಿಸುತ್ತಾ ದೇವನ ಸಮೀಪ ಆಸೀನರಾಗಿರುವರು. ಈ ಇಬ್ಬರಲ್ಲಿ ಶ್ರೇಷ್ಠರು ಯಾರು ಎಂದು ನೀವೇ ಹೇಳಿರಿ – ಜೀವಂತವಾಗಿರುವ ಪ್ರವಾದಿ ಯಾರು? ಮೃತ ಪ್ರವಾದಿ ಯಾರು?

ಹಝ್ರತ್ ಈಸಾ ಮಸೀಹ್(ಅ) ಮೃತರಾಗಿರುವರೆಂದು ಹೇಳಿದರೆ ಮುಸ್ಲಿಮರು ತಮ್ಮ ನಂಬಿಕೆ ಪ್ರಕಾರ ಅವಿಶ್ವಾಸಿಗಳಾಗುತ್ತಾರೆ. ಆದುದರಿಂದ ನಿರ್ವಾಹವಿಲ್ಲದೆ ಮೆಲ್ಲಗೆ ಹೇಳುತ್ತಾರೆ – ಈ ವಿಷಯಕ್ಕೆ ಸಂಬಂಧಿಸಿ ಈಸಾ ಮಸೀಹರೇ ಶ್ರೇಷ್ಠರೆಂದು. ಅನಂತರ ಕ್ರೈಸ್ತ ಪಾದರಿ ಹೇಳುತ್ತಾರೆ: "ನೋಡಿರಿ, ಲೋಕದ ಅಂತಿಮ ಕಾಲಘಟ್ಟದಲ್ಲಿ ಮುಸ್ಲಿಮ್ ಸಮುದಾಯದಲ್ಲಿ ಕೆಡುಕುಗಳು ವ್ಯಾಪಿಸುವಾಗ ದೇವನು ನಮ್ಮ ಈಸಾ ಮಸೀಹರನ್ನು ಆಕಾಶದಿಂದ ಕಳುಹಿಸಿಕೊಡುವನು. ಆ ಕಾಲದ ಕೆಡುಕುಗಳು ಎಷ್ಟು ಗಂಭೀರವಾಗಿರುವುದೆಂದರೆ, ಇಸ್ಲಾಮಿನ ಪೈಗಂಬರರ ಆಧ್ಯಾತ್ಮ ಶಕ್ತಿಗೆ ಅದನ್ನು ಪರಿಹರಿಸಲು ಅಸಾಧ್ಯವಾಗಿರುವುದು. ಏಕೆಂದರೆ ಯಾರನ್ನಾದರೂ ಜೀವಂತವಾಗಿರಿಸಿ ಮುಸ್ಲಿಮ್ ಸಮುದಾಯದ ಸುಧಾರಣೆಗೆ ಲೋಕದ ಅಂತಿಮ ಕಾಲಘಟ್ಟದಲ್ಲಿ ಕಳುಹಿಸುವ ಆವಶ್ಯಕತೆ ಇದ್ದಿದ್ದರೆ ಮುಹಮ್ಮದ್ ಪೈಗಂಬರರನ್ನೇ ದೇವನು ಜೀವಂತವಾಗಿ ಇರಿಸುತ್ತಿದ್ದನು. ಆದರೆ ಈ ಮುಖ್ಯ ಕೆಲಸವನ್ನು ಮಾಡಲಿಕ್ಕೋಸ್ಕರ ಮುಹಮ್ಮದರ ಬದಲು ಈಸಾ ಮಸೀಹರನ್ನು ಜೀವಂತವಾಗಿ ಇರಿಸಲಾಗಿದೆ.

ಇಷ್ಟು ಹೇಳಿ ಹಝ್ರತ್ ಈಸಾ ಮಸೀಹರ ಶ್ರೇಷ್ಠತೆಯನ್ನು ಒಪ್ಪುವಂತೆ ಮಾಡಲಾಗುತ್ತದೆ. ಅನಂತರ ಮುಂದಿನ ಹೆಜ್ಜೆ ಹಾಕಲಾಗುತ್ತದೆ. ಪಾದರಿ ಬಹಳ ಮುಗ್ಧತೆಯಿಂದ ಮುಸ್ಲಿಮರೊಂದಿಗೆ ಹೇಳುತ್ತಾರೆ: ಮುಹಮ್ಮದ್ ಪೈಗಂಬರರೊಂದಿಗೆ ಅವರ ಶತ್ರುಗಳು ಆಕಾಶವನ್ನೇರಿ ಹೋಗುವ ಪವಾಡ ತೋರಿಸಲು ಹೇಳಿದಾಗ ಪೈಗಂಬರ್ ನಿರಾಕರಿಸಿದರು ಮತ್ತು ಹೇಳಿದರು: "ನಾನು ಕೇವಲ ಒಬ್ಬ ಮನುಷ್ಯನಾಗಿರುವೆನು. ಮನುಷ್ಯ ಆಕಾಶಕ್ಕೆ ಏರಿ ಹೋಗುವುದು ನಿಷಿದ್ಧವಾಗಿದೆ." ಆದರೆ ನೀವು ನೋಡಿರಿ, ಈಸಾ ಮಸೀಹರು ಜೀವಂತವಾಗಿ ಆಕಾಶಕ್ಕೆ ಏರಿ ಹೋದರೆಂದು ನೀವು ಸಹ ನಂಬುತ್ತಿರುವಿರಿ.

ಪಾದರಿಗಳು ಹೇಳುವ ಈ ವಿಷಯಗಳಿಗೆ ಉತ್ತರ ಕೊಡುವವರು ಯಾರು? ಜನರು ಮೌಲವಿಗಳ ಸಮೀಪ ಹೋದರೆ – ಜನರ ವಿಶ್ವಾಸದ ಪೊಳ್ಳು ದಿಬ್ಬಗಳ ಮೇಲೆ ಈ ಮಾತುಗಳಿಂದ ಮೊದಲೇ ಭೂಕಂಪ ಸಂಭವಿಸಿರುತ್ತದೆ – ಅವರು ಅದು, ಇದು ಹೇಳಿ ಉತ್ತರ ನೀಡದೆ ತಪ್ಪಿಸಿಕೊಳ್ಳುತ್ತಾರೆ. ಜನರು ಮೌಲವಿಗಳಿಂದ ಸಮಾಧಾನಕರವಾದ ಉತ್ತರ ಲಭಿಸದೆ ಇರುವಾಗ ನಿರಾಶರಾಗಿ ಚರ್ಚುಗಳ ಕಡೆಗೆ ಅಭಿಮುಖೀಕರಿಸುತ್ತಾರೆ.

ಇಸ್ಲಾಮ್ ಧರ್ಮವು ಒಂದು ಕಾಲದಲ್ಲಿ **ಯದ್‌ಖುಲೂನ ಫೀದೀನಿಲ್ಲಾಹಿ ಅಫ್‌ವಾಜ** – ಅಲ್ಲಾಹನ ಧರ್ಮದಲ್ಲಿ ಗುಂಪು ಗುಂಪಾಗಿ ಬಂದು ಸೇರುವರು. (ಪವಿತ್ರ ಖುರ್‌ಆನ್ 110:3) – ಈ ದೃಶ್ಯವನ್ನು ಪ್ರದರ್ಶಿಸುತ್ತಿತ್ತು. ಅದು ಈಗ **ಯಖ್‌ರುಜೂನ ಮಿನ್ ದೀನಿಲ್ಲಾಹಿ ಅಫ್‌ವಾಜ** – ಅಲ್ಲಾಹನ ಧರ್ಮದಿಂದ ಗುಂಪು ಗುಂಪಾಗಿ ಹೊರಗೆ ಹೋಗುವರು ಎಂಬ ದೃಶ್ಯವನ್ನು ಪ್ರಕಟಿಸುತ್ತಾ ಇದೆ.*

ಮುಸ್ಲಿಮನೆಂದು ಹೇಳಿಕೊಳ್ಳುವವನ ಹೃದಯದಲ್ಲಿ ಈ ಘಟನೆ

* ಇದು 20ನೇ ಶತಮಾನದ ಆರಂಭದ ಕಾಲದ ಸ್ಥಿತಿಯಾಗಿದೆ. (ಇದು 1917ರಲ್ಲಿ ಬರೆದುದಾಗಿದೆ.) ಈಗ ಪರಿಸ್ಥಿತಿ ಸಂಪೂರ್ಣ ಬದಲಾಯಿಸಿದೆ. ಅಹ್ಮದಿಯಾ ಜಮಾಅತ್ ಈ ಬದಲಾವಣೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ – ಅನುವಾದಕ.

ಗಳಿಂದ ನೋವು ಇರುವುದೇ? ಹಾ, ಈ ವಿಷಯದ ಬಗ್ಗೆ ಉತ್ತಮ ಸಂಕಲ್ಪದಿಂದ ಯೋಚಿಸುವವರು ಬಹಳ ಕಡಿಮೆ ಎನ್ನುವುದು ದುಃಖಕರವಾಗಿದೆ.

ಯಾರ ಪುನರಾಗಮನದ ಬಗ್ಗೆ ಭವಿಷ್ಯ ನುಡಿಯಲಾಗಿದೆಯೋ ಆ ಮಹಾನುಭಾವರು ಆಗಮಿಸಿ ತನ್ನ ಆಗಮನದ ವಾಸ್ತವಿಕ ವಿವರಣೆ ನೀಡಿದ್ದಾರೆ. ಇಲ್‌ಯಾಸ್ (ಎಲೀಯಾ) ಪ್ರವಾದಿ ಆಕಾಶದಿಂದ ಇಳಿದು ಮಸೀಹರ ಆಗಮನಕ್ಕೆ ಮೊದಲು ಬರುವರೆಂದು ಪ್ರತೀಕ್ಷಿಸಲ್ಪಡುತ್ತಿದ್ದಾಗ ಹಝ್ರತ್ ಈಸಾ ಮಸೀಹರು ಇಲ್‌ಯಾಸ್ ಪ್ರವಾದಿಯ ಆಗಮನ ಯಹ್‌ಯಾ (ಯೋಹಾನ) ಪ್ರವಾದಿಯ ಆಗಮನದಿಂದ ಈಡೇರಿದೆ ಎಂದು ಹೇಳಿದರು. (ಮತ್ತಾಯ 11: 13,14 ನೋಡಿರಿ). ಈ ಸ್ಪಷ್ಟವಾದ ಉದಾಹರಣೆ ಮುಸ್ಲಿಮರ ಮುಂದೆ ಇದ್ದರೂ ಮುಸ್ಲಿಮರು ತಪ್ಪು ಗ್ರಹಿಕೆಗೆ ಒಳಗಾಗುವುದು ಆಶ್ಚರ್ಯಕರವಾಗಿದೆ.

ಹಝ್ರತ್ ಈಸಾ ಮಸೀಹ್ ಲೋಕದ ಅಂತಿಮ ಕಾಲಘಟ್ಟದಲ್ಲಿ ಆಕಾಶದಿಂದ ಇಳಿದು ಬರುವರೆಂದು ಹೇಳಲಾಗುತ್ತಿದೆಯೋ ಅದಕ್ಕಿಂತ ಹೆಚ್ಚು ಸ್ಪಷ್ಟವಾಗಿ ಇಲ್‌ಯಾಸ್ ಪ್ರವಾದಿಯು ಆಕಾಶದಿಂದ ಮಸೀಹರ ಆಗಮನಕ್ಕೆ ಮೊದಲು ಇಳಿದು ಬರುವರೆಂದು ಹೇಳಲಾಗಿತ್ತು. ಇಲ್‌ಯಾಸ್ ಪ್ರವಾದಿಯ ಆಗಮನವು ಅವರಿಗೆ ಹೋಲಿಕೆ ಹೊಂದಿದ ಇನ್ನೊಬ್ಬರ ಆಗಮನದಿಂದ ಈಡೇರಿದೆ ಎಂದು ನಂಬಲಾಗುತ್ತಿದೆ. ಆದರೆ ಹಝ್ರತ್ ಈಸಾ ಮಸೀಹ್ ಸ್ವತಃ ಇಳಿದು ಬರಬೇಕೆಂದು ಬಯಸುತ್ತಾರೆ. ದುಃಖಕರವಾದ ವಿಷಯವೇನೆಂದರೆ, ಯಾವುದಕ್ಕೆ ಸಂಬಂಧಿಸಿ ಯಹೂದಿಯರು ತಪ್ಪು ಮಾಡಿದರೋ ಅದೇ ವಿಷಯಕ್ಕೆ ಸಂಬಂಧಿಸಿ ಮುಸ್ಲಿಮರು ತಪ್ಪು ಮಾಡುತ್ತಾರೆ. ಆದರೆ ಮುಸ್ಲಿಮರ ಹಾಗೆ ಯಹೂದಿಯರು ದೈವಿಕ ಹಿಡಿತಕ್ಕೊಳಗಾಗಿಲ್ಲ. ಏಕೆಂದರೆ ಯಹೂದಿಯರ ಮುಂದೆ ಹಿಂದಿನ ಉದಾಹರಣೆ ಯಾವುದೂ ಇರಲಿಲ್ಲ. ಆದರೆ ಮುಸ್ಲಿಮರಿಗೆ ಇಂತಹ ವಾಗ್ದಾನಗಳ ಉದಾಹರಣೆ ಇದೆ. ಹಿಂದಿನ ಕಾಲದ ಒಬ್ಬ ಪ್ರವಾದಿಯ ಆಗಮನದ ಭವಿಷ್ಯವಾಣಿ ಅವರಿಗೆ ಹೋಲಿಕೆ ಹೊಂದಿದವರ ಆಗಮನದಿಂದ ಈಡೇರುತ್ತದೆ ಎಂದೂ ಅದೇ ಪ್ರವಾದಿ ಆಗಮಿಸುವುದಿಲ್ಲವೆಂದೂ ಅವರಿಗೆ ತಿಳಿದಿರುತ್ತದೆ.

ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಹೇಳಿದ ಮಾತು ಸತ್ಯವಾಗಿ ಈಡೇರಿತು! ನನ್ನ ಸಮುದಾಯದ ಜನರು ಯಹೂದಿಯರ ಹೆಜ್ಜೆಗೆ ಹೆಜ್ಜೆ ಹಾಕಿ ಸಾಗುವರು ಎಂದು ಹಝ್ರತ್ ಪೈಗಂಬರರು[ಸ] ಹೇಳಿದ್ದರು (ಬುಖಾರಿ). ಹಿಂದೆ ಆಗಮಿಸಿದ ಒಬ್ಬ ಪ್ರವಾದಿಯ ಪುನರಾಗಮನವನ್ನು ಅದೇ ಪ್ರವಾದಿಯು ಆಗಮಿಸುವುದಾಗಿ ನಂಬಿದ ಹಾಗೆ ನನ್ನ ಸಮುದಾಯದ ಜನರು ಸಹ ನಂಬುವರು ಎಂದು ಇದರ ಅರ್ಥವಾಗಿದೆ. ಆದರೆ ಮುಸ್ಲಿಮರು ಈ ಮುನ್ನೆಚ್ಚರಿಕೆಯಿಂದ ಲಾಭ ಪಡೆಯಲಿಲ್ಲ. ಆಗಮಿಸಿದ ವಾಗ್ದತ್ತ ಮಸೀಹರನ್ನು ಅವರು ನಿರಾಕರಿಸಿ ಹಝ್ರತ್ ಈಸಾ ಮಸೀಹ್ ಸ್ವತಃ ಬರಬೇಕಾಗಿತ್ತೆಂದು ಹೇಳಿದರು.

ಹಝ್ರತ್ ಈಸಾ ಅಲೈಹಿಸ್ಸಲಾಮ್ ಸ್ವತಃ ಆಗಮಿಸಿದರೆ ಅದು ಹಝ್ರತ್ ಮುಹಮ್ಮದ್ ಪೈಗಂಬರರಿಗೆ[ಸ] ಅಪಮಾನಕರವಾಗುವುದು ಮಾತ್ರವಲ್ಲದೆ ಹಝ್ರತ್ ಈಸಾರಿಗೂ[ಅ] ಅಪಮಾನಕರವಾಗುವುದು. ಏಕೆಂದರೆ ಹಝ್ರತ್ ಈಸಾ[ಅ] ಹಝ್ರತ್ ಮುಹಮ್ಮದ್ ಪೈಗಂಬರರಿಗಿಂತ[ಸ] ಎಷ್ಟು ಚಿಕ್ಕ ಪದವಿ ಪಡೆದ ಪ್ರವಾದಿಯಾಗಿದ್ದರೂ ಅವರು ಅಲ್ಲಾಹನ ಒಬ್ಬ ಪ್ರವಾದಿಯಾಗಿದ್ದರು. ಅವರು ತನ್ನ ಪ್ರವಾದಿತ್ವವನ್ನು ಹಝ್ರತ್ ಮುಹಮ್ಮದ್ ಪೈಗಂಬರರನ್ನು[ಸ] ಅನುಸರಿಸುವ ಮೂಲಕ ಪಡೆದವರಾಗಿರಲಿಲ್ಲ. ಅವರು ಪ್ರವಾದಿತ್ವವನ್ನು ಅಲ್ಲಾಹನಿಂದ ನೇರವಾಗಿ ಪಡೆದರು. ಅವರು ಪುನರಾಗಮಿಸಿದರೆ ಅದರ ಅರ್ಥ ಅವರನ್ನು ಅವರ ಸ್ವತಂತ್ರ ಪ್ರವಾದಿತ್ವದ ಸ್ಥಾನದಿಂದ ಇಳಿಸಿ ಒಬ್ಬ ಉಮ್ಮತೀ ಪ್ರವಾದಿ (ಶಿಷ್ಯ ಪ್ರವಾದಿ) ಆಗಿ ಮಾಡಲಾಯಿತೆಂದು ಆಗುತ್ತದೆ. ಏಕೆಂದರೆ ಅವರು ಪುನರಾಗಮಿಸಿ ಸ್ವತಂತ್ರ ಪ್ರವಾದಿಯಾಗಿ ಇರಲಾರರು. ಏಕೆಂದರೆ ಸ್ವತಂತ್ರ ಪ್ರವಾದಿಯಾಗಿ ಆಗಮಿಸುವುದು ಖತ್‌ಮುನ್ನುಬುವ್ವತ್‌ಗೆ ವಿರುದ್ಧವಾಗಿದೆ. ಖಾತಮುನ್ನಬಿಯ್ಯೀನರ ಆಗಮನದ ನಂತರ ಹೊಸ ಅಥವಾ ಹಳೆಯ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರನ್ನು[ಸ] ಅನುಸರಿಸದೆ ನೇರವಾಗಿ, ಸ್ವತಂತ್ರವಾಗಿ ಪ್ರವಾದಿಯಾಗಿ ಬರಲು ಸಾಧ್ಯವಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಆಗಮನದ ನಂತರ ಕೇವಲ ಅದರ ನೆರಳಿನ ರೂಪದ ಉಮ್ಮತೀ ನುಬುವ್ವತಿನ ಬಾಗಿಲು ಮಾತ್ರ ತೆರೆದಿದೆ. ಆದುದರಿಂದ ಹಝ್ರತ್ ಈಸಾ ಮಸೀಹ್ ಸ್ವತಃ ಆಗಮಿಸಿದರೆ ಅವರ ಹಿಂದಿನ ಸ್ಥಾನದಿಂದ ಸ್ಥಾನ ಭ್ರಷ್ಟರನ್ನಾಗಿ ಮಾಡಿ ಒಬ್ಬ ಉಮ್ಮತೀ ನಬಿಯಾಗಿ ಸ್ಥಾನ ನೀಡಿ ಮಾತ್ರ ಆಗಮಿಸಲು ಸಾಧ್ಯ. ಆದರೆ ಇದು ಅಲ್ಲಾಹನ ನಡೆವಳಿಕೆಗೆ ವಿರುದ್ಧವಾಗಿದೆ. ಏಕೆಂದರೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

**ಬಿ ಅನ್ನಲ್ಲಾಹ ಲಮ್‌ಯಾಕು ಮುಗ‌ಯ್ಯಿರನ್ ನಿಅ್‌ಮತನ್ ಅನ್‌ಅಮಹಾ ಅಲಾ ಖೌಮಿನ್ ಹತ್ತಾ ಯುಗೈಯ್ಯಿರೂ ಮಾ ಬಿ ಅನ್‌ಫುಸಿಹಿಮ್ –**

"ಒಂದು ಜನಾಂಗದ ಸ್ಥಿತಿಯಲ್ಲಿ ಸ್ವಯಂ ಅವರೇ ಬದಲಾವಣೆ ಮಾಡುವ ವರೆಗೆ ಅವರಿಗೆ ತಾನು ನೀಡಿರುವ ಅನುಗ್ರಹದಲ್ಲಿ ಅಲ್ಲಾಹನು ಮಾರ್ಪಾಡು ಮಾಡುವುದಿಲ್ಲ." (8:54).

ಪವಿತ್ರ ಖುರ್‌ಆನ್ ವಚನ ಸ್ಪಷ್ಟವಾಗಿ ಮೇಲಿನಂತೆ ಹೇಳುವಾಗ ಅದಕ್ಕೆ ವಿರುದ್ಧವಾಗಿ ಹಝ್ರತ್ ಈಸಾ ಮಸೀಹರೇ ಸ್ವತಃ ಲೋಕದ ಅಂತಿಮ ಕಾಲಘಟ್ಟದಲ್ಲಿ ಆಕಾಶದಿಂದ ಇಳಿದು ಬರುವರೆಂದು

ಹೇಳುವುದಾದರೂ ಹೇಗೆ? ಏಕೆಂದರೆ ಅವರು ಸ್ವತಃ ಆಗಮಿಸಿದರೆ ಅದರ ಅರ್ಥ ಅವರಿಂದ ಅವರ ಸ್ವತಂತ್ರ ನುಬುವ್ವತಿನ ಪದವಿಯನ್ನು ಕಿತ್ತುಕೊಳ್ಳಲಾಯಿತೆಂದಾಗುತ್ತದೆ.

ಪವಿತ್ರ ಖುರ್‌ಆನ್ ಹಝ್ರತ್ ಈಸಾ ಮಸೀಹ್ ಬಗ್ಗೆ ಏನು ಹೇಳಿದೆ ಎಂದು ಸಹ ಪರಿಶೀಲಿಸಬೇಕು. ಅಲ್ಲಾಹನು ಹಝ್ರತ್ ಈಸಾ ಮಸೀಹರನ್ನು ಪವಿತ್ರ ಖುರ್‌ಆನ್‌ನಲ್ಲಿ **ರಸೂಲನ್ ಇಲಾ ಬನೀ ಇಸ್ರಾಈಲ – "ಇಸ್ರಾಈಲ್ ಸಂತತಿಗಳೆಡೆಗೆ ಒಬ್ಬ ಸಂದೇಶವಾಹಕ"** (3:50) ಎಂದು ಹೇಳಿರುತ್ತಾನೆ. ಅದೇ ಹಝ್ರತ್ ಈಸಾ ಮಸೀಹ್ ಪುನರಾಗಮಿಸುವಾಗ ಅವರು ಕೇವಲ ಇಸ್ರಾಈಲ್ ಸಂತತಿಗಳಿಗೆ ಮಾತ್ರವಲ್ಲ ಲೋಕದಲ್ಲಿರುವ ಎಲ್ಲರಿಗೂ ಸಂದೇಶವಾಹಕರಾಗುವರು. ಆದರೆ ಇದು ಮೇಲೆ ಬರೆದ ಪವಿತ್ರ ಖುರ್‌ಆನಿನ ವಚನಕ್ಕೆ ವಿರುದ್ಧವಾಗುತ್ತದೆ. ಪವಿತ್ರ ಖುರ್‌ಆನಿನ ವಚನಗಳನ್ನು ಮನ್‌ಸೂಖ್ (ರದ್ದುಗೊಳಿಸಲಾದುದು) ಮತ್ತು ಬಾತಿಲ್ (ಅಸತ್ಯ) ಎಂದು ಸಾಬೀತುಗೊಳಿಸಲು ಇಚ್ಛಿಸುವವರು ಮತ್ತು ಧೈರ್ಯ ತೋರಿಸುವವರು ನಿಸ್ಸಂಶಯವಾಗಿ ಹಝ್ರತ್ ಈಸಾ ಮಸೀಹರನ್ನು ಪ್ರತೀಕ್ಷಿಸಲಿ. ಆದರೆ ಅಲ್ಲಾಹನ ವಚನಗಳಲ್ಲಿ ಹಸ್ತಕ್ಷೇಪ ಮಾಡಿದ ಯಹೂದಿಯರನ್ನು ಶಪಿಸಿದ ಅಲ್ಲಾಹನಿಗೆ ನಾವು ಭಯಪಡುತ್ತೇವೆ. ಅಲ್ಲಾಹನ ನಡೆವಳಿಕೆಗೆ ವಿರುದ್ಧವೂ ಹಝ್ರತ್ ಪೈಗಂಬರರಿಗೆ[ಸ] ಮತ್ತು ಹಝ್ರತ್ ಈಸಾ ಮಸೀಹರಿಗೆ ಬಹಳ ಅಪಮಾನಕರವೂ ಆಗಿರುವ ವಿಶ್ವಾಸವನ್ನು ಮುಸ್ಲಿಮರು ಹೊಂದಿರುವುದರಿಂದ ನಾವು ಎಷ್ಟು ನೋವನ್ನು ಅನುಭವಿಸುತ್ತಿದ್ದೇವೆಂಬುದಕ್ಕೆ ಅಲ್ಲಾಹನು ಸಾಕ್ಷಿಯಾಗಿದ್ದಾನೆ. ಆದರೆ ನಮ್ಮ ಮುಸ್ಲಿಮ್ ಸಹೋದರರು ತಮ್ಮ ತಪ್ಪನ್ನು ಮನವರಿಕೆ ಮಾಡುವ ಕಾಲವು ಬರಲಿದೆ. ಅವರು ಹಝ್ರತ್ ಈಸಾ ಮಸೀಹರ ಆಗಮನವನ್ನು ಪ್ರತೀಕ್ಷಿಸುತ್ತಾ ಆಕಾಶವನ್ನು ನೋಡುವುದರ ಬದಲಾಗಿ ತಮ್ಮ ಹಿಂದೆ ನೋಡುವರು. ಆಗ ಹಝ್ರತ್ ವಾಗ್ದತ್ತ ಮಸೀಹರು[ಅ] ಹೇಳಿದ ಈ ಕೆಳಗಿನ ಮಾತು ಈಡೇರುವುದು:

**ಇಮ್‌ರೋಝ್ ಖೌಮೆಮನ್ ನ ಶನಾಸದ್ ಮಖಾಮೆ ಮನ್ ರೋಝೆ ಬಗರ್‌ಯ ಯಾದ್ ಕುನ್‌ರ್ ವಖ್ತೆ ಖೂಶ್ತರಮ್**.

"ಇಂದು ನನ್ನ ಸಮುದಾಯ ನನಗೆ ದೇವನು ನೀಡಿದ ಸ್ಥಾನವನ್ನು ಗುರುತಿಸುತ್ತಾ ಇಲ್ಲ. ಆದರೆ ಒಂದು ಕಾಲ ಬರಲಿದೆ – ನಾನು ಆಗಮಿಸಿದ ಅನುಗ್ರಹೀತ ಕಾಲವನ್ನು ನೆನಪಿಸಿ ಅಳುವುದು.

ಹಝ್ರತ್ ವಾಗ್ದತ್ತ ಮಸೀಹರು ಹೀಗೆ ಹೇಳಿದರು: "ಎಲೈ ಜನರೇ, ಭೂಮ್ಯಾಕಾಶಗಳನ್ನು ಸೃಷ್ಟಿಸಿದವನ ಈ ಭವಿಷ್ಯವಾಣಿಯನ್ನು ಆಲಿಸಿರಿ. ಅವನು ತನ್ನ ಈ ಜಮಾಅತನ್ನು ಎಲ್ಲ ದೇಶಗಳಲ್ಲೂ ಹರಡುವನು. ಸಾಕ್ಷ್ಯಾಧಾರಗಳ ಮೂಲಕ ಅಲ್ಲಾಹನು ಎಲ್ಲರ ಮೇಲೆ ಜಯಶಾಲಿಯನ್ನಾಗಿ ಮಾಡುವನು. ಆ ದಿನ ಬರಲಿದೆ, ಅದು ಸಮೀಪವೇ ಇದೆ. ಲೋಕದಲ್ಲಿ ಈ ಧರ್ಮವು ಮಾತ್ರ ಗೌರವಿಸಲ್ಪಡುವುದು. ದೇವನು ಈ ಧರ್ಮ ಮತ್ತು ಈ ಜಮಾಅತಿಗೆ ಅಸಾಧಾರಣವಾದ, ಅಪೂರ್ವವಾದ ಅನುಗ್ರಹವನ್ನು ಸುರಿಯುವನು. ಈ ಜಮಾಅತನ್ನು ನಾಶಗೊಳಿಸಲು ಬಯಸುವ ಪ್ರತಿಯೊಬ್ಬನನ್ನು ನಿರಾಶೆಗೊಳಿಸುವನು. ಈ ಜಯವು ಯಾವಾಗಲೂ ಇರುವುದು. ಖಿಯಾಮತ್ ತನಕ ಮುಂದುವರಿಯುವುದು.

"ಜನರು ಈಗ ನನ್ನನ್ನು ಪರಿಹಾಸ ಮಾಡುತ್ತಾ ಇದ್ದಾರೆ. ಆದರೆ ಈ ಪರಿಹಾಸದಿಂದ ಯಾವ ಹಾನಿಯೂ ಇಲ್ಲ. ಪರಿಹಾಸ ಮಾಡಲ್ಪಡದ ಯಾವ ಪ್ರವಾದಿಯೂ ಇಲ್ಲ. ವಾಗ್ದತ್ತ ಮಸೀಹ್ ಸಹ ಪರಿಹಾಸಕ್ಕೊಳಪಡುವುದು ಆವಶ್ಯಕವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ: **ಯಾ ಹಸ್‌ರತನ್ ಅಲಲ್ ಇಬಾದಿ ಮಾಯಅ್‌ತೀಹಿಮ್ ಮಿನ್‌ರ್ರಸೂಲಿನ್ ಇಲ್ಲಾ ಕಾನೂ ಬಿಹೀ ಯಸ್‌ತಹ್‌ಝಿಊನ್** – 'ಹಾ ಮನುಷ್ಯರ ದುರದೃಷ್ಟವೇ! ಅವರ ಅಪಹಾಸ್ಯಕ್ಕೆ ಗುರಿಯಾಗದೆ ಯಾವ ಪ್ರವಾದಿಯೂ ಅವರ ಬಳಿಗೆ ಬರುವುದಿಲ್ಲ!' (36:31). ಪ್ರತಿಯೊಬ್ಬ ಪ್ರವಾದಿ ಪರಿಹಾಸಕ್ಕೆ ಗುರಿಯಾಗುವುದು ಅಲ್ಲಾಹನಿಂದ ಅವರ ಸತ್ಯತೆಯ ಚಿಹ್ನೆಯಾಗಿದೆ. ಆದರೆ ಎಲ್ಲ ಜನರ ಮುಂದೆ ಆಕಾಶದಿಂದ ಇಳಿದು ಬರುವವನನ್ನು ಮತ್ತು ಅವರ ಜೊತೆ ದೇವದೂತರು ಸಹ ಇರುವಾಗ ಯಾರು ಪರಿಹಾಸ ಮಾಡುವರು? ಈ ಸಾಕ್ಷ್ಯಾಧಾರದಿಂದ ಬುದ್ಧಿವಂತನಾದ ಮನುಷ್ಯನು, ಆಕಾಶದಿಂದ ವಾಗ್ದತ್ತ ಮಸೀಹ್ ಇಳಿದು ಬರುವ ಯೋಚನೆ ಕೇವಲ ಸುಳ್ಳೆಂದು ಮನವರಿಕೆ ಮಾಡಿಕೊಳ್ಳಬಹುದು. *ನೆನಪಿಟ್ಟುಕೊಳ್ಳಿರಿ. ಯಾರೂ ಆಕಾಶದಿಂದ ಇಳಿದು ಬರಲಿಕ್ಕಿಲ್ಲ. ಈಗ ಜೀವಿಸಿರುವ ನಮ್ಮ ಎಲ್ಲ ವಿರೋಧಿಗಳು ಮೃತರಾಗುವರು. ಅವರಲ್ಲಿ ಯಾರೂ ಈಸಬ್ನು ಮರ್‌ಯಮ್ ಆಕಾಶದಿಂದ ಇಳಿದು ಬರುವುದನ್ನು ಕಾಣಲಾರರು. ಅನಂತರ ಬಾಕಿಯಾಗಿ ಉಳಿದ ಅವರ ಮಕ್ಕಳು ಸಹ ಮೃತರಾಗುವರು. ಅವರಲ್ಲಿ ಯಾರೂ ಈಸಬ್ನು ಮರ್‌ಯಮ್ ಆಕಾಶದಿಂದ ಇಳಿದು ಬರುವುದನ್ನು ಕಾಣಲಾರರು. ಅನಂತರ ಅವರ ಮಕ್ಕಳ ಮಕ್ಕಳು ಮೃತರಾಗುವರು. ಅವರು ಸಹ ಮರ್‌ಯಮ್ ಪುತ್ರರನ್ನು ಆಕಾಶದಿಂದ ಇಳಿದು ಬರುವುದಾಗಿ ಕಾಣಲಾರರು. ಆಗ ದೇವನು ಜನರ ಹೃದಯಗಳಲ್ಲಿ ಗಾಬರಿಯನ್ನುಂಟುಮಾಡುವನು. ಶಿಲುಬೆಯ ಪ್ರಾಬಲ್ಯದ ಕಾಲವು ಆಗ ದಾಟಿ ಹೋಗಿರುವುದು. ಲೋಕವು ಬೇರೆ ರೀತಿಯಲ್ಲಿ ಪರಿವರ್ತಿತವಾಗಿರುವುದು. ಆದರೆ ಮರ್‌ಯಮ್ ಪುತ್ರ ಈಸಾ ಆಕಾಶದಿಂದ ಇಳಿದು ಬರಲಿಲ್ಲ. ಆಗ ಬುದ್ಧಿಶಾಲಿಗಳು ಈ ವಿಶ್ವಾಸದ ಬಗ್ಗೆ ಬೇಸರ ಹೊಂದುವರು. ಇಂದಿನಿಂದ ಮೂರನೆಯ ಶತಮಾನದ ದಿನಗಳು ಪೂರ್ಣವಾಗುವ ಮೊದಲೇ ಈಸಾರನ್ನು ಪ್ರತೀಕ್ಷಿಸುವ ಮುಸ್ಲಿಮರು ಮತ್ತು ಕ್ರೈಸ್ತರು ನಿರಾಶೆ ಹೊಂದಿ ಈ ವಿಶ್ವಾಸದ ಬಗ್ಗೆ*

*ಸಂದೇಹ ಬಾಧಿತರಾಗಿ ಈ ಸುಳ್ಳು ನಂಬಿಕೆಯನ್ನು ಬಿಟ್ಟುಬಿಡುವರು. ಆಗ ಲೋಕದಲ್ಲಿ ಒಂದೇ ಧರ್ಮ ಇರುವುದು. ಒಬ್ಬನೇ ನೇತಾರ ಇರುವರು. ನಾನೊಂದು ಬೀಜ ಬಿತ್ತಲು ಬಂದೆನು. ನನ್ನ ಕೈಗಳಿಂದ ಆ ಬೀಜ ಬಿತ್ತಲ್ಪಟ್ಟಿದೆ. ಅದು ಮೊಳಕೆಯೊಡೆದು ಬೆಳೆದು ವೃಕ್ಷವಾಗುವುದು. ಅದರ ಬೆಳವಣಿಗೆಯನ್ನು ತಡೆಯಬಲ್ಲವರು ಯಾರೂ ಇಲ್ಲ.* (ತಧ್‌ಕಿರತುಶುಹಾದತೈನ್ ಪುಟ 64,65).

**ಅನುಬಂಧ***

ಅಹ್ಮದಿಯಾ ಜಮಾಅತಿನ ಸ್ಥಾಪಕರು ಪ್ರಕಟಿಸಿದ ಭವಿಷ್ಯವಾಣಿಯಲ್ಲಿ ಮುನ್ನೂರು ವರ್ಷಗಳೊಳಗೆ ಮುಸ್ಲಿಮರೂ ಕ್ರೈಸ್ತರೂ ಹಝ್ರತ್ ಈಸಾ ಮಸೀಹರು ಆಕಾಶದಿಂದ ಶರೀರ ಸಮೇತ ಇಳಿದು ಬರುವ ವಿಶ್ವಾಸದ ಬಗ್ಗೆ ನಿರಾಶರಾಗಿ ಅದನ್ನು ಬಿಟ್ಟುಬಿಡುವರೆಂದು ಹೇಳಿದ್ದರು. ಲೋಕವು ಬೇರೆ ರೀತಿ ಪರಿವರ್ತನೆ ಹೊಂದುವುದು ಎಂದು ಸಹ ಹೇಳಿದ್ದರು. ಈ ಭವಿಷ್ಯವಾಣಿಯ ಈಡೇರಿಕೆಯ ಪ್ರಾರಂಭಿಕ ಚಿಹ್ನೆಗಳು ಗೋಚರಿಸಲು ತೊಡಗಿವೆ. ಆಕಾಶದಿಂದ ಯಾವುದಾದರೂ ಮಸೀಹ್ ಇಳಿದು ಬರುವ ನಂಬಿಕೆ ತಪ್ಪೆಂದು ಮುಸ್ಲಿಮರಲ್ಲಿ ಒಂದು ವಿಭಾಗದ ಜನರು ಹೇಳುತ್ತಿದ್ದಾರೆ. ದಿವಂಗತ ಅಲ್ಲಾಮ ಇಕ್ಬಾಲ್ ಸಹ, ತಾನು ನಿಧನ ಹೊಂದುವ ಸ್ವಲ್ಪ ಸಮಯದ ಮೊದಲು ಒಂದು ಲೇಖನದಲ್ಲಿ ಹೀಗೆ ಹೇಳಿದ್ದಾರೆ: **"**ಈಸಾ ಮಸೀಹ್ ಆಕಾಶದಿಂದ ಇಳಿದು ಬರುವರೆಂಬ ವಿಶ್ವಾಸವು ಸರಿಯಾದುದು ಎಂದು ಒಪ್ಪಿಕೊಂಡು ನಮ್ಮ ಮೌಲವಿಗಳು ಬಹಳ ದೊಡ್ಡ ತಪ್ಪು ಕೆಲಸ ಮಾಡಿ ಅಹ್ಮದಿಯಾ ಜಮಾಅತಿನೊಂದಿಗೆ ಚರ್ಚೆ ನಡೆಸುವ ಬಾಗಿಲನ್ನು ತೆರೆದರು. ಈ ಚರ್ಚೆಯಲ್ಲಿ ನಮ್ಮ ಮೌಲವಿಗಳು ಸೋತು ಹೋದರು. ಹಝ್ರತ್ ಈಸಾ ಮಸೀಹ್ ಇಳಿದು ಬರುವರೆಂಬ ವಿಶ್ವಾಸವನ್ನು ಅಲ್ಲಗಳೆದು ಅಹ್ಮದಿಯ್ಯತನ್ನು ಎದುರಿಸಬೇಕಾಗಿತ್ತು. ಹಝ್ರತ್ ಈಸಾ ಮಸೀಹರು ಇಳಿದು ಬರುವರೆಂಬ ವಿಶ್ವಾಸವನ್ನು ನಿರಾಕರಿಸಿ ಎಲ್ಲ ಚರ್ಚೆಗಳನ್ನು ಮುಕ್ತಾಯಗೊಳಿಸಬಹುದಾಗಿತ್ತು. **'ನ ರಹೇ ಬಾನ್ಸ್ ಔರ್ ನ ಬಜೆ ಬಾನ್‌ಸರಿ'** (ಬಿದಿರಿಲ್ಲದಿದ್ದರೆ ಕೊಳಲು ಸಹ ಇರಲಾರದು) ಎಂಬ ನಾಣ್ಣುಡಿ ಪ್ರಕಾರ ಇದು ಸಾಧ್ಯವಾಗುತ್ತಿತ್ತು.**"**

ಮೇಲಿನ ರೀತಿಯ ಅಭಿಪ್ರಾಯಗಳನ್ನು ಬೇರೆ ಕೆಲವು ಮುಸ್ಲಿಮರು ಪ್ರಕಟಿಸಲು ಪ್ರಾರಂಭಿಸಿರುವರು. ಇದು ನಿಶ್ಚಯವಾಗಿಯೂ ಅಹ್ಮದಿಯ್ಯತಿನ ವೈಭವಶಾಲಿಯಾದ ಜಯವನ್ನು ಮತ್ತು ಅಹ್ಮದಿಯಾ ಜಮಾಅತಿನ ಸ್ಥಾಪಕರ, ಮೇಲೆ ಉಲ್ಲೇಖಿಸಿದ ಭವಿಷ್ಯವಾಣಿಯ ಈಡೇರುವಿಕೆಯ ಪ್ರಾರಂಭ ಚಿಹ್ನೆಗಳನ್ನು ಈ ಭವಿಷ್ಯವಾಣಿ ಪ್ರಕಟಗೊಂಡ ನಂತರ ಐವತ್ತು ಅರುವತ್ತು ವರ್ಷಗಳೊಳಗೆ ಕಾಣಿಸಿಕೊಳ್ಳಲು ತೊಡಗಿವೆ. ಈ ಗುಂಪಿನ ಜನರು ವಿಷಯವನ್ನು ಬೇರೆ ರೂಪದಲ್ಲಿ ಪ್ರಕಟಿಸುತ್ತಾರೆ ಎಂಬುದು ಸತ್ಯವೇ ಆಗಿದೆ. ಯಾವುದೇ ಮಸೀಹ್ ಬರುವ ಬಗ್ಗೆ ಭವಿಷ್ಯವಾಣಿ ಇಸ್ಲಾಮಿನಲ್ಲಿ ಇಲ್ಲವೆಂದೂ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಂತರ ಮುಸ್ಲಿಮರಿಗೆ ಯಾವುದೇ ಆಧ್ಯಾತ್ಮಿಕ ಸುಧಾರಕನ ಆವಶ್ಯವಿಲ್ಲವೆಂದೂ ಅವರು ಹೇಳುತ್ತಾರೆ.

ಆದರೆ ಇಸ್ಲಾಮೀ ಗ್ರಂಥಗಳನ್ನು ಸ್ವಲ್ಪ ಮಟ್ಟಿಗಾದರೂ ಅಧ್ಯಯನ ಮಾಡಿದ ಪ್ರತಿಯೊಬ್ಬ ಬುದ್ಧಿಶಾಲಿ ಮನುಷ್ಯನು ಹೀಗೆ ಮನವರಿಕೆ ಮಾಡಿಕೊಳ್ಳಬಲ್ಲನು: ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಂತರ ಯಾವುದೇ ಆಧ್ಯಾತ್ಮಿಕ ಸುಧಾರಕನ ಆವಶ್ಯಕತೆ ಇಲ್ಲ ಎಂದು ಹೇಳುವುದು ಅಲ್ಲಾಹನ ಅನಾದಿ ಸುಧಾರಣೆಯ ವ್ಯವಸ್ಥೆಗೆ ವಿರುದ್ಧವಾಗಿದೆ. ಲೋಕದಲ್ಲಿ ವಿಶ್ವಾಸಗಳಲ್ಲಿ ಮತ್ತು ಆಚಾರಗಳಲ್ಲಿ ಅಸಾಧಾರಣವಾದ ಕೆಡುಕು ತಲೆದೋರುವಾಗ ಅಲ್ಲಾಹನು ಅದನ್ನು ತನ್ನ ವಿಶಿಷ್ಟ ತರಬೇತಿ ಪಡೆದ ಸುಧಾರಕನ ಮೂಲಕ ಹೋಗಲಾಡಿಸುತ್ತಾನೆ. ಆಧ್ಯಾತ್ಮಿಕ ಸುಧಾರಕ ಆಗಮಿಸುವುದು ಹೊಸ ಶರೀಅತ್ ಗ್ರಂಥ ತರಲಿಕ್ಕಾಗಿ ಮಾತ್ರವಾಗಿರುವುದಿಲ್ಲ. ಜನರ ವಿಶ್ವಾಸಗಳನ್ನು ತಾಜಾ ಗೊಳಿಸಲು ಮತ್ತು ಜನರ ಹೃದಯಗಳನ್ನು ಸುಧಾರಣೆ ಮಾಡಲು ಸ್ವಭಾವಗಳನ್ನು ಪರಿಷ್ಕರಿಸಲು, ಸುಳ್ಳು ಯೋಚನೆಗಳನ್ನು ನಿವಾರಿಸಲು ಸಹ ಸುಧಾರಕನನ್ನು ಅಲ್ಲಾಹನು ಕಳುಹಿಸುತ್ತಾನೆ. ಈ ಆವಶ್ಯಕತೆ ಪವಿತ್ರ ಖುರ್‌ಆನ್ ಅವತೀರ್ಣಗೊಂಡ ನಂತರವೂ ಇರುತ್ತದೆ. ಇದೇ ಕಾರಣದಿಂದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಂತರ ಮುಜದ್ದಿದರು ಮುಸ್ಲಿಮ್ ಸಮುದಾಯದಲ್ಲಿ ಆಗಮಿಸುತ್ತಾ ಇದ್ದರು. ಇದೇ ಉದ್ದೇಶಕ್ಕೋಸ್ಕರ ಹಝ್ರತ್ ಮೂಸಾ ಅಲೈಹಿಸ್ಸಲಾಮರ ನಂತರ ಅವರ ಶರೀಅತನ್ನು ಅನುಸರಿಸುವ ಅನೇಕ ಆಧ್ಯಾತ್ಮಿಕ ಸುಧಾರಕರಾದ ಪ್ರವಾದಿಗಳು ಆಗಮಿಸಿದರು. ಅವರಿಗೆ ಯಾವುದೇ ಹೊಸ ಶರೀಅತನ್ನು ಅಲ್ಲಾಹನು ನೀಡಿರಲಿಲ್ಲ. ಅವರು ಹಝ್ರತ್ ಈಸಾ ಅಲೈಹಿಸ್ಸಲಾಮರ ಶರೀಅತಿನ ಸೇವೆಗೋಸ್ಕರವೇ ಕಳುಹಿಸಲ್ಪಟ್ಟರು.

ಯಾವುದೇ ಮಸೀಹ್ ಆಗಮಿಸುವ ಬಗ್ಗೆ ಇಸ್ಲಾಮಿನಲ್ಲಿ ಭವಿಷ್ಯವಾಣಿಗಳಿಲ್ಲ ಎಂಬ ಆಕ್ಷೇಪಕ್ಕೆ ಉತ್ತರವೇನೆಂದರೆ, ಭವಿಷ್ಯವಾಣಿ ಇಲ್ಲ ಎಂಬ ಯೋಚನೆ ಸಂಪೂರ್ಣ ಸುಳ್ಳಾಗಿದೆ. ವಾಸ್ತವಿಕ ವಿಷಯವೇನೆಂದರೆ, ಈ ಕಾಲದಲ್ಲಿ ಈ ಯೋಚನೆ ಹುಟ್ಟಿರುವುದು ಅಹ್ಮದಿಯಾ ಜಮಾಅತ್ ವಿರುದ್ಧ ಸಂಪೂರ್ಣವಾಗಿ ಸೋತುಹೋದ ಮನೋಭಾವದ ಪರಿಣಾಮವೇ ಹೊರತು ಬೇರೇನೂ ಅಲ್ಲ. ಸತ್ಯ ವಿಷಯವೇನೆಂದರೆ, ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಲೋಕದ ಅಂತಿಮ ಕಾಲಘಟ್ಟದಲ್ಲಿ ಒಬ್ಬ ಮಸೀಹ್ ಬರುವ ಬಗ್ಗೆ ಹೇಳಿರುವರೆಂಬುದನ್ನು ತಿಳಿಯದೆ ಇರುವ ಮುಸ್ಲಿಮನು ಯಾರೂ ಇಲ್ಲ. ಉದಾಹರಣೆಗೆ, ಸಹೀಹ್ ಬುಖಾರಿಯಲ್ಲಿರುವ ಈ ಕೆಳಗಿನ

* 1955ರಲ್ಲಿ ಉರ್ದು ಪುಸ್ತಕದ ದ್ವಿತೀಯ ಮುದ್ರಣ ಪ್ರಕಟಿಸುವಾಗ ಬರೆದುದು.

ಹದೀಸು ಸಾಕಷ್ಟು ಸಾಕ್ಷ್ಯಾಧಾರವಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಹೇಳಿದರು:

**ವಲ್ಲಧೀ ನಫ್‌ಸೀ ಬಿಯದಿಹೀ ಲಯೂಶಿಕನ್ನ ಅನ್ ಯನ್‌ಝಿಲ ಫೀಕುಮ್ ಇಬ್ನು ಮರ್‌ಯಮ ಹಕಮನ್ ಅದಲನ್ ಫ ಯಕ್‌ಸಿರು ಸ್ಸಲೀಬ ವ ಯಖ್‌ತುಲುಲ್ ಖಿನ್‌ಝೀರ ವ ಯಝುಉಲ್ ಜಿಝ್‌ಯತ**. (ಸಹೀಹ್ ಬುಖಾರಿ, ಕಿತಾಬ್ ಬದವುಲ್ ಖಲ್‌ಖ್ ಬಾಬ್ ನುಝೂಲಿ ಈಸಾಬ್ನು ಮರ್‌ಯಮ್).

ಅರ್ಥ: **"**ನನ್ನ ಜೀವ ಯಾರ ಕೈಯಲ್ಲಿದೆಯೋ ಅವನ ಹೆಸರಲ್ಲಿ ಪ್ರಮಾಣ ಮಾಡಿ ಹೇಳುತ್ತೇನೆ. ಮಸೀಹ್ ಇಬ್ನು ಮರ್‌ಯಮ್ ನಿಮ್ಮಲ್ಲಿ ಇಳಿದು ಬರುವರು. ಅವರು ಎಲ್ಲ ಧಾರ್ಮಿಕ ಭಿನ್ನಾಭಿಪ್ರಾಯಗಳಲ್ಲಿ ತೀರ್ಪು ನೀಡುವ ನ್ಯಾಯಾಧೀಶರಾಗಿ ಆಗಮಿಸುವರು. ಅವರ ತೀರ್ಪು ಸತ್ಯ ಮತ್ತು ನ್ಯಾಯಬದ್ಧವಾಗಿರುವುದು. ಅವರು ಶಿಲುಬೆಯ ಧರ್ಮದ ಪ್ರಾಬಲ್ಯದ ಕಾಲದಲ್ಲಿ ಆಗಮಿಸಿ ಅದರ ಪ್ರಾಬಲ್ಯವನ್ನು ಕೊನೆಗೊಳಿಸುವರು. ಆ ಕಾಲದಲ್ಲಿ ಹಂದಿ ಸ್ವಭಾವದ ಕೊಳಕುಗಳು ವರ್ಧಿಸುವವು. ಮಸೀಹರು ಈ ಕೊಳಕುಗಳನ್ನು ನಾಶಗೊಳಿಸುವರು. ಆದರೆ ಈ ಎಲ್ಲ ಕೆಲಸಗಳು ಸಾಕ್ಷ್ಯಾಧಾರ ಮತ್ತು ಆಧ್ಯಾತ್ಮಿಕ ದೃಷ್ಟಾಂತಗಳ ಮೂಲಕ ಈಡೇರುವುದು. ಏಕೆಂದರೆ ಅದು ಶಾಂತಿಯ ಕಾಲಘಟ್ಟವಾಗಿರುವುದು. ಧಾರ್ಮಿಕ ಯುದ್ಧಗಳು ಮತ್ತು ಜಿಝಿಯಾ ತೆರಿಗೆ ಆ ಕಾಲದಲ್ಲಿ ರದ್ದುಗೊಳಿಸಲ್ಪಡುವುವು.**"**

ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಅಲ್ಲಾಹನ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳಿದ ಭವಿಷ್ಯವಾಣಿ ಹದೀಸುಗಳ ಅತ್ಯಂತ ವಿಶ್ವಾಸಾರ್ಹ ಗ್ರಂಥವಾದ ಬುಖಾರಿ ಶರೀಫಿನಲ್ಲಿದೆ. ಈ ಗ್ರಂಥವನ್ನು ಪವಿತ್ರ ಖುರ್‌ಆನಿನ ನಂತರ ಅತ್ಯಂತ ನಿಖರ ಗ್ರಂಥವೆಂದು ಗಣಿಸಲಾಗುತ್ತಿದೆ. ಪವಿತ್ರ ಖುರ್‌ಆನಿನಲ್ಲೂ ಈ ವಿಷಯದ ಬಗ್ಗೆ ಸ್ಪಷ್ಟ ಸೂಚನೆಗಳಿವೆ. ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಶಿಷ್ಯರಿಂದ ಮೊದಲುಗೊಂಡು ಇಂದಿನ ತನಕ ಎಲ್ಲ ಮುಸ್ಲಿಮರು ಈ ನಂಬಿಕೆಯನ್ನು ಹೊಂದಿರುತ್ತಾರೆ. ಮಸೀಹರ ಆಗಮನದ ವಿಶ್ವಾಸವನ್ನು ಯಾರಿಗಾದರೂ ಸಂಪೂರ್ಣವಾಗಿ ನಿರಾಕರಿಸಲು ಸಾಧ್ಯವೇ? ಆದರೆ ಹಝ್ರತ್ ಈಸಾ ಮಸೀಹ್[ಅ] ಆಕಾಶಕ್ಕೇರಿ ಹೋದರೆಂದೂ ಅವರು ಲೋಕದ ಅಂತಿಮ ಕಾಲಘಟ್ಟದಲ್ಲಿ ಇಳಿದು ಬರುವರೆಂದೂ ಹೇಳುವುದು ನಿಸ್ಸಂಶಯವಾಗಿಯೂ ಸುಳ್ಳು ವಿಶ್ವಾಸವಾಗಿದೆ. ಪವಿತ್ರ ಖುರ್‌ಆನ್ ಮತ್ತು ಹದೀಸುಗಳು ಈ ಸುಳ್ಳು ವಿಶ್ವಾಸವನ್ನು ಅಂಗೀಕರಿಸುವುದಿಲ್ಲ. ಸರಿಯಾದ ವಿಶ್ವಾಸವೇನೆಂದರೆ, ಹಝ್ರತ್ ಈಸಾ ಮಸೀಹರಿಗೆ ಹೋಲಿಕೆ ಹೊಂದಿದ ಒಬ್ಬ ಮಸೀಹರ ಬಗ್ಗೆ ಈ ಭವಿಷ್ಯವಾಣಿಗಳಲ್ಲಿ ಸಮಾಚಾರ ನೀಡಲಾಗಿದೆ. ಅವರು ಹಝ್ರತ್ ಈಸಾ ಮಸೀಹರ ಹಾಗೆ ಮುಸ್ಲಿಮ್ ಸಮುದಾಯದ ಕೊನೆಯ ಕಾಲಘಟ್ಟದಲ್ಲಿ ಇಸ್ಲಾಮಿನ ಸೇವೆ ಮಾಡುವರು. ಆ ಮಹಾನುಭಾವರು ಅಲ್ಲಾಹನ ಅನುಗ್ರಹದಿಂದ ಆಗಮಿಸಿರುವರು. ಕಣ್ಣಿದ್ದವರು ಅವರನ್ನು ನೋಡಲಿ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಅಹ್ಮದಿಯಾ ಜಮಾಅತಿನ ಸ್ಥಾಪಕರು ಪ್ರಕಟಿಸಿದ ಭವಿಷ್ಯವಾಣಿ – ಹಝ್ರತ್ ಈಸಾ ಮಸೀಹರನ್ನು ಪ್ರತೀಕ್ಷಿಸುತ್ತಾ ಮುನ್ನೂರು ವರ್ಷಗಳು ದಾಟಿಹೋಗುವುದರೊಳಗೆ ಜನರು ಅದರ ಬಗ್ಗೆ ನಿರಾಶೆಹೊಂದಿ ಆ ವಿಶ್ವಾಸವನ್ನು ತ್ಯಜಿಸುವರು ಎಂದು ಹೇಳಿದ ಭವಿಷ್ಯವಾಣಿ – ಈಡೇರುವ ಚಿಹ್ನೆಗಳು ಈಗಾಗಲೇ ಕಾಣಿಕೊಳ್ಳಲು ಪ್ರಾರಂಭವಾಗಿವೆ. ಈಗ ಮಸೀಹರ ಆಗಮನದ ಭವಿಷ್ಯವಾಣಿಯ ಒಂದು ಭಾಗವನ್ನು ಮಾತ್ರ ತಮ್ಮ ಸೋಲಿನ ಮೇಲೆ ಪರದೆ ಹಾಕಲು ನಿರಾಕರಿಸುತ್ತಿದ್ದಾರೆ. ಆದರೆ ಹೆಚ್ಚು ಸಮಯ ಕಳೆಯುವ ಮೊದಲೇ ಮುಸ್ಲಿಮರೂ ಕ್ರೈಸ್ತರೂ ಈ ಚರ್ಚೆಯ ಮುಖ್ಯ ಚರ್ಚಾವಿಷಯದ ಬಗ್ಗೆ ಪ್ರಕಟಿಸಲು ನಿರ್ಬಂಧಿತರಾಗುವರು: ಯಾವ ಮಸೀಹರು ಆಕಾಶದಿಂದ ಇಳಿದು ಬರುವರೆಂದು ಪ್ರತೀಕ್ಷೆ ಮಾಡಲಾಗುತ್ತಿದೆಯೋ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಪವಿತ್ರ ಶ್ವಾಸದ ಮೂಲಕ ಇದೇ ಭೂಮಿಯಲ್ಲಿ ಆಗಮಿಸಿ ಇಮಾಮುಕುಮ್ ಮಿನ್‌ಕುಮ್ (ನಿಮ್ಮ ಇಮಾಮ್ ನಿಮ್ಮಿಂದಲೇ) ಎಂಬ ವಾಗ್ದಾನ ಈಡೇರಿದೆ.

ಅಹ್ಮದಿಯಾ ಜಮಾಅತಿನ ಸ್ಥಾಪಕರು ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಬಗ್ಗೆ ತನ್ನ ಪ್ರೇಮವನ್ನು ಸೂಚಿಸುತ್ತಾ ಹೇಳಿದರು:

آں مسیحا کہ بر افلاک مقامش گویند
لُطف کردی کہ ازیں خاک نمایاں کردی

ಆಕಾಶದಲ್ಲಿರುವರೆಂದು ಹೇಳಲ್ಪಟ್ಟ ಆ ಮಸೀಹ್ ಈ ವಿನೀತನಲ್ಲಿ ಪ್ರತ್ಯಕ್ಷಗೊಳಿಸಲ್ಪಟ್ಟರು. ◆

**(ಅನುವಾದಕ : ಎಮ್. ಉಬೈದುಲ್ಲಾ)**

**LOVE FOR ALL**
**HATRED FOR NONE**

**LET'S MAKE IT HEAVEN**

# ನೀನು ಮಾಡು – ಮಾಡಬೇಡ

## 2 – ಇಸ್ಲಾಮೀ ಸಂಸ್ಕೃತಿ

♦ಹಝ್ರತ್ ಡಾ॥ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್(ರ)

1. ನೀನು ಶಿಸ್ತುಬದ್ಧ ಶಿಷ್ಟಾಚಾರ ಪಾಲಕನಾದ ಮನುಷ್ಯನಾಗಲು ಪ್ರಯತ್ನಿಸು.
2. ನೀನು ಭೇಟಿಯ ಸಮಯದಲ್ಲಿ ಸಲಾಮ್ ಹೇಳಲು ಮುಂದಾಗುವವನಾಗು.
3. ನೀನು ಸ್ನೇಹಿತರಿಗೆ ಹಸ್ತಲಾಘವ ಮಾಡುತ್ತಾ ಇರು.
4. ನೀನು ಮನೆಯ ಸಾಮಗ್ರಿಗಳನ್ನು ಸುವ್ಯವಸ್ಥೆಯಲ್ಲಿಡು.
5. ಮನೆಯವರಿಗೆ ಮತ್ತು ನೆರೆ ಹೊರೆಯವರಿಗೆ ತೊಂದರೆ ಆಗುವ ರೀತಿಯಲ್ಲಿ ಬೊಬ್ಬೆ ಹೊಡೆಯಬೇಡ.
6. ನೀನು ಪಾದರಕ್ಷೆಗಳನ್ನು ನೆಲಕ್ಕೆ ಒರೆಸಿಕೊಂಡು ಅಥವಾ ಎಳೆದುಕೊಂಡು ನಡೆಯಬೇಡ.
7. ನೀನು ಸೀಟಿ ಹಾಕುವ ಅಭ್ಯಾಸ ಮಾಡಬೇಡ. (ಹುಡುಗಿಯರಿಗೆ ಇದು ಅತ್ಯಂತ ದೋಷಕರವಾಗಿದೆ).
8. ನೀನು ನಿನ್ನ ಪೈಜಾಮ ಅಥವಾ ಲುಂಗಿ ನಿನ್ನ ನಾಭಿಯ ಮೇಲೆ ಧರಿಸು.
9. ಹೇ ವಿದ್ಯಾರ್ಥಿ, ನೀನು ಪೆನ್ಸಿಲ್ ಅಥವಾ ಪೆನ್ನನ್ನು ಬಾಯಿಯೊಳಗೆ ಹಾಕಬಾರದು.
10. ನೀನು ಸದಾ ಓದಿನಲ್ಲಿ ನಿರತನಾದವನಾಗಬೇಡ.
11. ಹೇ ವಿದ್ಯಾರ್ಥಿ, ನೀನು ಸ್ಲೇಟಿನಲ್ಲಿ ಬರೆದುದನ್ನು ಉಗುಳಿನಿಂದ ಅಳಿಸಬೇಡ.
12. ನೀನು ಧೂಳುಭರಿತ ಬಟ್ಟೆಯನ್ನು ಕೊಡವಿ ಹಾಕುವಾಗ ಜನರಿಂದ ದೂರ ಹೋಗಿ ಹಾಗೆ ಮಾಡು.
13. ಹೇ ಹುಡುಗ, ನೀನು ಅನ್ಯ ಪುರುಷರೊಂದಿಗೆ ಅಥವಾ ಅನ್ಯ ಹುಡುಗರೊಂದಿಗೆ ಮಲಗದಿರಲು ಸಾಧ್ಯವಿರುವಷ್ಟು ಪ್ರಯತ್ನಿಸು.
14. ನೀನು ಸ್ವಚ್ಛ ನೆಲದ ಮೇಲೆ ಕೊಳಕು ಪಾದರಕ್ಷೆ ಧರಿಸಿ ನಡೆಯಬೇಡ.
15. ನೀನು ಸಮಯಕ್ಕೆ ಸರಿಯಾಗಿ ಶಾಲೆ, ಕಾಲೇಜು, ಕಚೇರಿಗಳಿಗೆ ಹೋಗು.
16. ನೀನು ತಿನ್ನುವಾಗ ಜಗಿಯುವ ಶಬ್ದ ಅನ್ಯರಿಗೆ ಕೇಳಿಸಬಾರದು.
17. ನೀನು ಧರಿಸಿದ ಬಟ್ಟೆ ಉಪಯೋಗಿಸದೆ ಕರವಸ್ತ್ರ ಬಳಸಿ ನಿನ್ನ ಮೂಗು ಸ್ವಚ್ಛಗೊಳಿಸು.
18. ಹೇ ಮಹಿಳೆ, ನೀನು ತಲೆ ಬಾಚಿದ ನಂತರ ಸಿಗುವ ಉದುರಿದ ಕೂದಲನ್ನು ಅಲ್ಲಲ್ಲಿ ಎಸೆಯಬೇಡ.
19. ನೀನು ಪೇಟೆಯಲ್ಲಿ ನಡೆಯುತ್ತಾ ಹೋಗುವಾಗ ಏನನ್ನೂ ತಿನ್ನಬೇಡ.
20. ನೀನು ಬಡವರ ಜೊತೆ ಸಹ ಸೇರಿ ಕುಳಿತುಕೊಳ್ಳಲು ಪ್ರಯತ್ನಿಸು.
21. ಸಭೆಗಳಲ್ಲಿ ತೇಗುವುದು, ಆಕಳಿಸುವುದು (ತೂಕಾಡುವುದು) ಮತ್ತು ಅಪಾನವಾಯು ಬಿಡುವುದು ಇವುಗಳಿಂದ ನಿನ್ನನ್ನು ರಕ್ಷಿಸಿಕೊಳ್ಳು. ಯಾರಾದರೂ ಹೀಗೆ ಮಾಡಿದರೆ ನಗಬೇಡ.
22. ನೀನು ಔತಣಕ್ಕೆ ನಿಗದಿತ ಸಮಯಕ್ಕಿಂತ ತಡವಾಗಿ ಹೋಗಬೇಡ.
23. ನೀನು ಸತ್ಕಾರಕ್ಕೆ ಹೋದರೆ ಊಟ ಮಾಡಿದ ನಂತರ ಅಲ್ಲಿ ಹೆಚ್ಚು ಸಮಯ ಕಳೆಯದಿರಲು ಪ್ರಯತ್ನಿಸು.
24. ಹೇ ಹುಡುಗಿ, ನಿನ್ನ ಸಹೋದರನ ಜೊತೆ ಒಂದೇ ಹಾಸಿಗೆಯಲ್ಲಿ ಮಲಗಬೇಡ.

25. ನೀನು ವೀಳ್ಯದೆಲೆ ತಿನ್ನುವ ಅಭ್ಯಾಸ ಮಾಡಬೇಡ.

26. ನೀನು ನಾಭಿಯ ಕೆಳಗೆ ಮೊಣಕಾಲಿನ ತನಕ ನಿನ್ನ ಶರೀರ ಜನರ ಮುಂದೆ ನಗ್ನವಾಗಿರಿಸಬೇಡ.

27. ಅನ್ಯರು ನಿನಗೆ ಬೊಟ್ಟುಮಾಡಿ ತೋರಿಸುವ ಹಾಗಿರುವ ಪೋಷಾಕು ಧರಿಸಬೇಡ.

28. ಹೇ ಪುರುಷ, ನೀನು ನಿನ್ನ ಪೋಷಾಕನ್ನು ಸರಳವಾಗಿರಿಸು.

29. ನೀನು ಶುಕ್ರವಾರ ರಜೆ ಮಾಡು.

30. ನೀನು ಮನೆಯಿಂದ ಹೊರಗೆ ಹೋಗುವಾಗ ಬಡಿಗೆ ಹಿಡಿದುಕೊಳ್ಳು.

31. ನೀನು ಎಲ್ಲಿಂದಾದರೂ ಒಂದು ವಸ್ತುವನ್ನು ಎತ್ತಿದರೆ ಅದನ್ನು ಅಲ್ಲೇ ಇಡು.

32. ನೀನು ಸಭೆಗಳಲ್ಲಿ ಗೌರವಾನ್ವಿತರು ಕುಳಿತುಕೊಳ್ಳುವ ಸ್ಥಳದಲ್ಲಿ ಕುಳಿತುಕೊಳ್ಳಲು ಪ್ರಯತ್ನಿಸಬೇಡ.

33. ಹೇ ಮಹಿಳೆ, ನೀನು ಮಿತಿಮೀರಿದ ಸೌಂದರ್ಯ ಪ್ರದರ್ಶಿಸಬೇಡ.

34. ಹೇ ಮಹಿಳೆ, ಅನ್ಯ ಪುರುಷರೊಂದಿಗೆ ಏಕಾಂಗಿಯಾಗಿ ಕುಳಿತುಕೊಳ್ಳಬೇಡ.

35. ಹೇ ಮಹಿಳೆ, ನಿನ್ನ ಪತಿಯ ಅನುಮತಿ ಇಲ್ಲದೆ ಅನ್ಯ ಪುರುಷನನ್ನು ನೀನು ಮನೆಯೊಳಗೆ ಬರಲು ಬಿಡಬಾರದು.

36. ನೀನು ಮೂಗಿನಿಂದ ಸ್ವರ ಬರಿಸುತ್ತಾ ಇರಬಾರದು.

37. ನೀನು ದೀಪ ಆರಿಸಿ ಮತ್ತು ಬೆಂಕಿ ನಂದಿಸಿ ರಾತ್ರಿ ಮಲಗಲು ಹೋಗು.

38. ನೀನು ಅನ್ಯರ ಪುಸ್ತಕದ ಮೇಲೆ ಅನುಮತಿ ಕೇಳದೆ ಗುರುತು ಹಾಕುವುದು, ಟಿಪ್ಪಣಿ ಬರೆಯುವುದು ಮಾಡಬಾರದು.

39. ನೀನು ನೀರಿನ ಪಾತ್ರೆಯನ್ನು ಮುಚ್ಚಿಡು.

40. ನೀನು ಅನ್ಯರ ಎದುರಿಗೆ ಮೂಗಿನೊಳಗೆ ಬೆರಳು ತುರುಕದಿರು.

41. ನೀನು ಸಭೆಯಲ್ಲಿ ಕುಳಿತಿರುವಾಗ ಹಲ್ಲುಗಳಿಗೆ ಕಡ್ಡಿ ಹಾಕಬೇಡ.

42. ನಿನಗೆ ಆಕಳಿಕೆ ಬಂದರೆ ಬಾಯಿಗೆ ಕೈ ಅಡ್ಡವಾಗಿ ಹಿಡಿ.

43. ನೀನು ಕುಡಿಯುವ ನೀರಿಗೆ ಬೆರಳು ಅಥವಾ ಕೈ ಹಾಕಬೇಡ.

44. ನೀನು ಸಾರಿನಿಂದ ಕೊಳೆಯಾದ ಕೈಗಳಿಂದ ಗಡ್ಡ ಒರೆಸಬೇಡ.

45. ನೀನು ಬರೆಯುವಾಗ ಶಾಯಿ ಕೊಡವಿ ಸುತ್ತು ಮುತ್ತಲೂ ಕಲೆ ಮಾಡಬೇಡ.

46. ನೀನು ಊಟ ಮಾಡಿದ ನಂತರ ಕೈತೊಳೆದು ನಿನ್ನ ಬೆರಳುಗಳಲ್ಲಿ ಜಿಡ್ಡು ಪದಾರ್ಥ ಮತ್ತು ಅರಸಿನದ ಗುರುತು ಕಾಣಿಸದಂತಿರಬೇಕು.

47. ನೀನು ಬಳಸುವ ಶಾಯಿಯಿಂದ ನಿನ್ನ ಬಟ್ಟೆಗಳನ್ನೂ ಕೈಗಳನ್ನೂ ಕೊಳಕು ಮಾಡಬೇಡ.

48. ಹೇ ಪುರುಷ, ನೀನು ಮಹಿಳೆಯ ಹಾಗೆ ಶೃಂಗಾರ ಮಾಡಬೇಡ.

49. ಮನೆ ಗೋಡೆಗಳನ್ನೂ ನೆಲವನ್ನೂ ಉಗುಳು ಮತ್ತು ವೀಳ್ಯದೆಲೆಯ ಉಗುಳಿನಿಂದ ಕೊಳಕು ಮಾಡಬೇಡ.

50. ನೀನು ಉಗುರನ್ನು ಹಲ್ಲಿನಿಂದ ಕಡಿಯಬೇಡ.

51. ನೀನು ಲಕೋಟೆಯನ್ನು ಉಗುಳಿನಿಂದ ಅಂಟಿಸದೆ ನೀರಿನಿಂದ ಅಂಟಿಸು.

52. ನೀನು ಸಭೆಗಳಲ್ಲಿ ನೆಟಿಕೆ ತೆಗೆಯಬೇಡ.

53. ನೀನು ಸಭೆಯಲ್ಲಿದ್ದರೆ ಅಲ್ಲಿ ಮಲಗಬೇಡ.

54. ನೀನು ಕಣ್ಣು ಸನ್ನೆಮಾಡಿ ಮಾತನಾಡಬೇಡ.

55. ನೀನು ನಿನ್ನ ಬಟ್ಟೆಯನ್ನು ಮತ್ತು ಪುಸ್ತಕವನ್ನು ಬಾಯಿಯಲ್ಲಿ ಹಾಕಬಾರದು ಮತ್ತು ಕತ್ತರಿಸಬಾರದು.

56. ನಿಮ್ಮ ಹೆಣ್ಣು ಮಕ್ಕಳ ಮದುವೆ ಹದಿನೈದು – ಹದಿನಾರು ವರ್ಷ ಪ್ರಾಯವಾಗುವಾಗ ಮಾಡಿರಿ.

57. ತರುಣಿಯಾದ ವಿಧವೆಯ ಮದುವೆಗೆ ಪ್ರಯತ್ನಿಸು.

58. ಹೇ ಮಹಿಳೆ, ಅನ್ಯ ಪುರುಷರ ಮುಂದೆ ಸೌಂದರ್ಯ ಪ್ರದರ್ಶನ ಮಾಡಬೇಡ.

59. ನೀನು ಉಟ್ಟ ಬಟ್ಟೆಯಿಂದ ಮೂಗು ಸ್ವಚ್ಛ ಮಾಡಬೇಡ.

60. ನೀನು ಮಾರ್ಗದಲ್ಲಿ ಹೋಗುವಾಗ ನಿನ್ನ ಮುಂದೆ ಬರುವವರಿಗೆ ಸಲಾಮ್ ಹೇಳು, ಯಾರದಾದರೂ ಮಾರ್ಗಕ್ಕೆ ಅಡ್ಡ ಬರಬೇಡ ಮತ್ತು ಮಾರ್ಗದ ಒಂದು ಬದಿಯಲ್ಲಿ ನಡೆದು ಹೋಗು.

61. ನೀನು ಬಡವರಿಗೆ ಸಹಾಯ, ಒಳಿತಿನ ಪ್ರಚಾರ ಮತ್ತು ಸಾರ್ವಜನಿಕರಿಗೆ ಉಪಕಾರ ಮಾಡುವ ಸಂಸ್ಥೆಗಳ ಸದಸ್ಯನಾಗು.

62. ನೀನು ಗಲಭೆ ಗೊಂದಲಗಳನ್ನು ತಡೆಗಟ್ಟಿ ಶಾಂತಿ ನೆಮ್ಮದಿಗಳನ್ನು ಸ್ಥಾಪಿಸುವ ಮತ್ತು ಜನರ ಸುಧಾರಣೆ ಮಾಡುವ ಸಂಸ್ಥೆಗಳ ಸದಸ್ಯನಾಗು.

63. ನೀನು ಯಾವುದೇ ಅಪಾಯಕಾರಿ ಆಯುಧದ ತುದಿಯನ್ನು ಯಾವುದೇ ಮನುಷ್ಯನಿಗೆದುರಾಗಿ ಹಿಡಿಯಬೇಡ.

64. ನೀನು ಮಸ್‌ಜಿದ್‌ಗೆ ಮತ್ತು ಸಭೆಗಳಿಗೆ ನಿನ್ನ ಒಳ್ಳೆಯ ಬಟ್ಟೆ ಧರಿಸಿ ಹೋಗು.

65. ನೀನು ನಿನ್ನ ಮಕ್ಕಳಿಗೆ ಒಳ್ಳೆಯ ಕೆಲಸ ಮಾಡಲು ಉಪದೇಶಿಸು, ಕೆಟ್ಟ ಕೆಲಸ ಮಾಡದಂತೆ ತಡೆ ಮತ್ತು ಕಷ್ಟ ಸಹಿಸಲು ಕಲಿಸು.

66. ನೀನು ಸಭ್ಯತೆಯಿಂದ ವಾದ ವಿವಾದದಲ್ಲಿ ಭಾಗವಹಿಸು. ಜಾತಿ ಸಂಬಂಧ ಆಕ್ರಮಣ ಮಾಡಬೇಡ.

67. ನೀನೇ ಮಾತಾಡಿ ನೀನೇ ಅದರ ಬಗ್ಗೆ ನಗದಿರು.

68. ನೀನು ಯಾವುದೇ ಸಭೆಯಲ್ಲಿ ಅನ್ಯರನ್ನು ನೆಗೆದು ದಾಟಿಕೊಂಡು ಮುಂದೆ ಹೋಗಬೇಡ.

69. ಒಬ್ಬನಿಗೆ ಅನುಕೂಲತೆಗಳಿದ್ದರೂ ವಿವಾಹವಾಗದಿದ್ದರೆ ಅವನು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸಮುದಾಯಕ್ಕೆ ಸೇರಿದವನಲ್ಲ.

70. ಒಬ್ಬನು ಕುಟುಂಬ ಪೋಷಣೆಯ ಭಾರದ ಬಗ್ಗೆ ಯೋಚಿಸಿ ವಿವಾಹವಾಗದಿದ್ದರೆ ಅವನು ಸಹ ಹಝ್ರತ್ ಪೈಗಂಬರರ(ಸ) ಸಮುದಾಯಕ್ಕೆ ಸೇರಿದವನಲ್ಲ.

71. ನಿನಗೆ ಸಾಧ್ಯವಿದ್ದರೆ ಒಂದು ಗಡಿಯಾರ ಇಟ್ಟುಕೊಳ್ಳು.

72. ನೀನು ಬರಿಗಾಲಿನಿಂದಲೂ ಬರಿತಲೆಯಿಂದಲೂ ಪೇಟೆಯಲ್ಲಿ ತಿರುಗಾಡಬೇಡ.

73. ಇಬ್ಬರು ಮಾತನಾಡುವಾಗ ಅನಾವಶ್ಯಕವಾಗಿ ಮಧ್ಯ ಪ್ರವೇಶ ಮಾಡಬೇಡ.

74. ನಿನ್ನ ಆಹಾರ ಪದಾರ್ಥಗಳನ್ನು ದೂಳಿನಿಂದ ರಕ್ಷಿಸು.

75. ನೀನು ನಿನ್ನ ಮನೆಯ ಛಾವಣಿಗಳಿಂದಲೂ ಗೋಡೆಗಳಿಂದಲೂ ಜೇಡನ ಬಲೆಗಳನ್ನು ಹೋಗಲಾಡಿಸು.

76. ನೀನು ಮಾತನಾಡುವಾಗ ಅವಿವೇಕದ ಮಾತುಗಳನ್ನಾಡಬೇಡ.

77. ನೀನು ಯಾವುದೇ ರಹಸ್ಯ ಸಂಘದ ಸದಸ್ಯನಾಗಬೇಡ.

78. ನೀನು ಒಂದು ಪಾದಕ್ಕೆ ಮಾತ್ರ ಪಾದರಕ್ಷೆ ಧರಿಸಿ ನಡೆಯಬೇಡ.

79. ನೀನು ನಿನ್ನ ಮನೆಯ ಕಸಕಡ್ಡಿಗಳನ್ನು ಅಲ್ಲಲ್ಲಿ ಬಿಸಾಡದೆ ಒಂದು ಬುಟ್ಟಿಯಲ್ಲಿ ಹಾಕಿಡು.

80. ಅಪಾಯಕಾರಿ ಜೀವಿಗಳಾದ ಹಾವು, ಚೇಳು ಮೊದಲಾದುವುಗಳನ್ನು ಅವು ಅಪಾಯವನ್ನುಂಟುಮಾಡುವ ಮೊದಲೇ ಕೊಲ್ಲು; ಅದು ಪಾಪಕರವಲ್ಲ, ಪುಣ್ಯಕರ್ಮವಾಗಿದೆ ಮತ್ತು ಮನುಷ್ಯನ ಮೇಲೆ ಕರುಣೆದೋರಿಕೆಯಾಗಿದೆ.

81. ನೀನು ಪುರುಷನಾಗಿದ್ದರೆ ಬೆಳ್ಳಿಯ ಉಂಗುರ ಹೊರತು ಬೇರೆ ಆಭರಣ ಧರಿಸಬಾರದು.

82. ಆಟ, ವಿನೋದ ಮೊದಲಾದುವುಗಳಲ್ಲಿ ಆವಶ್ಯವಿದ್ದಷ್ಟೇ ಭಾಗವಹಿಸು.

83. ನೀನು ಒಂದು ವ್ಯಾಪಾರದ ಮಾತುಕತೆ ನಡೆಯುತ್ತಿರುವಾಗ ಮಧ್ಯೆ ಪ್ರವೇಶಿಸಬೇಡ. ಒಂದು ವಿವಾಹ ಸಂಬಂಧದ ಮಾತುಕತೆ ನಡೆಯುವಾಗ ಇನ್ನೊಂದು ಸಂಬಂಧದ ಪ್ರಸ್ತಾಪ ಮುಂದಿರಿಸಬಾರದು. (ಏಲಂ ವ್ಯಾಪಾರ ಮಾಡುವಾಗ ಹೊರತು).

84. ನೀನು ಶ್ರೀಮಂತನಾಗಿದ್ದರೆ ಕೃತಜ್ಞತೆ ಸೂಚಿಸಲು ನಿನ್ನ ದೇಹದಲ್ಲಿ ಅದರ ಚಿಹ್ನೆಗಳನ್ನು ತೋರಿಸು.

85. ಹೇ ಮಹಿಳೆ, ನೀನು ಅನ್ಯಪುರುಷನೊಂದಿಗೆ ಹಸ್ತಲಾಘವ ಮಾಡಬೇಡ.

86. ಹೇ ಮಹಿಳೆ, ನೀನು ಪಾಶ್ಚಿಮಾತ್ಯ ಮಹಿಳೆಯರನ್ನು ಅನುಕರಿಸಿ ನಿನ್ನ ತಲೆಗೂದಲನ್ನು ಕತ್ತರಿಸಬೇಡ.

87. ಬಿಸ್ಮಿಲ್ಲಾಹ್, ಅಲ್‌ಹಮ್‌ದುಲಿಲ್ಲಾಹ್, ಜಝಾಕಲ್ಲಾಹ್, ಇನ್‌ಶಾ ಅಲ್ಲಾಹ್, ಮಾಶಾ ಅಲ್ಲಾಹ್, ಇನ್ನಾಲಿಲ್ಲಾಹ್, ಅಸ್ಸಲಾಮು ಅಲೈಕುಮ್ ಮೊದಲಾದ ಇಸ್ಲಾಮೀ ಪದಗಳನ್ನು ನಿನ್ನ ಮನೆಯಲ್ಲಿ ಬಳಸುತ್ತಾ ಇರು.

88. ಹೆಣ್ಣು ಶಿಶು ಜನಿಸಿದಾಗ ನೀನು ಬೇಸರಪಡಬೇಡ. ಏಕೆಂದರೆ ಹುಡುಗರ ಹಾಗೆಯೇ ಹುಡುಗಿಯರೂ ಲೋಕಕ್ಕೆ ಆವಶ್ಯಕವಾಗಿದ್ದಾರೆ.

89. ನಿನ್ನ ವರ್ತನೆ ನಿನ್ನ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳೊಂದಿಗೆ ಒಂದೇ ರೀತಿ ಇರಲಿ.

90. ನೀನು ಶೌಚ್ಯದ ಕೋಣೆಯಲ್ಲಿರುವಾಗ ಯಾರೊಂದಿಗೂ ಮಾತನಾಡಬೇಡ.

91. ನೀನು ಔತಣಕ್ಕೆ ಹೋದಾಗ ನಿನ್ನ ಮುಂದಿರುವ ಮತ್ತು ಸಮೀಪವಿರುವ ಆಹಾರದ ಭಾಗದಿಂದ ತಿನ್ನಲು ಪ್ರಾರಂಭಿಸು.

92. ಔತಣ ಕೂಟದಲ್ಲಿ ಅನ್ಯರಿಗೆ ಅಸಹ್ಯವಾಗುವ ರೀತಿ ವರ್ತಿಸಬೇಡ.

93. ನೀನು ತಿನ್ನುವ, ಕುಡಿಯುವ ಪಾತ್ರೆಗಳನ್ನು ಸ್ವಚ್ಛವಾಗಿಡು.

94. ನೀನು ಒಂದು ಮನೆಗೆ ಹೋಗಿ ಬಾಗಿಲು ತಟ್ಟಿದಾಗ ಮನೆಯವರು "ಯಾರು?" ಎಂದು ಕೇಳಿದಾಗ "ನಾನು" ಎಂದು ಹೇಳದೆ ಹೆಸರು ಹೇಳು.

95. ನೀನು ಯಾವುದಾದರೂ ಪರದೆ ಧರಿಸುವ ಮಹಿಳೆಯರ ಮನೆಗೆ ಹೋದರೆ, ಬಾಗಿಲಿನ ಒಂದು ಬದಿಗೆ ಸರಿದು ಸಲಾಂ ಹೇಳಬೇಕು ಮತ್ತು ಅನುಮತಿ ಕೇಳಬೇಕು.

96. ಹೇ ಮಹಿಳೆ, ನಿನ್ನ ಬಟ್ಟೆಗಳು ನಿನ್ನ ದೇಹಕ್ಕೆ ಅಂಟಿಕೊಂಡು ನಿನ್ನ ಶರೀರಾಕೃತಿ ಸ್ಪಷ್ಟವಾಗಿ ಕಾಣಿಸುವಂತಿರಬಾರದು.

97. ಹೇ ಮಹಿಳೆ, ನಿನ್ನ ಬಟ್ಟೆ ತೆಳುವಾಗಿ ನಿನ್ನ ಶರೀರ ಕಾಣಿಸುವಂತಿರಬಾರದು.

98. ನೀನು ಅನ್ಯ ಹುಡುಗನ ಜೊತೆ ಒಂದೇ ಮಂಚದಲ್ಲಿ ಮಲಗಬೇಡ.

99. ನೀನು ಇನ್ನೊಬ್ಬನ ಹೆಗಲಿಗೆ ಕೈಹಾಕಿ ಮಾರ್ಗದಲ್ಲಿ ನಡೆಯಬೇಡ.

100. ಹೇ ಮಹಿಳೆ, ನೀನು ನಿನ್ನ ಮನೆಯನ್ನು ಕೆಲಸಗಾರರಿಗೂ ಮಕ್ಕಳಿಗೂ ವಹಿಸಿಕೊಡಬೇಡ.

* * * * *

# ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನೇತಾರ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಭಾರತದ ಪ್ರಧಾನ ಮಂತ್ರಿ ಸನ್ಮಾನ್ಯ ಶ್ರೀ ನರೇಂದ್ರ ಮೋದಿ ಅವರಿಗೆ ಬರೆದ ಪತ್ರ

(ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋನ್ನತ ನೇತಾರರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಅನೇಕ ಜಾಗತಿಕ ನಾಯಕರಿಗೆ ಕೋವಿಡ್-19 ಮಾಹಾಮಾರಿಗೆ ಸಂಬಂಧಿಸಿ ಪತ್ರಗಳನ್ನು ಬರೆದಿದ್ದಾರೆ. ಕೋವಿಡ್-19 ಮಹಾಮಾರಿಯು ಜಗತ್ತನ್ನು ನಿಷ್ಕ್ರಿಯಗೊಳಿಸುವ ವಿನಾಶಕಾರಿಯಾದ ಪರಿಣಾಮಗಳನ್ನು ಒಂದು ದೈವಿಕ ಎಚ್ಚರಿಕೆಯಾಗಿ ಪರಿಗಣಿಸಲು ಜಾಗತಿಕ ನಾಯಕರೊಂದಿಗೆ ಹೇಳಿದುದರಲ್ಲದೆ ಸರ್ವ ಸೃಷ್ಟಿಕರ್ತನಾದ ದೇವನನ್ನು ಗುರುತಿಸಿ ಇನ್ನೊಂದು ಜಾಗತಿಕ ಮಹಾಯುದ್ಧವನ್ನು ತಡೆಗಟ್ಟುವ ಬಗ್ಗೆ ಲಕ್ಷ್ಯ ನೀಡಲು ಈ ಜಾಗತಿಕ ನಾಯಕರ ಗಮನವನ್ನು ಹರಿಸಿದ್ದಾರೆ).

**ಭಾರತದ ಪ್ರಧಾನಿ ಸನ್ಮಾನ್ಯ ಶ್ರೀ ನರೇಂದ್ರ ಮೋದಿ ಅವರಿಗೆ ಬರೆದ ಪತ್ರದ ಕನ್ನಡ ಭಾಷಾಂತರವನ್ನು ಕೆಳಗೆ ನೀಡುತ್ತಿದ್ದೇವೆ:**

ಮುಬಾರಕ್ ಮಸ್‌ಜಿದ್
ಶೀಪಚ್ಚ್ ಲೇನ್
ಟೆಲ್‌ಫೋರ್ಡ್, ಸರ್ರೈ
GU10 2AQ
ಯುನೈಟೆಡ್ ಕಿಂಗ್‌ಡಮ್

**ಸನ್ಮಾನ್ಯ ಶ್ರೀ ನರೇಂದ್ರ ಮೋದಿ**
ಭಾರತದ ಪ್ರಧಾನಮಂತ್ರಿ
ಸೌತ್‌ಬ್ಲೋಕ್, ನವದೆಹಲಿ 110011
ಭಾರತ

2 ಜೂನ್ 2020

ಪ್ರಿಯ ಪ್ರಧಾನಮಂತ್ರಿಯವರೇ,

ಇತ್ತೀಚೆಗಿನ ಕೆಲವು ವಾರಗಳಲ್ಲಿ ಕೋವಿಡ್-19 ಮಹಾಮಾರಿಯ ವಿನಾಶಕಾರಿ ಪರಿಣಾಮಗಳ ಕಾರಣದಿಂದ ನಿಮ್ಮ ದೇಶದ ಅನೇಕ ಜನರಿಗೆ ಜೀವಹಾನಿ ಸಂಭವಿಸಿದ ಬಗ್ಗೆ ನನ್ನ ಅತ್ಯಂತ ಗಾಢವಾದ ಸಹಾನುಭೂತಿಯನ್ನೂ ಸಂತಾಪವನ್ನೂ ನಿಮಗೂ ನಿಮ್ಮ ಸರಕಾರಕ್ಕೂ ನಿಮ್ಮ ದೇಶದ ಜನರಿಗೂ ಸೂಚಿಸಲು ಈ ಪತ್ರವನ್ನು ಬರೆಯುತ್ತಿದ್ದೇನೆ.

ಎಲ್ಲ ದೇಶಗಳ ಜನರಿಗೆ ಅವರು ಯುವಕರಾಗಿರಲಿ, ವೃದ್ಧರಾಗಿರಲಿ, ಬಡವರಾಗಿರಲಿ, ಶ್ರೀಮಂತರಾಗಿರಲಿ, ಶಕ್ತಿಶಾಲಿಗಳಾಗಿರಲಿ, ಬಲಹೀನರಾಗಿರಲಿ ಈ ಮಾರಕ ರೋಗ ಅಗಾಧವಾದ ಆತಂಕವನ್ನೂ ಬೇಗುದಿಯನ್ನೂ ಉಂಟುಮಾಡಿದೆ. ಮಾನವರ ತಪ್ಪು ಮಾಡುವಿಕೆಯನ್ನೂ ಬಲಹೀನತೆಯನ್ನೂ ಈ ವೈರಾಣು ವರ್ಧಿಸಿ ಪ್ರಕಟಿಸಿದೆ. ನಾಳೆ ಏನಾಗುವುದೆಂದು ನಮ್ಮಲ್ಲಿ ಯಾರಿಗೂ ದೃಢವಾಗಿ ಹೇಳಲು ಸಾಧ್ಯವಿಲ್ಲದಾಗಿದೆ.

ಸರಕಾರಗಳು ತಮ್ಮ ಸಂಪನ್ಮೂಲಗಳಿಗನುಸಾರವಾಗಿ ಈ ಮಹಾಮಾರಿಯನ್ನು ನಿಯಂತ್ರಿಸಲು ಮತ್ತು ಅದನ್ನು ಬೇಗನೆ ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಕೆಲವು ತಿಂಗಳುಗಳಿಂದ ಕಾರ್ಯನಿರತವಾಗಿವೆ.

ವೈರಾಣು ಹಬ್ಬುವುದನ್ನು ತಡೆಗಟ್ಟಲು ಮತ್ತು ಅದರಿಂದ ಬಾಧಿತರಾದವರನ್ನು ಚಿಕಿತ್ಸೆ ಮಾಡಲು ಸಮರ್ಪಕವಾದ ಕ್ರಮಗಳನ್ನು ನಿಮ್ಮ ಸರಕಾರ ಕೈಗೊಂಡಿದೆ. ಪ್ರತಿರೋಧಕ ಕ್ರಮಗಳು ಮತ್ತು ಚಿಕಿತ್ಸೆ ಫಲದಾಯಕವಾಗಿದ್ದು ಕೊರೋನ ವೈರಾಣುವಿನ ಹರಡುವಿಕೆಯ

ವೇಗವನ್ನು ತಗ್ಗಿಸಿದೆ ಎಂಬುದು ಸಂತೋಷಕರವಾಗಿದೆ.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಧಾರ್ಮಿಕ ನಾಯಕನಾದ ನಾನು ನನ್ನ ದೃಢವಾದ ನಂಬಿಕೆಯನ್ನು ನಿಮ್ಮ ಅವಗಾಹನೆಗೆ ತರುವುದು ನನ್ನ ಹೊಣೆಗಾರಿಕೆಯಾಗಿದೆ. ಎಲ್ಲ ದೇಶಗಳ ಜನರು ಮತ್ತು ಅವರ ನಾಯಕರು ಈ ಮಹಾಮಾರಿಯ ಬಗ್ಗೆ ಚಿಂತಿಸಬೇಕಾಗಿದೆ. ಈ ಅಸಾಧಾರಣವಾದ ಅಪಾಯಕಾರಿ ಪರಿಸ್ಥಿತಿಯನ್ನು ಎದುರಿಸಲು ಕೇವಲ ಭೌತಿಕ ಮತ್ತು ಲೌಕಿಕ ಸಂಪನ್ಮೂಲಗಳನ್ನು ಮಾತ್ರ ಅವಲಂಬಿಸುವುದು ಸಾಕಾಗಲಾರದು ಎಂದು ನಾನು ದೃಢವಾಗಿ ನಂಬುತ್ತೇನೆ. ಎಲ್ಲ ದೇಶಗಳು ಚಿಂತಿಸಬೇಕು. ಈ ವೈರಾಣು ಇಷ್ಟು ವೇಗವಾಗಿ ಹರಡಿ ಇಷ್ಟೆಲ್ಲ ಕಷ್ಟ ಕಾರ್ಪಣ್ಯಗಳನ್ನು ಉಂಟುಮಾಡಿ ಲೋಕವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿದುದು ಏಕೆ ಮತ್ತು ಹೇಗೆ? ಕೇವಲ ಮಾನವ ಪ್ರಯತ್ನದಿಂದ ಈ ವೈರಾಣು ಇಷ್ಟು ವಿಸ್ತಾರವಾದ ಮತ್ತು ಶಕ್ತಿಗುಂದಿಸುವ ಪರಿಣಾಮ ಉಂಟುಮಾಡಲು ಸಾಧ್ಯತೆಗಳಿರುವುದಿಲ್ಲ. ಆದುದರಿಂದ ಒಬ್ಬ ಧಾರ್ಮಿಕ ನಾಯಕನಾದ ನನ್ನ ದೃಢನಂಬಿಕೆ ಇದಾಗಿದೆ: ಕಳೆದ ಕೆಲವು ವಾರಗಳಲ್ಲಿ ಲೋಕದಾದ್ಯಂತ ಹಬ್ಬಿರುವ ಕ್ಲೇಶಗಳಿಗೆ ಕಾರಣ ಸರ್ವಶಕ್ತನಾದ ದೇವನ ವಿಧಿ ನಿರ್ಣಯವಾಗಿದೆ. ಸರ್ವಶಕ್ತನಾದ ದೇವನು ಮಾನವರಿಗೆ ತೀವ್ರವಾಗಿ ಮುನ್ನೆಚ್ಚರಿಕೆ ಮತ್ತು ಮಾರ್ಗದರ್ಶನ ನೀಡುತ್ತಿದ್ದಾನೆ. ಜನರು ತಮ್ಮನ್ನು ಸುಧಾರಣೆ ಮಾಡಬೇಕೆಂದು ಮತ್ತು ಎಲ್ಲ ವಿಧ ಅನ್ಯಾಯ ವರ್ತನೆಗಳನ್ನೂ ಕ್ರೌರ್ಯ ಕೃತ್ಯಗಳನ್ನೂ ತ್ಯಜಿಸಬೇಕೆಂದು ಈ ಮಹಾಮಾರಿ ಮೂಲಕ ಜನರಿಗೆ ನೀಡಲ್ಪಟ್ಟ ಕಣ್ಣು ಕುಕ್ಕುವ ಸಂದೇಶವೇನೆಂದರೆ– ಮಾನವರೆಲ್ಲರೂ ಸರ್ವಶಕ್ತನಾದ ದೇವನ ಕಡೆಗೆ ಅಭಿಮುಖೀಕರಿಸಬೇಕು. ಅವನ ಹಕ್ಕುಗಳನ್ನೂ ತಮ್ಮ ಸಹಜೀವಿಗಳ ಹಕ್ಕುಗಳನ್ನೂ ಈಡೇರಿಸಬೇಕು.

ಅಹ್ಮದಿಯಾ ಮುಸ್ಲಿಮ್ ಜಮಾಅತ್ 1889ರಲ್ಲಿ ಭಾರತದ ಖಾದಿಯಾನ್ ಎಂಬ ಗ್ರಾಮದಲ್ಲಿ ಸ್ಥಾಪಿಸಲ್ಪಟ್ಟ ಸಂಘಟನೆಯಾಗಿದ್ದು ಅದರ ಸ್ಥಾಪಕ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ (ಅವರ ಮೇಲೆ ಶಾಂತಿ ಇರಲಿ) ತಾನು ಸರ್ವಶಕ್ತನಾದ ಅಲ್ಲಾಹನಿಂದ ನಿಯೋಜಿಸಲ್ಪಟ್ಟ ಸುಧಾರಕ ಎಂದು ವಾದಿಸಿದ್ದರು. ಲೋಕದ ಜನರನ್ನು ದೇವನ ಸಮೀಪಕ್ಕೆ ತರುವುದು ಮತ್ತು ಜನರು ಒಬ್ಬರಿನ್ನೊಬ್ಬರಿಗೆ ತಮ್ಮ ಹೊಣೆಗಾರಿಕೆಗಳನ್ನೂ ಕರ್ತವ್ಯಗಳನ್ನೂ ನಿರ್ವಹಿಸುವ ಬಗ್ಗೆ ಉಪದೇಶಿಸುವುದು ಅವರಿಗೆ ನೀಡಲಾದ ದೈವಿಕ ಹೊಣೆಗಾರಿಕೆಯಾಗಿತ್ತು.

**ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ (ಅವರ ಮೇಲೆ ಶಾಂತಿ ಇರಲಿ) ಹೀಗೆ ಹೇಳಿದ್ದರು: "ಮನುಷ್ಯರ ಧಾರ್ಮಿಕ ವಿಶ್ವಾಸ ಮತ್ತು ಅವಿಶ್ವಾಸದ ಬಗ್ಗೆ ಪರಲೋಕದಲ್ಲಿ ತೀರ್ಮಾನವಾಗುವುದು. ನೈಸರ್ಗಿಕ ವಿಪತ್ತುಗಳು ಈಗ ಸಂಭವಿಸುತ್ತಿರುವುದು ಮತ್ತು ಹಿಂದಿನ ಕಾಲದಲ್ಲಿ ಜನರು ವಿಪತ್ತುಗಳ ಮೂಲಕ ನಾಶವಾದುದು ಕೇವಲ ಜನರ ಧಾರ್ಮಿಕ ಅವಿಶ್ವಾಸಗಳ ಕಾರಣದಿಂದ ಮಾತ್ರವಲ್ಲ. ಜನರ ದುರಹಂಕಾರ, ಅತಿರೇಕ ವರ್ತನೆ ಮತ್ತು ಕ್ರೌರ್ಯಗಳ ಕಾರಣದಿಂದ ಅವರು ನಾಶವಾದರು. ಫರೋವ ಚಕ್ರವರ್ತಿ ನಾಶವಾದುದು ಸಹ ಆತನ ಧಾರ್ಮಿಕ ಅವಿಶ್ವಾಸದ ಕಾರಣದಿಂದಲ್ಲ. ಆತನ ಅನ್ಯಾಯಭರಿತ ವರ್ತನೆ ಮತ್ತು ಆತನು ಮಾಡಿದ ಬರ್ಬರ ಕೃತ್ಯಗಳ ಕಾರಣದಿಂದ ಆತನು ನಾಶವಾದನು."**

ಇನ್ನೊಂದು ಗಮನಾರ್ಹ ವಿಷಯವೇನೆಂದರೆ, ನಾವು ನಮ್ಮ ಹಿಂದಿನ ಕಾಲದ ಚರಿತ್ರೆಯ ಮಾಹಿತಿಗಳನ್ನು ಅರಿತುಕೊಳ್ಳುವುದು ಮಾತ್ರ ಸಾಕಾಗಲಾರದು. ನಾವು ಚರಿತ್ರೆ ಕಲಿಸುವ ಪಾಠಗಳನ್ನೂ ಮನವರಿಕೆ ಮಾಡಿಕೊಳ್ಳಬೇಕು. ಆದುದರಿಂದ ನೈಸರ್ಗಿಕ ವಿಪತ್ತುಗಳು, ಮಹಾಮಾರಿಗಳು ಸಂಭವಿಸುವುದನ್ನು ನಿರ್ಲಕ್ಷಿಸಬಾರದು. ಅವುಗಳು ದೇವನ ವಿಧಿನಿರ್ಣಯ ಪ್ರಕಾರ ಸಂಭವಿಸುತ್ತವೆ ಎಂದೂ ಎಲ್ಲ ವಿಧ ಅನ್ಯಾಯಗಳನ್ನು ತ್ಯಜಿಸುವ ಬಗ್ಗೆ ಮತ್ತು ಸರ್ವಶಕ್ತನಾದ ದೇವನು ಎಲ್ಲ ಸೃಷ್ಟಿಗಳ ಸೃಷ್ಟಿಕರ್ತನೆಂದು ಗುರುತಿಸಬೇಕೆಂಬ ಬಗ್ಗೆ ಮುನ್ನೆಚ್ಚರಿಕೆ ನೀಡುತ್ತವೆ ಎಂದೂ ಗಣಿಸಬೇಕು. ದೇವನ ಸಾಮೀಪ್ಯ ಮತ್ತು ಸಂಪ್ರೀತಿ ಗಳಿಸಲು ದೇವನಿಗೆ ಸಂಬಂಧಿಸಿದ ಹಕ್ಕುಗಳನ್ನೂ ದೇವನ ಸೃಷ್ಟಿಗಳಿಗೆ ಸಂಬಂಧಿಸಿದ ಹಕ್ಕುಗಳನ್ನೂ ಈಡೇರಿಸುವುದು ಆವಶ್ಯಕವಾಗಿದೆ.

ಇತ್ತೀಚೆಗೆ ಪೋಪ್ ಫ್ರಾನ್ಸಿಸ್ ಅವರು ಹೀಗೆ ಹೇಳಿದರು: ನಾನು ದೇವನೊಂದಿಗೆ ಮಾನವರ ವರ್ತನೆಗಳಿಂದ ನೀನು ತೃಪ್ತನಾಗಿರುವಿರುವೆಯೋ ಎಂದು ಕೇಳುವುದಾದರೆ ದೇವನು ತನ್ನ ಅತೃಪ್ತಿಯನ್ನು ಪ್ರಕಟಿಸುವನು ಎಂದು ನಾನು ಭಯಪಡುತ್ತೇನೆ. ಇಷ್ಟು ಮಾತ್ರವಲ್ಲ, ಪೋಪ್ ಫ್ರಾನ್ಸಿಸ್ ಹೀಗೆ ಸೂಚಿಸಿದರು: ಇಂದಿನ ಕಾಲದ ನೈಸರ್ಗಿಕ ವಿಪತ್ತುಗಳು ಇಂದಿನ ಲೋಕದ ದುಷ್ಕರ್ಮಗಳಿಗೆ ಮತ್ತು ನಿರ್ಲಕ್ಷ್ಯತೆಗಳಿಗೆ ಉತ್ತರವಾಗಿರುವ ಪ್ರತಿಕ್ರಿಯೆಯಾಗಿದೆ.

ನಾನು ಪೋಪ್ ಫ್ರಾನ್ಸಿಸರ ಭಾವನೆಗಳೊಂದಿಗೆ ಒಮ್ಮತ ಹೊಂದಿದ್ದೇನೆ. ಲೋಕದ ನಾಯಕರು, ಸರಕಾರಗಳು ಮತ್ತು ಜನರು

ತಮ್ಮ ಮುಂದೆ ಇರುವ ಕಠಿಣವಾದ ವಾಸ್ತವಿಕತೆಯನ್ನು ಗಂಭೀರವಾಗಿ ಪರಿಗಣಿಸುವುದು ಆವಶ್ಯಕವಾಗಿದೆ.

ಪ್ರಚಲಿತ ಪರಿಸ್ಥಿತಿಯ ಬೆಳಕಿನಲ್ಲಿ ನಾನು ಪ್ರಾಮಾಣಿಕವಾಗಿ, ವಿನೀತನಾಗಿ ನಿಮ್ಮೊಂದಿಗೆ ಅಪೇಕ್ಷಿಸುತ್ತೇನೆ. ಕೊರೋನ ವೈರಾಣು ಹರಡುವುದನ್ನು ತಡೆಗಟ್ಟಲು ಕಾರ್ಯಯೋಜನೆಗಳನ್ನು ನಿಮ್ಮ ಸರಕಾರ ರೂಪಿಸುತ್ತಿರುವಾಗ ಅದರೊಂದಿಗೆ ನಿಮ್ಮ ದೇಶದ ನಾಗರಿಕರು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿಕೊಡಲು ಮತ್ತು ಮಾನವರ ಹಿತಕ್ಕೋಸ್ಕರ ವೈಯಕ್ತಿಕ ತ್ಯಾಗಗಳನ್ನು ಮಾಡಲು ಸದಾ ಸನ್ನದ್ಧರಾಗಲು ಪ್ರೋತ್ಸಾಹಿಸುತ್ತಿರಬೇಕು.

ಅದೇ ರೀತಿ ನಿಮ್ಮ ದೇಶದಲ್ಲಿಯೂ ಅಂತರ್‍ರಾಷ್ಟ್ರೀಯ ಮಟ್ಟದಲ್ಲಿಯೂ ಸಮಾಜದಲ್ಲಿ ಶಾಂತಿ ಮತ್ತು ಭದ್ರತೆಯನ್ನು ಖಾತರಿಪಡಿಸಲು ನಿಮ್ಮ ಸರಕಾರ ಪರಿಶ್ರಮಿಸಬೇಕು. ನಿಮ್ಮ ದೇಶದ ಜನರ ಹಕ್ಕುಗಳನ್ನು ಮತ್ತು ಇತರ ಎಲ್ಲ ಜನಾಂಗಗಳ ಹಕ್ಕುಗಳನ್ನು ಈಡೇರಿಸಲು ನ್ಯಾಯಪಾಲನೆ ಮತ್ತು ಸಮಗ್ರತೆಯ ಆವಶ್ಯಕತೆಗಳನ್ನು ನೀವು ಬೆಂಬಲಿಸಬೇಕೆಂದು ನಾನು ತಮ್ಮೊಂದಿಗೆ ಪ್ರಾಮಾಣಿಕವಾಗಿ ಅಪೇಕ್ಷಿಸುತ್ತೇನೆ.

ನಿಸ್ಸಂಶಯವಾಗಿ ಕೋವಿಡ್–19 ಜಾಗತಿಕ ಆರ್ಥಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಅಸ್ತವ್ಯಸ್ತ ಗೊಳಿಸಿದೆ. ಆದುದರಿಂದ ಮುಂದಿನ ವಾರಗಳು, ತಿಂಗಳುಗಳು ಮತ್ತು ವರ್ಷಗಳು ಅತ್ಯಂತ ಅಪಾಯಕರವೂ ಪಂಥಾಹ್ವಾನ ನೀಡುವಂತಹದೂ ಆಗುವುವು ಎಂಬುದು ಸ್ಪಷ್ಟವಾಗಿದೆ. ಕೆಲವು ತಿಂಗಳುಗಳ ನಂತರ ಲೋಕದ ಸ್ಥಿತಿ ಎಷ್ಟು ಅಭದ್ರವಾಗಿರುವುದೆಂದು ನಿಶ್ಚಯವಾಗಿಯೂ ಹೆಚ್ಚಿನ ಜನರಿಗೆ ತಿಳಿದಿಲ್ಲ. ಚರಿತ್ರೆ ನಮಗೆ ಹೀಗೆ ಕಲಿಸಿ ಕೊಡುತ್ತದೆ: ಸರಕಾರಗಳು ತಮ್ಮ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಲೋಕದ ಸಾಮೂಹಿಕ ಹಿತಾಸಕ್ತಿಗಳ ಮೇಲೆ ಆದ್ಯತೆ ನೀಡುವಾಗ ಅದರ ಪರಿಣಾಮಗಳು ಅನಿವಾರ್ಯವಾಗಿ ಮಹಾ ವಿಪತ್ತುಗಳಿಗೆ ಹೇತುವಾಗುತ್ತವೆ. ಆರ್ಥಿಕ ಅಥವಾ ವಾಣಿಜ್ಯ ಸಮರಗಳು ಸಂಭವಿಸುತ್ತವೆ ಮತ್ತು ದೇಶಗಳ ಮಧ್ಯೆ ದ್ವೇಷಾಸೂಯೆಗಳನ್ನು ವರ್ಧಿಸುತ್ತವೆ. ಬಹಿರಂಗ ಯುದ್ಧಗಳೂ ರಕ್ತಪಾತದ ಸಂಘರ್ಷಗಳೂ ಪ್ರಾರಂಭವಾಗಿ ಊಹಾತೀತ ವಿನಾಶವುಂಟುಮಾಡುವ ಆಯುಧಗಳು ಬಳಸಲ್ಪಡುತ್ತವೆ ಮತ್ತು ಅಸ್ತ್ರಗಳನ್ನು ಬಳಸುವಾಗ ಮುಂದಿರುವ ಎಲ್ಲವೂ ಅಳಿಸಲ್ಪಡುತ್ತವೆ. ಆದುದರಿಂದ ನಾನು ಪ್ರಾಮಾಣಿಕವಾಗಿ, ವಿನೀತನಾಗಿ ನಿಮ್ಮೊಂದಿಗೆ ಅಪೇಕ್ಷಿಸುತ್ತೇನೆ: ನಿಮ್ಮ ದೇಶದ ನೇತಾರನಾದ ನೀವು ನಿಮ್ಮ ಧೋರಣೆಗಳನ್ನು ನ್ಯಾಯ ನಿಷ್ಠೆಯ ಅಸ್ತಿಭಾರದ ಮೇಲೆ ರೂಪಿಸಬೇಕು. ಆ ಮೂಲಕ ಲೋಕವು ಇನ್ನಷ್ಟು ಕಷ್ಟಗಳಿಂದಲೂ ವಿನಾಶದಿಂದಲೂ ರಕ್ಷಿಸಲ್ಪಡುವಂತಾಗಬೇಕು.

ನಾನು ಹೃತ್ಪೂರ್ವಕವಾಗಿ ಭರವಸೆ ಹೊಂದಿದ್ದೇನೆ ಮತ್ತು ಪ್ರಾರ್ಥಿಸುತ್ತೇನೆ – ನೀವು ನನ್ನ ಶ್ರದ್ಧಾಪೂರ್ವಕವಾದ ಮಾತುಗಳ ಕಡೆಗೆ ಗಮನ ಹರಿಸುವಿರೆಂದು.

ನಿಮ್ಮ ದೇಶದಲ್ಲಿ ಮತ್ತು ವಿಶಾಲವಾದ ಲೋಕದಲ್ಲಿ ಶಾಂತಿ ಸ್ಥಾಪನೆಗೋಸ್ಕರ ಎಲ್ಲ ಪಕ್ಷಗಳ ಜನರ ಮತ್ತು ಎಲ್ಲ ದೇಶಗಳ ಜನರ ಹಕ್ಕುಗಳನ್ನು ಗೌರವಿಸುವ ಮತ್ತು ಐಕ್ಯತೆಯನ್ನು ಸ್ಥಾಪಿಸುವ ಆರ್ಥಿಕ, ಭೌಗೋಲಿಕ ಮತ್ತು ರಾಜಕೀಯ ಧೋರಣೆಗಳನ್ನು ರೂಪಿಸುವುದರಲ್ಲಿ ನೀವು ನಿಮ್ಮ ಪಾತ್ರ ವಹಿಸುವವರಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಸರ್ವಶಕ್ತನಾದ ಅಲ್ಲಾಹನು ನಿಮಗೆ ಮತ್ತು ಇತರ ಜಾಗತಿಕ ನಾಯಕರಿಗೆ ಮಾನವರ ಏಳಿಗೆಗೋಸ್ಕರ ಕಾರ್ಯನಿರತರಾಗುವ ಸಾಮರ್ಥ್ಯವನ್ನು ದಯಪಾಲಿಸಲಿ. ಆ ಮೂಲಕ ನಮ್ಮ ಮುಂದಿನ ಪೀಳಿಗೆಗೆ ಶಾಂತಿ ಮತ್ತು ಸಮೃದ್ಧಿಯ ಬಳುವಳಿಯನ್ನು ಬಿಟ್ಟು ಹೋಗಲು ನಮಗೆ ಸಾಧ್ಯವಾಗಲಿ.

ಶುಭಾಶಯಗಳೊಂದಿಗೆ ಮತ್ತು ಪ್ರಾರ್ಥನೆಯೊಂದಿಗೆ,

ಇತಿ,

**ಮಿರ್ಝಾ ಮಸ್‌ರೂರ್ ಅಹ್ಮದ್**

**ಖಲೀಫತುಲ್ ಮಸೀಹ್**

**ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋನ್ನತ ನೇತಾರ.**

## ವಿಜ್ಞಾನ

# ಪರಿಶುದ್ಧ ಖುರ್‌ಆನ್ ಅಲ್ಲಾಹನ ವಚನವೆಂಬುದಕ್ಕೆ ವೈಜ್ಞಾನಿಕ ಸಾಕ್ಷ್ಯ

"ದಿಟವಾಗಿಯೂ ನಾವು ಮನುಷ್ಯನನ್ನು ಆವೆಮಣ್ಣಿನ ಸತ್ವದಿಂದ ಸೃಷ್ಟಿಸಿದ್ದೇವೆ. ಅನಂತರ ನಾವು ಅದನ್ನು ವೀರ್ಯರೂಪದಲ್ಲಿ ಸುಭದ್ರವಾದೊಂದು ಸ್ಥಳದಲ್ಲಿರಿಸಿದೆವು. ಅನಂತರ ನಾವು ಆ ವೀರ್ಯವನ್ನು ಅಂಟಿಕೊಳ್ಳುವ ವಸ್ತುವನ್ನಾಗಿ ಮಾಡಿದೆವು. ಅನಂತರ ಆ ಅಂಟಿಕೊಳ್ಳುವ ವಸ್ತುವನ್ನು (ಆಕಾರ ರಹಿತವಾದ) ಮಾಂಸ ಮುದ್ದೆಯನ್ನಾಗಿ ಮಾಡಿದೆವು. ಅನಂತರ ಆ ಮಾಂಸ ಮುದ್ದೆಯನ್ನು ಅಸ್ಥಿಗಳನ್ನಾಗಿ ರೂಪಾಂತರಗೊಳಿಸಿದೆವು. ಅನಂತರ ಮಾಂಸದಿಂದ ಎಲುಬುಗಳನ್ನು ಮುಚ್ಚಿದೆವು. ಅನಂತರ ನಾವು ಅದನ್ನು ಇನ್ನೊಂದು ಸೃಷ್ಟಿಯಾಗಿ ಮಾರ್ಪಡಿಸಿದೆವು. ಹೀಗೆ ಅತ್ಯುತ್ತಮವಾಗಿ ಸೃಷ್ಟಿಸುವ ಅಲ್ಲಾಹನು ಅನುಗ್ರಹಪೂರ್ಣನಾಗಿದ್ದಾನೆ." (23:13–15)

ಈ ವಚನಗಳು 1980ರ ದಶಕದಲ್ಲಿ, ವೈಜ್ಞಾನಿಕ ಲೋಕದಲ್ಲಿ ತುಂಬಾ ಅಲ್ಲೋಲ ಕಲ್ಲೋಲ ಉಂಟುಮಾಡಿತ್ತು. ಆಗ ಸೌದಿ ಅರೇಬಿಯಾದ ಕಿಂಗ್ ಅಬ್ದುಲ್ ಅಝೀಝ್ ವಿಶ್ವವಿದ್ಯಾಲಯದಲ್ಲಿ ನಡೆದ ಸಮ್ಮೇಳನದಲ್ಲಿ ಮಾನವ ಅಂಗರಚನಾಶಾಸ್ತ್ರ ಮತ್ತು ಭ್ರೂಣಶಾಸ್ತ್ರದ ಕುರಿತು ಉಪನ್ಯಾಸ ನೀಡಲು ವಿಶ್ವದಾದ್ಯಂತದಿಂದ ವಿಜ್ಞಾನಿಗಳನ್ನು ಆಹ್ವಾನಿಸಲಾಗಿತ್ತು. ಅವರಲ್ಲಿ ಡಾ. ಕೀತ್ ಮೂರ್ ಎಂಬ ಹೆಸರಿನ ಕೆನಡಾದ ಸುಪ್ರಸಿದ್ಧ ಭ್ರೂಣಶಾಸ್ತ್ರಜ್ಞರೂ ಒಬ್ಬರಾಗಿದ್ದರು.

ಅವರು ಅಲ್ಲಿದ್ದಾಗ, ಮೇಲೆ ಹೇಳಿದ ಖುರ್‌ಆನಿನ ವಚನಗಳನ್ನು ಮತ್ತು ಮಾನವ ಸಂತಾನೋತ್ಪತ್ತಿ ಮತ್ತು ಭ್ರೂಣಶಾಸ್ತ್ರದ ಬೆಳವಣಿಗೆಯನ್ನು ಉಲ್ಲೇಖಿಸುವ ಕೆಲವು ಹದೀಸಿನ ಮಾತುಗಳನ್ನು ಅರ್ಥೈಸುವಲ್ಲಿ ಸಹಾಯಕ್ಕಾಗಿ ಕಿಂಗ್ ಅಬ್ದುಲ್ ಅಝೀಝ್ ವಿಶ್ವವಿದ್ಯಾಲಯದ ಭ್ರೂಣಶಾಸ್ತ್ರ ಸಮಿತಿಯು ಡಾ. ಮೂರ್ ಅವರನ್ನು ಸಂಪರ್ಕಿಸಿತು. ಕ್ರಿ.ಶ 7ನೇ ಶತಮಾನದಲ್ಲಿ ಅವತೀರ್ಣವಾದ ಪವಿತ್ರ ಖುರ್‌ಆನಿನಲ್ಲಿ ಹೇಳಲಾದ ಈ ವೈಜ್ಞಾನಿಕ ವಿಷಯಗಳ ನಿಖರತೆಯ ಬಗ್ಗೆ ಅವರು ಆಶ್ಚರ್ಯಚಕಿತರಾದರು.

ಮೇಲಿನ ವಚನಗಳನ್ನು ವಿವರವಾಗಿ ಅಧ್ಯಯನ ಮಾಡಿದ ಅವರು, ಭ್ರೂಣದ ಬೆಳವಣಿಗೆಯ ವಿವಿಧ ಹಂತಗಳಿಗೆ ಪವಿತ್ರ ಖುರ್‌ಆನಿನಲ್ಲಿ ಬಳಸಿದ ವಿವರಣೆಗಳ ನಿಖರತೆ ಮತ್ತು ಪರಿಭಾಷೆಯ ಬಗ್ಗೆ ತುಂಬಾ ಆಶ್ಚರ್ಯಚಕಿತರಾದರು. ಈ ಸತ್ಯ, ವಿಜ್ಞಾನಿಗಳು ಕಂಡು ಹಿಡಿಯುವುದಕ್ಕಿಂತಲೂ ಹಲವಾರು ಶತಮಾನಗಳ ಹಿಂದೆಯೇ ಉಲ್ಲೇಖಿಸಲ್ಪಟ್ಟಿದೆ ಎಂಬುದು ಅತ್ಯಂತ ಕುತೂಹಲಕರವಾಗಿದೆ ಎಂದರು:

"ಮಾನವ ಭ್ರೂಣದ ಬೆಳವಣಿಗೆಯ ಬಗ್ಗೆ ಪವಿತ್ರ ಖುರ್‌ಆನಿನ ಹೇಳಿಕೆಗಳನ್ನು ನೋಡಿ ನಾನು ಆಶ್ಚರ್ಯ ಚಕಿತನಾಗಿದ್ದೇನೆ. ಈ ಹೇಳಿಕೆಗಳು ಮುಹಮ್ಮದ್ ಪೈಗಂಬರರಿಗೆ(ಸ) ಅಲ್ಲಾಹನಿಂದಲೇ ಬಂದಿರಬೇಕು ಎಂಬುದು ನನಗೆ ಸ್ಪಷ್ಟವಾಗಿದೆ. ಯಾಕೆಂದರೆ ಈ ಜ್ಞಾನವನ್ನು ಆಧುನಿಕ ವಿಜ್ಞಾನ ಇತ್ತೀಚೆಗಷ್ಟೇ ಕಂಡುಕೊಂಡಿದೆ."

ಹಾಗಾದರೆ ಪವಿತ್ರ ಖುರ್‌ಆನ್ ದೇವನ ವಚನವೆಂದು ನೀವು ನಂಬುತ್ತೀರಾ ಎಂದು ಅವರನ್ನು ಕೇಳಿದಾಗ ಅವರು ಉತ್ತರಿಸಿದರು: "ಹೌದು. ಅದು ದೇವನ ವಚನವೆಂದು ಒಪ್ಪಿಕೊಳ್ಳಲು ನನಗೆ ಯಾವುದೇ ಸಂಕೋಚವಿಲ್ಲ."

ಡಾ. ಪರ್ಸಾದ್ ಎಂಬ ಹೆಸರಿನ ಇನ್ನೊಬ್ಬ ಅಂಗರಚನಾಶಾಸ್ತ್ರದ ಪ್ರೊಫೆಸರ್ ಅವರು ಡಾ. ಕೀತ್ ಮೂರ್ ಅವರ ಹೇಳಿಕೆಯನ್ನು ದೃಢಪಡಿಸಿದ್ದಾರೆ. ಅವರು ಹೇಳುತ್ತಾರೆ: "ಮುಹಮ್ಮದ್(ಸ) ಅವರು ತುಂಬಾ ಸಾಮಾನ್ಯ ವ್ಯಕ್ತಿಯಾಗಿದ್ದರು, ಅವರಿಗೆ ಓದು ಬರಹ ತಿಳಿದಿರಲಿಲ್ಲ, ವಾಸ್ತವವಾಗಿ ಅವರು ಅನಕ್ಷರಸ್ಥರಾಗಿದ್ದರು. ನಾವು ಸುಮಾರು 1,400 ವರ್ಷಗಳ ಹಿಂದಿನ ವಿಷಯಗಳ ಬಗ್ಗೆ ಇಲ್ಲಿ ಚರ್ಚಿಸುತ್ತಿದ್ದೇವೆ. ಒಬ್ಬ ಅನಕ್ಷರಸ್ಥ ವ್ಯಕ್ತಿ ವೈಜ್ಞಾನಿಕ ವಿಷಯಗಳ ಬಗ್ಗೆ ನಿಗೂಢವಾದ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಇದು ಆಶ್ಚರ್ಯಕರವಾದ ರೀತಿಯಲ್ಲಿ ಸತ್ಯವಾಗಿದೆ. ಇದನ್ನು ಕಾಕತಾಳೀಯವೆಂದು ನಾನು ಹೇಳಲಾರೆ. ಯಾಕೆಂದರೆ ಇದರಲ್ಲಿ ಹಲವಾರು ನಿಖರವಾದ ಸತ್ಯ ಸಂಗತಿಗಳಿವೆ. ಆದುದರಿಂದ ಡಾ. ಮೂರ್ ಅವರು ಹೇಳಿದಂತೆ ಇದು ದೇವನಿಂದ ಬಂದ ಒಂದು ಸತ್ಯವೆಂದು ಒಪ್ಪಿಕೊಳ್ಳಲು ನನಗೆ ಯಾವುದೇ ಮುಜುಗರವಿಲ್ಲ".

ಮಾಶಾಅಲ್ಲಾಹ್. ಅರೇಬಿಯನ್ ಮರುಭೂಮಿಯ ಆ ಮಹಾನ್ ಅನಕ್ಷರಸ್ಥ ವ್ಯಕ್ತಿಗೆ ಈ ರಹಸ್ಯವನ್ನು 1,400 ವರ್ಷಗಳ ಹಿಂದೆ ತಿಳಿಸಿದವರಾರು? ಆ ಮಹಾನ್ ಸರ್ವಶಕ್ತನಾದ ಅಲ್ಲಾಹನೇ ಅಲ್ಲವೇ?

– ಕೆ.ಕೆ ಬದ್ರುದ್ದೀನ್

**"ವಾಗ್ದಾನವನ್ನು ನೆರವೇರಿಸುವುದು ಸತ್ಯವಿಶ್ವಾಸದ ಅಂಶವಾಗಿದೆ"**

**– ಹಝ್ರತ್ ಮುಹಮ್ಮದ್ ಪೈಗಂಬರ್(ಸ)**

ಪ್ರತಿಕ್ರಿಯೆ

# ಇಸ್ರೇಲಿನ ಏಜೆಂಟ್

ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರನ್ನು[ಅ] ಇಸ್ರೇಲಿನ ಏಜೆಂಟ್ ಎಂಬ ರೀತಿಯ ಆಕ್ಷೇಪಣೆ ಮಾಡಲಾಗುತ್ತದೆ. ಇದು ಒಂದು ಹೊಸ ಆರೋಪವಾಗಿದೆ. ಬಹುಶಃ ಇದು ಮುಸ್ಲಿಂ ಲೋಕದ ಹೃದಯಭಾಗದಲ್ಲಿ ಇಸ್ರೇಲ್ ಸೃಷ್ಟಿಯಾದ ಕಾರಣವಾಗಿರಬಹುದು. ಆದ್ದರಿಂದ ಮುಸ್ಲಿಮರಲ್ಲಿ ಇದು ಉಗ್ರ ಕೋಪವನ್ನುಂಟುಮಾಡಿದೆ. ಆ ಮೂಲಕ ಇದು ಬೆಂಕಿಗೆ ಇಂಧನವನ್ನು ಸುರಿಯುವ ವಿರೋಧಿಗಳ ಒಂದು ಪ್ರಯತ್ನವಾಗಿದೆ.

ಇದಕ್ಕೆ ಹೆಚ್ಚು ಹೇಳಬೇಕಾದ ಅಗತ್ಯವಿಲ್ಲ. ಇಸ್ರೇಲ್ ರಚನೆಯ ಮೊದಲೇ ಅಹ್ಮದೀ ಮುಸ್ಲಿಮರು ಪ್ಯಾಲೆಸ್ತೀನ್‌ನಲ್ಲಿದ್ದರು. ಅಲ್ಲಿನ ಮುಸ್ಲಿಮರಿಗೆ ಸೇವೆ ಸಲ್ಲಿಸಲು ಮತ್ತು ಇಸ್ಲಾಂ ಧರ್ಮವನ್ನು ಪ್ರಚಾರ ಮಾಡುವ ದೌತ್ಯ ಅಲ್ಲಿ ಮುಂದುವರೆದಿದೆ ಎಂಬುದನ್ನು ಅವರು ನೆನಪಿನಲ್ಲಿಡಬೇಕು.

ಅದಲ್ಲದೆ, ಅಹ್ಮದೀ ಮುಸ್ಲಿಂ, ಸರ್ ಚೌಧರಿ ಮುಹಮ್ಮದ್ ಝುಫರುಲ್ಲಾಹ್ ಖಾನ್ ಸಾಹೇಬರು, ಹೊಸದಾಗಿ ರೂಪುಗೊಂಡ ಪಾಕಿಸ್ತಾನದ ವಿದೇಶಾಂಗ ಕಾರ್ಯದರ್ಶಿಯಾಗಿದ್ದಾಗ, ಅವರು ಪ್ಯಾಲೆಸ್ತೀನ್ ಅರಬರ ಪರವಾಗಿ 1947ರ ಅಕ್ಟೋಬರ್ 9ರಂದು ಯುನೈಟೆಡ್ ನೇಶನ್ಸ್‌ನ ಅಸೆಂಬ್ಲಿಯಲ್ಲಿ ಇಸ್ರೇಲ್ ಸ್ಥಾಪನೆಯ ವಿರುದ್ಧ ಪ್ರಬಲವಾದ ಭಾಷಣವನ್ನು ಮಾಡಿದ್ದರು. ಆ ಭಾಷಣದ ಬಗ್ಗೆ ನವಾಯಿ ವಕ್ತ್ 12ನೇ ಅಕ್ಟೋಬರ್ 1947ರಲ್ಲಿ ಈ ಕೆಳಗಿನಂತೆ ವರದಿ ಮಾಡಿತ್ತು:

**"**ಪ್ಯಾಲೆಸ್ತೀನ್ ಪ್ರಶ್ನೆಯ ಕುರಿತು ಯು.ಎನ್. ಜನರಲ್ ಅಸೆಂಬ್ಲಿಯ ಸಮಿತಿಯಲ್ಲಿ ಪಾಕಿಸ್ತಾನ ನಿಯೋಗದ ಮುಖಂಡ ಮುಹಮ್ಮದ್ ಝುಫರುಲ್ಲಾಹ್ ಖಾನ್ ಅವರು ಮಾಡಿದ ಭಾಷಣವು ಆ ವಿಷಯದಲ್ಲಿ ಅತ್ಯಂತ ಮಹೋನ್ನತವಾಗಿತ್ತು. ಅವರು ನೂರಹದಿನೈದು ನಿಮಿಷಗಳ ಕಾಲ ಮಾತನಾಡಿದರು. ಅವರು ತಮ್ಮ ಭಾಷಣವನ್ನು ಮುಗಿಸಿದಾಗ, ಅರಬ್ ಪ್ರತಿನಿಧಿಯೊಬ್ಬರು, ಇದು ಅರಬರ ಸಮಸ್ಯೆಯ ಬಗ್ಗೆ ಮಾಡಿದ ಅತ್ಯುತ್ತಮ ಭಾಷಣವಾಗಿದೆ ಮತ್ತು ಈ ವಿಷಯದಲ್ಲಿ ಇಂತಹ ವಿವರಣೆಯನ್ನು ಇಲ್ಲಿಯವರೆಗೆ ನಾನು ಕೇಳಿಲ್ಲವೆಂದು ಹೇಳಿದರು**"**.

ಮುಹಮ್ಮದ್ ಝುಫರುಲ್ಲಾಹ್ ಖಾನ್ ಸಾಹೇಬರು ತಮ್ಮ ಭಾಷಣದ ಹೆಚ್ಚಿನ ಭಾಗವನ್ನು ಪ್ಯಾಲೆಸ್ತೀನ್ ವಿಭಜನೆಯ ವಿರುದ್ಧ ವಾದಿಸಲು ಮೀಸಲಿಟ್ಟರು. ಅವರ ಭಾಷಣದ ಸಮಯದಲ್ಲಿ ಅರಬ್ ಪ್ರತಿನಿಧಿಗಳ ಮುಖಗಳು ಸಂತೋಷದಿಂದ ಹೊಳೆಯುತ್ತಿದ್ದವು. ಭಾಷಣದ ಕೊನೆಯಲ್ಲಿ ಅರಬ್ ದೇಶಗಳ ಪ್ರತಿನಿಧಿಗಳು ಅವರ ಕೈಕುಲುಕಿ ಅವರ ಅದ್ಭುತ ಭಾಷಣಕ್ಕೆ ಅಭಿನಂದಿಸಿದರು. ಬ್ರಿಟಿಷ್ ಪ್ರತಿನಿಧಿಯೊಬ್ಬರು ಝುಫರುಲ್ಲಾಹ್ ಖಾನ್ ಅವರ ಭಾಷಣವು ಅತ್ಯುತ್ತಮವಾಗಿದೆಯೆಂದು ಹೇಳಿ, ಅದರ ನಕಲನ್ನು ಒದಗಿಸುವಂತೆ ವಿನಂತಿಸಿದರು ಹಾಗು ಅದನ್ನು ಅವರು ಲಕ್ಷ್ಯವಿಟ್ಟು ಅಧ್ಯಯನ ಮಾಡುವುದಾಗಿ ಝುಫರುಲ್ಲಾಹ್ ಖಾನ್ ಸಾಹೇಬರಿಗೆ ಸಂದೇಶ ಕಳುಹಿಸಿದರು.

ಲಾಹೋರ್‌ನ ಸರ್ಕಾರಿ ಕಾಲೇಜಿನಲ್ಲಿ 1947ರ ಡಿಸೆಂಬರ್ 9ರಂದು ಅವರ ಮತ್ತೊಂದು ಭಾಷಣವನ್ನು ಈ ಕೆಳಕಂಡಂತೆ ವರದಿಮಾಡಲಾಗಿತ್ತು:

ವಿಶ್ವಸಂಸ್ಥೆಯ ಅಸೆಂಬ್ಲಿಗೆ ಪಾಕಿಸ್ತಾನ ನಿಯೋಗದ ಮುಖಂಡ ಚೌಧರಿ ಮುಹಮ್ಮದ್ ಝುಫರುಲ್ಲಾಹ್ ಖಾನ್ ಪ್ಯಾಲೆಸ್ತೀನ್ ಸಮಸ್ಯೆಯ ಎಲ್ಲ ಅಂಶಗಳ ಬಗ್ಗೆ ದೀರ್ಘವಾಗಿ ಮಾತನಾಡಿದರು. ಪ್ಯಾಲೆಸ್ತೀನ್ ವಿಭಜನೆಯನ್ನು ಸಂಪೂರ್ಣವಾಗಿ ಶಿಫಾರಸು ಮಾಡುವ ಯು.ಎನ್. ಜನರಲ್ ಅಸೆಂಬ್ಲಿಯ ನಿರ್ಣಯವನ್ನು ಅವರು ಖಂಡಿಸಿದರು. ಲಾಹೋರಿನ ಸರ್ಕಾರಿ ಕಾಲೇಜಿನಲ್ಲಿ ಮಾತನಾಡಿದ ಅವರು, ಕೆಲವು ಸಣ್ಣ ಶಕ್ತಿಗಳ ಮೇಲೆ ಅನಗತ್ಯ ಒತ್ತಡ ಹೇರುವ ಮೂಲಕ ಪ್ಯಾಲೆಸ್ತೀನ್ ವಿಭಜನೆಯನ್ನು ಬೆಂಬಲಿಸುವ ಸಲುವಾಗಿ ಯುನೈಟೆಡ್ ಸ್ಟೇಟ್ಸ್‌ನ ಸರ್ಕಾರವು ವಿಶ್ವಸಂಸ್ಥೆಯ ಶಿಫಾರಸನ್ನು ಪಡೆದುಕೊಂಡಿದೆ ಎಂದು ವಿಷಾದ ವ್ಯಕ್ತಪಡಿಸಿದರು. ಯುನೈಟೆಡ್ ಸ್ಟೇಟ್ಸನ ಚುನಾವಣಾ ರಾಜಕೀಯದಲ್ಲಿ ಪ್ಯಾಲೆಸ್ತೀನನ್ನು ಪ್ಯಾದೆಯನ್ನಾಗಿ ಮಾಡಲಾಗಿದೆ ಎಂದು ಅವರು ಹೇಳಿದರು. ಪ್ಯಾಲೆಸ್ತೀನ್‌ನಲ್ಲಿ ಸ್ಥಾಪಿಸಲು ಉದ್ದೇಶಿತ ಯಹೂದಿ ರಾಜ್ಯದಲ್ಲಿ, ಬೃಹತ್ ಪ್ರಮಾಣದ ಅರಬ್ ಅಲ್ಪಸಂಖ್ಯಾತರನ್ನು ಯಹೂದಿ ಪ್ರಾಬಲ್ಯಕ್ಕೆ ಒಳಪಡಿಸುವುದಲ್ಲದೆ, ದೇಶದ ಆರ್ಥಿಕತೆಯು ಅಂತರರಾಷ್ಟ್ರೀಯ ನಿಯಂತ್ರಣದಲ್ಲಿ ಸಾಗುವಂತೆ ಮಾಡಲಾಗಿದೆ, ಅದು ಕಾನೂನುಬಾಹಿರ ಬೆಳವಣಿಗೆಯಾಗಿದೆ ಎಂದು ಅವರು ಹೇಳಿದರು.

ಆಗಿನ ಅಹ್ಮದಿಯಾ ಸಂಘಟನೆಯ ಆಧ್ಯಾತ್ಮಿಕ ನಾಯಕರಾದ ಹಝ್ರತ್ ಮಿರ್ಝಾ ಬಶಿರುದ್ದೀನ್ ಮಹಮೂದ್ ಅಹ್ಮದ್, ಖಲೀಫತುಲ್ ಮಸೀಹ್ ಸಾನಿಯವರು ಕೂಡ ಪ್ಯಾಲೆಸ್ತೀನ್ ವಿಭಜನೆಯ ವಿರುದ್ಧ ಬಲವಾದ ನಿಲುವು ವ್ಯಕ್ತಪಡಿಸಿದ್ದರು.

ಡಿಸೆಂಬರ್ 1, 1947ರ ನಂತರ, ಪ್ಯಾಲೇಸ್ತಿನಿಯನ್ ವಿಷಯವು ಮತ್ತೊಂದು ಹಂತವನ್ನು ಪ್ರವೇಶಿಸಿತು. ಅಮೇರಿಕಾದ ಮತ್ತು ರಶ್ಯಾದ ಜಂಟಿ ಪ್ರಯತ್ನಗಳ ಮೂಲಕ, ವಿಶ್ವಸಂಸ್ಥೆಯು ಪ್ಯಾಲೆಸ್ತೀನ್ ವಿಭಜನೆಯ ಪರವಾಗಿ ಅತ್ಯಂತ ಅನೀತಿಯಿಂದ ನಿರ್ಣಯವನ್ನು ಅಂಗೀಕರಿಸಿತು, ಅದು ಅತ್ಯಂತ ಅನ್ಯಾಯವಾಗಿದೆ. ಅಹ್ಮದಿಯಾ ಜಮಾಅತ್‌ನ ಎರಡನೇ ಖಲೀಫ, ಹಝ್ರತ್ ಮಿರ್ಝಾ ಬಶಿರುದ್ದೀನ್ ಮಹಮೂದ್ ಅಹ್ಮದ್[ರ] ಅವರು ಪ್ಯಾಲೆಸ್ತೀನ್ ವಿಭಜನೆಯ ವಾಸ್ತವತೆಯನ್ನು ಸ್ಪಷ್ಟಪಡಿಸುವ ಎರಡು ಪ್ರಬಲವಾದ ಲೇಖನಗಳನ್ನು ಬರೆದಿದ್ದಾರೆ. ಮೊದಲ ಲೇಖನ 1947 ನವೆಂಬರ್ 28 ಮತ್ತು ಎರಡನೆಯದು ಡಿಸೆಂಬರ್ 11 ರಂದು ಪ್ರಕಟಿಸಲಾಗಿದೆ.

**47ನೇ ಪುಟ ನೋಡಿ**

ಓದಿದ್ದು

# ಕ್ರಾಂತಿಕಾರಿ ಸುಧಾರಣೆಗಳನ್ನು ತಂದ ಟಿಪ್ಪು ಸುಲ್ತಾನ್: ಪ್ರೊ ನಂಜರಾಜೇ ಅರಸ್, ಇತಿಹಾಸ ತಜ್ಞ



**ಟಿಪ್ಪು ಮುಸ್ಲಿಮನಾಗಿ ಕಂಡದ್ದು ಯಾವಾಗಿನಿಂದ?**

ನಮ್ಮ ಕಾಲದಿಂದ ಹಿಡಿದು ಇಂದಿನವರೆಗೂ ಟಿಪ್ಪು ಬಗ್ಗೆ ಪಠ್ಯ ಪುಸ್ತಕಗಳಲ್ಲಿ ಮಾಹಿತಿಗಳಿವೆ. ಟಿಪ್ಪುವನ್ನು ವಿರೋಧಿಸುವವರೂ ಈ ಪಠ್ಯಗಳನ್ನು ಓದಿದ್ದಾರೆ. ಅವತ್ತು ನಾವು ಟಿಪ್ಪುಸುಲ್ತಾನ್ ಎಂಬ ವೀರನನ್ನು ನೋಡಿದ್ದೆವು. ಇವತ್ತು ಬಿಜೆಪಿ ಸರಕಾರ ಬಂದ ನಂತರ ಮುಸ್ಲಿಂ ರಾಜ ಎಂದು ನೋಡಲಾಗುತ್ತಿದೆ.

2015ರಲ್ಲಿ ಸಿದ್ದರಾಮಯ್ಯ ಸರಕಾರ ಅಧಿಕೃತವಾಗಿ ಟಿಪ್ಪು ಜಯಂತಿ ಮಾಡಲು ಹೊರಟಾಗ ಸಂಘಪರಿವಾರ ಅದೇ ಹೆಸರಿನಲ್ಲಿ ಹಿಂದೂ–ಮುಸ್ಲಿಮರ ನಡುವೆ ಕಂದಕ ತೋಡಿತು. ಆವತ್ತಿನಿಂದ ಟಿಪ್ಪು ಮುಸ್ಲಿಮನಾದ. ಇಲ್ಲದ ಕಥೆಗಳನ್ನು ಕಟ್ಟಲಾಯಿತು. ಕೊಡಗಿನಲ್ಲಿ 70 ಸಾವಿರ ಯುವಕರನ್ನು ಕೊಂದ ಎಂದು ಒಬ್ಬ ಹೇಳಿದರೆ, ಮತಾಂತರ ಮಾಡಿ ಶ್ರೀರಂಗಪಟ್ಟಣಕ್ಕೆ ಕರೆದುಕೊಂಡು ಹೋದ ಎಂದು ಮತ್ತೊಬ್ಬ ಹೇಳುತ್ತಾನೆ. ಆದರೆ ಮತ್ತೊಬ್ಬ 60 ಸಾವಿರ ಯುವಕರು ಎಂದರೆ ಇನ್ನೊಬ್ಬ 80 ಸಾವಿರ ಎನ್ನುತ್ತಾನೆ.

ದೇವಟಿಪರಂಬು ಎಂಬಲ್ಲಿ ಟಿಪ್ಪು ಈ ತಂತ್ರ ಹೂಡಿದ್ದ ಎಂದು ಆರೋಪಿಸಲಾಗುತ್ತಿದೆ. ಆದರೆ ಅದೇ ದೇವಟಿಪರಂಬುವಿನಲ್ಲಿ ಬಹುಶಃ 800 ಜನರಿಗಿಂತ ಹೆಚ್ಚು ಜನರು ನಿಲ್ಲಲು ಸಾಧ್ಯವಿಲ್ಲ. ಅಂಟಿಕೊಂಡು ನಿಂತರೂ 1,000 ಜನರು ನಿಲ್ಲಬಹುದು ಎನ್ನುವುದು ವಾಸ್ತವ.

ಇವರು 1785ರ ಆಸುಪಾಸಿನ ಕಥೆ ಹೇಳಿ ಸಾವಿರಾರು ಜನರನ್ನು ಕೊಂದ ಎಂದು ಹೇಳುತ್ತಾರೆ. 1785ರ ನಂತರ 50 ವರ್ಷಗಳ ಬಳಿಕ ಮೊದಲ ಜನಗಣತಿ ಬರುತ್ತದೆ. ಮೊದಲ ಜನಗಣತಿ ಪ್ರಕಾರ ಆವತ್ತಿನ ಕೊಡಗಿನ ಜನಸಂಖ್ಯೆ ಸುಮಾರು 73 ಸಾವಿರ ಮಾತ್ರ. ಅಂದರೆ ಅಜ್ಜನಿಂದ ಹಿಡಿದು ಮೊಮ್ಮಗುವಿನವರೆಗಿನ ಜನಸಂಖ್ಯೆ ಅದು. ಅದರಲ್ಲಿ ಗಂಡು, ಹೆಣ್ಣು, ಮಹಿಳೆಯರು, ವೃದ್ಧರು ಎಲ್ಲಾ ಸೇರಿದ್ದಾರೆ. ಹೀಗೆ ಬ್ರಿಟಿಷರಂತೆಯೇ ಹಿಂದೂ ಇತಿಹಾಸಕಾರರು ಕೂಡ ಉತ್ಪ್ರೇಕ್ಷೆಗಳ ಮೂಲಕ ಟಿಪ್ಪುವನ್ನು ಖಳನಾಯಕನನ್ನಾಗಿ ಮಾಡಿದ್ದಾರೆ.

**ದೇವಸ್ಥಾನಗಳನ್ನು ಒಡೆದಿಲ್ಲ, ಸಾವಿರ ಎಕರೆ ಜಮೀನು ನೀಡಿದ್ದ!**

ಮಲಬಾರಿನಿಂದ ಬರುವಾಗ ಸಾವಿರಾರು ದೇವಸ್ಥಾನಗಳನ್ನು ಟಿಪ್ಪು ಒಡೆದು ಹಾಕಿದ ಎಂದು ಕೆಲವರು ಹೇಳುತ್ತಾರೆ. ಗುರುವಾಯೂರು ದೇವಸ್ಥಾನದ ಕೃಷ್ಣ ವಿಗ್ರಹವನ್ನು ಬೇರೆ ಕಡೆ ಇಟ್ಟರು, 18 ವರ್ಷಗಳ ನಂತರ ಟಿಪ್ಪು ನಿಧನದ ಬಳಿಕ ಮತ್ತೆ ವಾಪಸ್ ತಂದು ಮರು ಪ್ರತಿಷ್ಠಾಪನೆ ಮಾಡಲಾಯಿತು ಎಂದೆಲ್ಲಾ ಕಥೆ ಕಟ್ಟಿದ್ದಾರೆ. ಆದರೆ ಟಿಪ್ಪು 870 ಎಕರೆ ತೋಟ ಸೇರಿ 1,000 ಎಕರೆ ಜಮೀನನ್ನು ದೇವಸ್ಥಾನಗಳಿಗೆ ಉಂಬಳಿ ನೀಡಿದ್ದ. ದಕ್ಷಿಣ ಮಲಬಾರಿನಲ್ಲಿ 63 ದೇವಸ್ಥಾನಗಳಿಗೆ, 3 ಮಸೀದಿಗಳಿಗೆ, ಉಂಬಳಿ, ದಾನ ನೀಡಿದ್ದ ದಾಖಲೆಗಳಿವೆ. ಆದರೆ ಇದನ್ನೆಲ್ಲಾ ಹೇಳದೆ ದೇವಸ್ಥಾನವನ್ನು ಒಡೆದು ಹಾಕಿದ ಎಂದು ಹೇಳುತ್ತಾರೆ.

**ದಕ್ಷಿಣದ ರಾಜರು ತಲೆಬಾಗಿಸಿ ನಿಂತಾಗ ಬ್ರಿಟಿಷರಿಗೆ ಸವಾಲೆಸೆದು ನಿಂತವನು ಟಿಪ್ಪು**

1782ರ ಡಿಸೆಂಬರ್‌ನಲ್ಲಿ 2ನೇ ಮೈಸೂರು ಯುದ್ಧ ನಡೆಯುತ್ತಿತ್ತು. ಮಂಗಳೂರು ಮಲಬಾರ್ ಮತ್ತು ಆರ್ಕಾಟ್ ಎರಡೂ ದಿಕ್ಕುಗಳಲ್ಲಿ ನಡೆಯುತ್ತಿದ್ದ ಈ ಯುದ್ಧದಲ್ಲಿ ಹೈದರ್ ಅಲಿ ಕೊನೆಯುಸಿರೆಳೆಯುತ್ತಾನೆ. ಆರ್ಕಾಟ್‌ನ ನಾರಾಯಣಪುರ ಎಂಬ ಹಳ್ಳಿಯಲ್ಲಿ ಟಿಪ್ಪು ಸುಲ್ತಾನನ ತಂದೆ ಹೈದರ್‌ನ ಮರಣವಾಗುತ್ತದೆ. ಆನಂತರ ರಾಜನಾದವನೇ ಟಿಪ್ಪು ಸುಲ್ತಾನ್.

ಹೈದರ್ ಅಲಿ ಮರಣಾನಂತರ ರಾಜ್ಯದ ಅಧಿಕಾರಿಗಳಾದ ದಿವಾನ್ ಪೂರ್ಣಯ್ಯ, ಮೀರ್ ಸಾದಿಕ್ ಸೇರಿ ಪ್ರಮುಖರು ಒಮ್ಮತದಿಂದ ಹೈದರ್ ನಂತರ ಇವನೇ ಸೂಕ್ತ ಉತ್ತರಾಧಿಕಾರಿ ಎನ್ನುವ ನಿರ್ಧಾರಕ್ಕೆ ಬರುತ್ತಾರೆ. ಹೀಗೆ ಅಧಿಕಾರ ಏರಿದ ಟಿಪ್ಪು 1782ರಿಂದ 1799ರವರೆಗೆ ರಾಜ್ಯವನ್ನು ಆಳುತ್ತಾನೆ. ಬ್ರಿಟಿಷ್ ಆಡಳಿತದ ಆ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಬ್ರಿಟಿಷರಿಗೆ ಎದುರಾಗಿ ಯಾರೂ ಇರಲಿಲ್ಲ. ಹೈದರಾಬಾದ್ ನಿಝಾಮನಿಗೆ ಬ್ರಿಟಿಷರನ್ನು ಎದುರಿಸುವ ಧೈರ್ಯವಿರಲಿಲ್ಲ. ಹೀಗಾಗಿ ಬ್ರಿಟಿಷರು ಕೀಲಿ ತಿರುಗಿಸಿದ ಹಾಗೆ ಮಾತನಾಡುತ್ತಿದ್ದ, ನಡೆದುಕೊಳ್ಳುತ್ತಿದ್ದ. ಆರ್ಕಾಟ್ ನವಾಬ ಕೂಡ ಬ್ರಿಟಿಷರ ಆಶ್ರಯದಲ್ಲೇ ಇದ್ದ. ಮರಾಠರು ಒಮ್ಮೆ ಬ್ರಿಟಿಷರ ವಿರುದ್ಧ ನಿಂತರೆ ಮತ್ತೊಮ್ಮೆ ಅವರ ಜೊತೆ ಕೈಜೋಡಿಸುತ್ತಿದ್ದರು. ಶಕ್ತಿಯುತ ರಾಜರಿದ್ದರೂ ಕೂಡ ಬ್ರಿಟಿಷರನ್ನು ಓಡಿಸಬೇಕು ಎನ್ನುವ ಸಂಕಲ್ಪ ಅವರಲ್ಲಿ ಇರಲಿಲ್ಲ. ಆದರೆ ಈ ಎಲ್ಲರ ನಡುವೆ ದಕ್ಷಿಣ ಭಾರತದಲ್ಲಿ ಬ್ರಿಟಿಷರು ತಮ್ಮ ರಾಜ್ಯ ವಿಸ್ತರಿಸುವುದಕ್ಕೆ ತಡೆಯಾಗಿ ನಿಂತವನು ಟಿಪ್ಪುಸುಲ್ತಾನ್.

ಬ್ರಿಟಿಷರು ಪರಕೀಯರು, ಅವರನ್ನು ನನ್ನ ರಾಜ್ಯದಿಂದ ಓಡಿಸಬೇಕು. ಸಮುದ್ರದ ಆಚೆಯಿಂದ ಬಂದವರು ಸಮುದ್ರದ ಅಲೆಗೆ ಹೋಗಬೇಕು. ಅವರನ್ನು ಓಡಿಸಿಯೇ ಸಿದ್ಧ ಎನ್ನುವ ದೃಢ ನಿರ್ಧಾರ ಟಿಪ್ಪುವಿನಲ್ಲಿತ್ತು. ಆದರೆ ದಕ್ಷಿಣದ ರಾಜರು ಕೈಜೋಡಿಸಲಿಲ್ಲ. ಇದಕ್ಕೆ

ಕಾರಣ ಟಿಪ್ಪು ಅತ್ಯಂತ ಪ್ರಬಲ ವ್ಯಕ್ತಿಯಾಗಿದ್ದರೂ ಕೂಡ ಆತನನ್ನು ಇತರ ರಾಜರು, ಹಿಂದೂ ರಾಜರು, ಮರಾಠ ರಾಜರು, ಸಿಂಧ್ಯರು, ಮಧ್ಯಪ್ರದೇಶದ ರಾಜರು ನೋಡಿದ್ದು ಒಬ್ಬ ಮುಸ್ಲಿಮನಾಗಿ. ಹಾಗಾಗಿ ಅವನಿಂದ ದೂರ ನಿಂತರು. ನಿಝಾಮ, ಆರ್ಕಾಟ್ ನವಾಬರಿಗೆ ಟಿಪ್ಪು ನಮಗಿಂತ ಶಕ್ತಿಶಾಲಿ, ಪ್ರಭಾವಶಾಲಿ ಎನ್ನುವ ಭಯ ಇತ್ತು. ಹಾಗಾಗಿ ಅವರೂ ಕೂಡ ಟಿಪ್ಪುವಿನ ಜೊತೆ ನಿಲ್ಲಲಿಲ್ಲ.

ಆದರೆ ಟಿಪ್ಪುವಿನ ಜೊತೆ ಕೈ ಜೋಡಿಸದ ಇವರೆಲ್ಲಾ ಕೈಜೋಡಿಸಿದ್ದು ಬ್ರಿಟಿಷರ ಜೊತೆ. ಸಮಯಾವಕಾಶಕ್ಕಾಗಿ ಕಾಯುತ್ತಿದ್ದ ಬ್ರಿಟಿಷರು ಕುಂಟು ನೆಪ ಹೇಳಿ, ಟಿಪ್ಪುವಿನ ಬಗ್ಗೆ ಆರೋಪಗಳನ್ನು ಮಾಡಿ ದಕ್ಷಿಣದ ರಾಜರನ್ನು ಖರೀದಿಸುತ್ತಾರೆ. ಈಗ ಒಂದು ಕಡೆ ನಿಝಾಮರು, ಆರ್ಕಾಟ್ ನವಾಬರು, ಮರಾಠರು ಮತ್ತು ಬ್ರಿಟಿಷರು, ಮತ್ತೊಂದು ಕಡೆ ಒಬ್ಬನೇ ಒಬ್ಬ ಟಿಪ್ಪು.

## ಮೈಸೂರು ರಾಜರು: ಟಿಪ್ಪು ಮತ್ತು ಹೈದರ್

ಹೈದರ್ ಅಲಿ ಮಾಮೂಲಿ ಸೈನಿಕನಾಗಿ ಮೈಸೂರು ಅರಮನೆ ಸೇರುತ್ತಾನೆ. ಮಹಾರಾಜರ ದೌರ್ಬಲ್ಯವೋ, ದಳವಾಯಿಗಳ ಕುತಂತ್ರವೋ ಅಥವಾ ಹೈದರ್‌ನ ಅದೃಷ್ಟ ಮತ್ತು ಚಾಕಚಕ್ಯತೆಯೋ ಹೈದರ್‌ಗೆ ಅಧಿಕಾರ ಲಭಿಸುತ್ತದೆ. ಆತ ಸರ್ವಾಧಿಕಾರಿಯಾಗಿ ರಾಜ್ಯಭಾರ ನಡೆಸುತ್ತಾನೆ. ಆದರೆ ಯಾವುದೇ ಕಾರಣಕ್ಕೂ ಹೈದರ್ ತಾನೊಬ್ಬ ಸರ್ವಾಧಿಕಾರಿ ಎನ್ನುವುದನ್ನು ತೋರಿಸಿಕೊಳ್ಳುವುದಿಲ್ಲ. ಎಷ್ಟೇ ರಾಜ್ಯಗಳನ್ನು ಹೈದರ್ ಗೆದ್ದರೂ ಅದನ್ನು ಹೆಸರಿಗೆ ಮಾತ್ರ ಇರುವ ರಾಜನ ಮುಂದೆ ಒಪ್ಪಿಸುತ್ತಾನೆ. ಒಬ್ಬ ರಾಜ ಸತ್ತರೆ ಇನ್ನೊಬ್ಬ ರಾಜನಿಗೆ ಪಟ್ಟ ಕಟ್ಟಿ ಸಿಂಹಾಸನದಲ್ಲಿ ಕೂರಿಸುತ್ತಾನೆ. ಆದರೆ ಇದೇ ವಿಚಾರದಲ್ಲಿ ಟಿಪ್ಪುವಿನ ದೃಷ್ಟಿಕೋನ, ಆತ ಬೆಳೆದು ಬಂದ ಹಾದಿ ಎಲ್ಲವೂ ಸಂಪೂರ್ಣ ತದ್ವಿರುದ್ಧವಾಗಿತ್ತು. ಒಬ್ಬ ಸರ್ವಾಧಿಕಾರಿಯ ಮಗನಾಗಿ ಬೆಳೆಯುವ ಟಿಪ್ಪು ತುಂಬಾ ಓದುತ್ತಾನೆ. 13ನೇ ವರ್ಷಕ್ಕೆ ತಂದೆಯ ಜೊತೆ ರಣರಂಗಕ್ಕೆ ಇಳಿಯುವ ಟಿಪ್ಪು, 16ನೇ ವಯಸ್ಸಿನಲ್ಲಿ ಹೈದರ್‌ನ ಪ್ರತಿನಿಧಿಯಾಗಿ ಹೈದರಾಬಾದ್ ನಿಝಾಮನ ಬಳಿ ಹೋಗಿ ಸಂಧಾನ ಮಾಡುತ್ತಾನೆ. 2,000ದಷ್ಟಿದ್ದ ಬ್ರಿಟಿಷ್ ಸೈನಿಕರ ಪಡೆಯನ್ನು 200ರಷ್ಟಿದ್ದ ಟಿಪ್ಪುವಿನ ಸೈನಿಕರ ಪಡೆ ಸೋಲಿಸುತ್ತದೆ. ನಂತರ ಆ ಸೈನಿಕ ತುಕಡಿಯನ್ನು ಬಂಧಿಸಿ ಬ್ರಿಟಿಷರ ಮೇಜರ್‌ನನ್ನು ಜೈಲಲ್ಲಿ ಇಡುತ್ತಾನೆ.

ಗೆದ್ದವನೇ ರಾಜ ಎನ್ನುವ ಮನಸ್ಥಿತಿಯ ಟಿಪ್ಪುವಿಗೆ ಆತ್ಮಾಭಿಮಾನದ ಕಿಚ್ಚು ಹೆಚ್ಚಿರುತ್ತದೆ. ರಾಜನಾದವನು ಅಂತಪುರದಲ್ಲಿ ಬಿದ್ದಿರುತ್ತಾನೆ. ರಕ್ತ ಸುರಿಸಿ ಯುದ್ಧ ಮಾಡುವ ನಾನು ಅವನನ್ನೇಕೆ ತಲೆ ಮೇಲೆ ಹೊರಬೇಕು ಎನ್ನುವ ಭಾವನೆ ಟಿಪ್ಪುವಿನದ್ದು. ಆದರೆ ರಾಜನನ್ನು ಕೊಲ್ಲುವುದಿಲ್ಲ. ನವರಾತ್ರಿಗೆ ಸಂಬಂಧಿಸಿ ಧಾರ್ಮಿಕ ಆಚರಣೆಗಳನ್ನು ಅರಮನೆಯಲ್ಲಿ ಮಾಡಲು ಯಾವುದೇ ಸಮಸ್ಯೆಗಳನ್ನು ಮಾಡುವುದಿಲ್ಲ. ಆದರೆ ರಾಜ್ಯಾಡಳಿತದಲ್ಲಿ ಬಾಯಿ ಹಾಕಬಾರದು ಎಂದು ಹೇಳುತ್ತಾನೆ. ವಿಶೇಷವೇನೆಂದರೆ ಹೈದರ್ ಇದ್ದಾಗಲೂ ರಾಜ್ಯಾಡಳಿತದಲ್ಲಿ ರಾಜರು ಮೂಗು ತೂರಿಸುತ್ತಿರಲಿಲ್ಲ. ಆದರೆ ಅದನ್ನು ಹೈದರ್ ಯಾವತ್ತೂ ನೇರವಾಗಿ ಹೇಳಿದವನಲ್ಲ. ಆದರೆ ಟಿಪ್ಪು ನೇರವಾಗಿ ರಾಜತ್ವವನ್ನೇ ನಾನು ಒಪ್ಪುವುದಿಲ್ಲ ಎನ್ನುತ್ತಾನೆ.

ಇದಕ್ಕೆ ಉದಾಹರಣೆ ಒಂದಿದೆ. 1796ರಲ್ಲಿ ಖಾಸಾ ಚಾಮರಾಜ ಒಡೆಯರ್ ನಿಧನರಾಗುತ್ತಾರೆ. ಆಗ ಮುಮ್ಮಡಿ ಕೃಷ್ಣರಾಜ ಒಡೆಯರು 2 ವರ್ಷದ ಮಗುವಾಗಿದ್ದರು. ಹೈದರ್ ಆಗಿದ್ದರೆ ಪಟ್ಟ ಕಟ್ಟುತ್ತಿದ್ದ. ಆದರೆ ಟಿಪ್ಪು ಪಟ್ಟ ಕಟ್ಟುವುದಿಲ್ಲ. ಪಟ್ಟ ಕಟ್ಟಿದರೆ ರಾಜತ್ವವನ್ನು ಒಪ್ಪಿರಾಜನ ಗುಲಾಮನಾದಂತೆ ಎಂದು ಹೇಳುತ್ತಾನೆ. ಹೀಗೆ 1796ರಿಂದ 1799ರವರೆಗೆ ಟಿಪ್ಪು ನಿಧನದವರೆಗೂ ಯದುವಂಶದ ರಾಜ ಅಧಿಕಾರದಲ್ಲಿ ಇರಲಿಲ್ಲ.

## ಬ್ರಿಟಿಷರ ಅಪಹರಣಕಾರ ಎನ್ನುವ ಒಡೆದು ಆಳುವ ತಂತ್ರ

ಟಿಪ್ಪುವನ್ನು ನೇರವಾಗಿ ಎದುರಿಸಲಾಗದ ಬ್ರಿಟಿಷರು ಕುತಂತ್ರದ ಮೊರೆ ಹೋಗುತ್ತಾರೆ. ಟಿಪ್ಪುವಿಗೆ "ಇಶಿರ್ಪರ್' (ಅಪಹರಣಕಾರ) ಎನ್ನುವ ಹೆಸರನ್ನು ಕಟ್ಟುತ್ತಾರೆ. ರಾಜ್ಯಗಳನ್ನು ಅಪಹರಿಸಿಕೊಂಡು, ರಾಜತ್ವವನ್ನು ಮೂಲೆಗುಂಪು ಮಾಡಿದ ಅಪಹರಣಕಾರ ಎಂದು ದಕ್ಷಿಣ ಭಾರತದ ರಾಜರಿಗೆ ಹೇಳುತ್ತಾರೆ. ವಂಶ ಪಾರಂಪರ್ಯ ರಾಜರಾದ ಯದುವಂಶದವರಿಗೆ ರಾಜ್ಯ ವಾಪಸ್ ನೀಡಬೇಕು ಎಂದು ಹೇಳುತ್ತಾರೆ.

ಈ ಯದುವಂಶದ ರಾಜರ ಕಥೆಯೇನು ಗೊತ್ತಾ?, ಇವರೂ ಕೂಡ ಇನ್ನೊಬ್ಬನನ್ನು ಕೊಂದೇ ರಾಜ್ಯ ವಿಸ್ತರಣೆ ಮಾಡಿದ್ದು, ಪಾಳೆಗಾರ ಮಾರನಾಯಕನನ್ನು ಕೊಂದೇ ಯದುವಂಶ ಪ್ರಾರಂಭವಾಗೋದು. ರಾಜ ಒಡೆಯರ್ ಶ್ರೀರಂಗಪಟ್ಟಣದ ಮಂಡಲಾಧೀಶನನ್ನು ಕೊಂದು ಶ್ರೀರಂಗಪಟ್ಟಣದ ಮಂಡಲವನ್ನು ವಶಪಡಿಸಿಕೊಳ್ಳುತ್ತಾರೆ. ಹಾಗಾದರೆ ಇದು ರಾಜ್ಯಗಳ ಅಪಹರಣ ಅಲ್ಲವೇ?. ರಣಧೀರ ಕಂಠೀರವ, ದೊಡ್ಡ ದೇವರಾಜ ಒಡೆಯರ್, ಚಿಕ್ಕ ದೇವರಾಜ ಒಡೆಯರು ಎಷ್ಟೊಂದು ಯುದ್ಧಗಳನ್ನು ಮಾಡಿದ್ದಾರೆ. 1 ಲಕ್ಷ ಚದರ ಮೈಲಿ ರಾಜ್ಯ ವಿಸ್ತರಣೆಯಾಗುತ್ತದೆ. ಹಾಗಾದರೆ ಇವರ ವಿರುದ್ಧ ಸೋತ ರಾಜರ ಕಥೆ ಏನಾಯಿತು. ಆ ರಾಜ್ಯಗಳನ್ನು ಇವರು ಅಪಹರಿಸಲಿಲ್ಲವೇ?, ಟಿಪ್ಪು ಒಬ್ಬ ಮುಸ್ಲಿಂ ಎನ್ನುವ ಕಾರಣದ ಜೊತೆಗೆ ಬ್ರಿಟಿಷರು ಅಪಹರಣಕಾರ ಎನ್ನುವ ಶಬ್ದವನ್ನೂ ದಕ್ಷಿಣದ ರಾಜರ ತಲೆಯಲ್ಲಿ ತುಂಬುತ್ತಾರೆ.

ಇದೇ ಸಂದರ್ಭದಲ್ಲಿ ದತ್ತುಮಕ್ಕಳಿಗೆ ಹಕ್ಕಿಲ್ಲ ಎನ್ನುವ ಕಾನೂನನ್ನೂ ತರುತ್ತಾರೆ. ಹೊರಗಿನಿಂದ ಬಂದು ಇಲ್ಲಿನ ರಾಜರ ಅಧಿಕಾರ

ಕಿತ್ತುಕೊಳ್ಳಲು ಇವರು ಯಾರು?, ಮಕ್ಕಳಿಲ್ಲದ ರಾಜ ದತ್ತು ಪಡೆದರೆ ಅಧಿಕಾರವಿಲ್ಲ ಎಂದು ಹೇಳಲು, ಕಾನೂನು ತರಲು ಇವರು ಯಾರು? ಎನ್ನುವುದು ಸಹಜವಾಗಿ ಏಳುವ ಪ್ರಶ್ನೆ. ಆದರೆ ಹಿಂದೂ ರಾಜರಲ್ಲಿ ಒಮ್ಮತ ಇರಲಿಲ್ಲ. ಕೇಳುವ ತಾಕತ್ತಿರಲಿಲ್ಲ. "ದತ್ತು ಮಕ್ಕಳಿಗೆ ಹಕ್ಕಿಲ್ಲ ಎನ್ನುವುದು ಬ್ರಿಟಿಷರ ಕಾನೂನು, ಇದನ್ನು ನೀವು ಒಪ್ಪಿಕೊಳ್ಳಬೇಕು" ಎಂದಾಗ "ಆಯ್ತು ಮಹಾಸ್ವಾಮಿ" ಎಂದು ಒಪ್ಪಿಕೊಳ್ಳುತ್ತಾರೆ. ಬ್ರಿಟಿಷರಿಗೆ ರಾಜ್ಯ ವಹಿಸುತ್ತಾರೆ. ಆದರೆ ಇಂತಹವರ ನಡುವೆ ಎದೆ ಕೊಟ್ಟು ಬ್ರಿಟಿಷರಿಗೆ ಸವಾಲೆಸೆದು ನಿಂತವನು ಟಿಪ್ಪು ಸುಲ್ತಾನ್ ಒಬ್ಬನೇ. ಬ್ರಿಟಿಷರನ್ನು ಭಾರತದಿಂದ ಹೊರಹಾಕಬೇಕು ಎಂದು ದಕ್ಷಿಣ ಭಾರತದಲ್ಲಿ ನಿಷ್ಠೆಯಿಂದ ಹೋರಾಟ ಮಾಡಿದವನು ಟಿಪ್ಪು ಒಬ್ಬನೇ.

ಬ್ರಿಟಿಷ್ ಇತಿಹಾಸಕಾರರು, ಬ್ರಿಟಿಷ್ ಸೇನೆಗಳ ಜೊತೆಗೆ ಬಂದವರು ಟಿಪ್ಪುವಿನ ವಿರುದ್ಧ ಅಪಪ್ರಚಾರ ಮಾಡಿದರು. ಯಾಕೆಂದರೆ ಅವನು ಬ್ರಿಟಿಷರ ಶತ್ರು. ಹಿಂದೂ ಇತಿಹಾಸಕಾರರು ಟಿಪ್ಪು ಮುಸ್ಲಿಂ ಎನ್ನುವ ಏಕ ಮಾತ್ರ ಕಾರಣಕ್ಕಾಗಿ ಅವನು ಹಿಂದೂ ದ್ವೇಷಿ ಎಂದು ಹೇಳುತ್ತಾರೆ. ಹಿಂದೂ ಇತಿಹಾಸಕಾರರಲ್ಲಿ ಬಹುತೇಕರು ಬ್ರಾಹ್ಮಣರು, ಮುಸ್ಲಿಮರನ್ನು ದ್ವೇಷಿಸಬೇಕು ಎನ್ನುವವರು. ಅವರು ಬರೆದದ್ದೆಲ್ಲವೂ ಟಿಪ್ಪು ವಿರುದ್ಧವೇ.

## ಮೈಸೂರು ರಾಜರ ಜೊತೆಗಿದ್ದ ಬ್ರಿಟಿಷರು ನಂತರ ಮಾಡಿದ್ದೇನು?

1799ರಲ್ಲಿ ಟಿಪ್ಪು ಮರಣಾನಂತರ ಮುಮ್ಮಡಿ ಕೃಷ್ಣರಾಜ ಒಡೆಯರ್‌ಗೆ ಬ್ರಿಟಿಷರು ಪಟ್ಟ ಕಟ್ಟುತ್ತಾರೆ. ಹಳೆ ಮೈಸೂರಿನ 8 ಜಿಲ್ಲೆಗಳನ್ನೂ ನೀಡುತ್ತಾರೆ. ಆದರೆ ಕೆಲವರ್ಷಗಳಲ್ಲೇ ಅವರ ಬಣ್ಣ ಬಯಲಾಗುತ್ತದೆ. 1831ರಲ್ಲಿ ರಾಜ್ಯ ಆಳಲು ಬರುವುದಿಲ್ಲ, ನಾಲಾಯಕ್ ನೀನು ಎಂದು ಮುಮ್ಮಡಿ ಕೃಷ್ಣರಾಜ ಒಡೆಯರ್‌ರಿಂದ ರಾಜ್ಯವನ್ನು ಕಿತ್ತುಕೊಳ್ಳುತ್ತಾರೆ. ಆನಂತರ ಸುಮಾರು 50 ವರ್ಷಗಳ ಕಾಲ ಮೈಸೂರು ರಾಜ್ಯವನ್ನು ಬ್ರಿಟಿಷರೇ ಆಳುತ್ತಾರೆ.

## ಶ್ರೀರಂಗಪಟ್ಟಣದ ಮಸೀದಿ ಮತ್ತು ರಾಜತಾಂತ್ರಿಕ ಕಾರಣ

ಟಿಪ್ಪು ಒಂದು ದೇವಸ್ಥಾನವನ್ನು ಮಾರ್ಪಡಿಸಿದ್ದ. ಶ್ರೀರಂಗಪಟ್ಟಣದಲ್ಲಿ ಇರುವ ಮಸೀದಿ ಮೊದಲಿಗೆ ಆಂಜನೇಯ ದೇವಸ್ಥಾನ ಆಗಿತ್ತು. ಅದನ್ನು ಮಸೀದಿಯಾಗಿ ಪರಿವರ್ತಿಸಿದ ಟಿಪ್ಪು, ದೇವಸ್ಥಾನದಲ್ಲಿದ್ದ ಆಂಜನೇಯ ಪ್ರತಿಮೆಯನ್ನು ತೆಗೆದು ಬೇರೆ ಕಡೆ ಪ್ರತಿಷ್ಠಾಪನೆ ಮಾಡಿ ಮತ್ತೊಂದು ದೇವಸ್ಥಾನ ನಿರ್ಮಿಸುತ್ತಾನೆ. ಮಸೀದಿಯಲ್ಲಿರುವ ಹಳೆಯ ಕಂಬಗಳೆಲ್ಲಾ ಹಾಗೆಯೇ ಇದೆ. ಅದನ್ನು ತೋರಿಸಿ ಈಗ ಟಿಪ್ಪು ದ್ವೇಷಿಗಳು ದೇವಸ್ಥಾನ ಒಡೆದು ಹಾಕಿ ಮಸೀದಿ ಕಟ್ಟಿದ ಎಂದು ಸುಳ್ಳು ಹೇಳುತ್ತಾರೆ. ಆದರೆ ಇದರ ಹಿಂದಿನ ವಾಸ್ತವಾಂಶ ಬೇರೆಯೇ ಇದೆ.

ಅಂದಿನ ಕಾಲದಲ್ಲಿ ಒಬ್ಬ ರಾಜನಿಗೆ ರಾಜ್ಯದ ಸುವ್ಯವಸ್ಥೆ ಕಾಪಾಡಲು, ಚಲನವಲನಗಳನ್ನು ಗಮನಿಸಲು ಕಾವಲು ಗೋಪುರಗಳು ಅಗತ್ಯವಾಗಿತ್ತು. ಇಂದಿನ ಕಾಲದಲ್ಲಿ ಇದಕ್ಕಾಗಿ ಉಪಗ್ರಹಗಳನ್ನು ಬಳಸಲಾಗುತ್ತದೆ. ಉಪಗ್ರಹಗಳ ಮೂಲಕ ವೈರಿ ಸೇನೆ ಎಲ್ಲಿದೆ ಎನ್ನುವುದನ್ನು ನೋಡಲಾಗುತ್ತದೆ. ರಾಜರ ಕಾಲದಲ್ಲಿ ಕಾವಲು ಗೋಪುರಗಳನ್ನು ನಿರ್ಮಿಸಿದರೂ ಅದು ಕಾವಲುಗೋಪುರಗಳು ಎಂದು ಗೊತ್ತಾಗುವಂತಿರಲಿಲ್ಲ. ಗೊತ್ತಾದರೆ ಜನರು ಅವುಗಳನ್ನು ಒಡೆದು ಹಾಕುವ ಸಾಧ್ಯತೆ ಇತ್ತು. ಆಂಜನೇಯ ದೇವಸ್ಥಾನವನ್ನು ಮಸೀದಿಯಾಗಿ ಪರಿವರ್ತಿಸುವ ಟಿಪ್ಪು ಮಸೀದಿಗೆ 2 ಗೋಪುರಗಳನ್ನು (ಮಿನಾರ) ನಿರ್ಮಿಸುತ್ತಾನೆ. ಒಂದು ಗೋಪುರಕ್ಕೆ 200 ಮೆಟ್ಟಿಲುಗಳಿವೆ ಒಳಗೆ, ಸುಮಾರು 100 ಅಡಿ ಎತ್ತರದ ಈ ಗೋಪುರ ಹತ್ತಿ ನೋಡಿದರೆ ಸುಮಾರು 50 ಮೈಲಿ ದೂರದವರೆಗೆ ನೋಡಬಹುದು. ಅಲ್ಲಿಂದಲೇ ಮಳವಳ್ಳಿ, ಕನ್ನಂಬಾಡಿ ಕಟ್ಟೆ ಕಾಣುತ್ತೆ. ಕಾವಲು ಗೋಪುರಗಳು ಎಂದು ಗೊತ್ತಾಗಬಾರದು, ಆದರೆ ಕಾವಲು ಗೋಪುರಗಳು ಇರಬೇಕು ಎನ್ನುವ ತಂತ್ರದಿಂದ ದೇವಸ್ಥಾನವನ್ನು ಮಸೀದಿಯಾಗಿ ಪರಿವರ್ತಿಸಿ, ಗೋಪುರಗಳನ್ನು ನಿರ್ಮಿಸಲಾಗುತ್ತದೆ.

ಆ ಕಾಲದಲ್ಲಿ ಮಸೀದಿ ನಿರ್ಮಾಣವಾದಾಗ ಯಾರೂ ವಿರೋಧಿಸಿರಲಿಲ್ಲ. ಏಕೆಂದರೆ ಅವನು ದೇವಸ್ಥಾನವನ್ನು ನಿರ್ಮಾಣ ಮಾಡಿದ್ದ ಮತ್ತು ಪೂಜೆಯೂ ಆರಂಭವಾಗಿತ್ತು. ಶ್ರೀರಂಗಪಟ್ಟಣದಲ್ಲಿ ಆ ಒಂದು ದೇವಸ್ಥಾನವನ್ನು ಮಾರ್ಪಡಿಸಿದ್ದನೇ ಹೊರತು ಒಡೆದಿರಲಿಲ್ಲ. ಬೇರೆ ಯಾವುದೇ ದೇವಸ್ಥಾನವನ್ನು ಟಿಪ್ಪು ಒಡೆದಿಲ್ಲ, ಒಡೆಸಿಲ್ಲ.

## ಮಲಬಾರಿನಲ್ಲಿ ಕ್ರಾಂತಿಕಾರಿ ಸಾಮಾಜಿಕ ಸುಧಾರಣೆಗಳು

ಮಲಬಾರಿನಲ್ಲಿ ಹಲವು ದೇವಸ್ಥಾನಗಳಿಗೆ ಉಂಬಳಿ ಕೊಟ್ಟ ಟಿಪ್ಪು ಅಲ್ಲಿ ಮಾಡಿದ್ದ ಸಾಮಾಜಿಕ ಸುಧಾರಣೆಗಳು, ಕ್ರಾಂತಿಕಾರಿ ಕೆಲಸಗಳನ್ನು ಎಷ್ಟು ಹೇಳಿದರೂ ಸಾಲದು. ಟಿಪ್ಪು ಮಲಬಾರಿಗೆ ಹೋದಾಗ ನಂಬೂದಿರಿಗಳು (ಬ್ರಾಹ್ಮಣರು) ಬಿಟ್ಟರೆ ಪ್ರತಿಯೊಬ್ಬ ವ್ಯಕ್ತಿಯೂ ಸೊಂಟದಿಂದ ಮಂಡಿಯವರೆಗೆ ಮಾತ್ರ ತುಂಡು ಬಟ್ಟೆಯನ್ನು ಧರಿಸಲು ಅವಕಾಶವಿತ್ತು. ಎಲ್ಲಾ ಹೆಣ್ಣುಮಕ್ಕಳು ಅರೆ ನಗ್ನರಾಗಿರಬೇಕಾಗಿತ್ತು. ನೂರಾರು ವರ್ಷಗಳಿಂದ ದೇವರೇ ಹುಟ್ಟುಹಾಕಿದ ಸಂಪ್ರದಾಯ ಎಂದು ನಂಬೂದಿರಿಗಳು ಹೇಳುತ್ತಿದ್ದರು. ಆದರೆ ನೀವು ಮಾತ್ರವಲ್ಲ, ಬೇರೆಯವರೂ ಮನುಷ್ಯರು ಎಂದು ಹೇಳಿ ಟಿಪ್ಪು ಆ ಸಂಪ್ರದಾಯಕ್ಕೆ ಕೊನೆ ಹಾಡುತ್ತಾನೆ.

ಕೊರಳಿನಿಂದ ಕಾಲಿನವರೆಗೆ ಪ್ರತಿಯೊಬ್ಬರೂ ಬಟ್ಟೆ ಧರಿಸಬೇಕು ಎಂದು ಹೇಳುವ ಟಿಪ್ಪು ಹೆಣ್ಣು ಮಕ್ಕಳಿಗೆ ಸೀರೆ, ರವಿಕೆ ಧರಿಸುವ ಹಕ್ಕು ನೀಡುತ್ತಾನೆ. ನಂಬೂದಿರಿಗಳು ಕೂಡಲೇ ಟಿಪ್ಪು ಒಬ್ಬ ಮುಸ್ಲಿಂ, ನಮ್ಮ ಧರ್ಮಕ್ಕೆ ಅಪಚಾರ ಮಾಡುತ್ತಿದ್ದಾನೆ ಎನ್ನುತ್ತಾರೆ. ಆದರೆ ಟಿಪ್ಪು,

"ನಿಮ್ಮ ಧರ್ಮದ ವಿಚಾರದಲ್ಲಿ ನಾನು ಮಧ್ಯಪ್ರವೇಶಿಸುವುದಿಲ್ಲ. ನಿಮ್ಮ ಧರ್ಮಪಾಲನೆಯನ್ನು ಮನೆಯೊಳಗೆ ಮಾಡಿ, ಹೊಸಲು ದಾಟಿ ನನ್ನ ಸರಕಾರದ ಕಾನೂನು ಪಾಲನೆ ಮಾಡಬೇಕು" ಎಂದು ಹೇಳುತ್ತಾನೆ. ನೂರಾರು ವರ್ಷಗಳ ಸಂಪ್ರದಾಯ ಎನ್ನುವವರು ಅವರ ಮನೆಯವರನ್ನು ಹಾಗೆ ಹೊರಗೆ ಕಳುಹಿಸುತ್ತಾರೆಯೇ?.

**ಮೊಲಕ್ಕರಂ:** ಟಿಪ್ಪುವಿನ ಸಾಮಾಜಿಕ ಸುಧಾರಣೆಗಳಲ್ಲಿ ಮತ್ತೊಂದು ಪ್ರಮುಖ ಸುಧಾರಣೆ ಮೊಲಕ್ಕರಂ ತೆರಿಗೆ ಪದ್ಧತಿಗೆ ಅಂತ್ಯ ಹಾಡಿದ್ದು, ಮಲಬಾರಿನಲ್ಲಿ ಹೆಣ್ಣುಮಗಳು ಋತುಮತಿಯಾದರೆ ತೆರಿಗೆ ಕಟ್ಟಬೇಕು ಎಂಬ ನಿಯಮವಿರುತ್ತದೆ. ಮೊಲಕ್ಕರಂ ಎಂದರೆ ಸ್ತನಕ್ಕೆ ತೆರಿಗೆ ಎಂದರ್ಥ. ಬಿದಿರಿನ ಗಿಣ್ಣು ಕತ್ತರಿಸಿ ಟೊಳ್ಳು ಜಾಗದ ಮೂಲಕ ಸ್ತನದ ಗಾತ್ರವನ್ನು ಅಳೆಯಲಾಗುತ್ತಿತ್ತು ಮತ್ತು ಗಾತ್ರಕ್ಕನುಗುಣವಾಗಿ ತೆರಿಗೆಯನ್ನು ವಿಧಿಸುವಂತಹ ನೀಚ ಪದ್ಧತಿ ಚಾಲ್ತಿಯಲ್ಲಿತ್ತು. ಈ ಪದ್ಧತಿಗೆ ಕೊನೆ ಹಾಡಿದವನು ಟಿಪ್ಪುಸುಲ್ತಾನ್.

ಇಲ್ಲಿದ್ದ ಇನ್ನೊಂದು ಅಮಾನವೀಯ ಪದ್ಧತಿಯನ್ನೂ ಟಿಪ್ಪು ನಿಲ್ಲಿಸುತ್ತಾನೆ. ಬೇರೆ ಜಾತಿಯವರ ಮನೆಯಲ್ಲಿ ಮದುವೆ ಕಾರ್ಯಕ್ರಮಗಳು ನಡೆದರೆ ನಂಬೂದಿರಿ ಮುಖಂಡನನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಬೇಕು ಎನ್ನುವ ನಿಯಮವಿರುತ್ತದೆ. ಕಾರ್ಯಕ್ರಮದಲ್ಲಿ ಆತನಿಗೆ ಸನ್ಮಾನ ಮಾಡುವುದು ಮಾತ್ರವಲ್ಲದೆ, ಮದುವೆಯ ಮೊದಲ ರಾತ್ರಿ ನವ ವಧು ನಂಬೂದಿರಿ ಮುಖಂಡನ ಜೊತೆ ಕಳೆಯಬೇಕಾಗಿತ್ತು. ಇಂತಹ ನೀಚ ಆಚರಣೆಯನ್ನು ಟಿಪ್ಪು ನಿಲ್ಲಿಸಿದ.

## ಕಮ್ಯುನಿಸಂ ಫಿಲಾಸಫಿಯ ಕೃಷಿ ನೀತಿ

ಕೃಷಿಯ ವಿಚಾರಕ್ಕೆ ಬಂದರೆ ಟಿಪ್ಪುವಿನದ್ದು ಕಮ್ಯುನಿಸಂ ಫಿಲಾಸಫಿಯ ಕೃಷಿ ನೀತಿ, ಇಡೀ ಜಮೀನು ಸರಕಾರದ್ದು, ಖಾಸಗಿ ಆಸ್ತಿ ಇಲ್ಲವೇ ಇಲ್ಲ. ಉಳುಮೆ ಮಾಡಲು ಬಯಸಿದವನಿಗೆ ಸರಕಾರದ ವತಿಯಿಂದ ಉಚಿತವಾಗಿ ಭೂಮಿ ನೀಡಲಾಗುತ್ತಿತ್ತು. 3 ರೂ., 3.5 ರೂ., 4 ರೂ. ಸಾಲ ನೀಡಲಾಗುತ್ತಿತ್ತು. ಬೆಳೆ ಬೆಳೆದ ಬಳಿಕ ಸರಕಾರಕ್ಕೆ ನೀಡಬೇಕಾದದ್ದು ಹಣವನ್ನಲ್ಲ, ಬದಲಿಗೆ ನಿರ್ದಿಷ್ಟ ಪ್ರಮಾಣದ ಬೆಳೆಯನ್ನು ಬೆಳೆದವನಿಗೆ ನಿರ್ದಿಷ್ಟ ಪಾಲು, ಸರಕಾರಕ್ಕೆ ನಿರ್ದಿಷ್ಟ ಪಾಲು ಎನ್ನುವ ಸರಾಸರಿ ಲೆಕ್ಕಾಚಾರ ಇತ್ತು. ಬಂಜರು ಭೂಮಿಯಲ್ಲಿ ಬಿತ್ತರೆ ಸರಕಾರಕ್ಕೆ ನೀಡಬೇಕಾದ ಪಾಲಿನಲ್ಲಿ ಕಡಿತಗೊಳಿಸಲಾಗುತ್ತಿತ್ತು. ನೀನು ಉಳುವವರೆಗೆ ಜಮೀನು ನಿನ್ನದೇ, ಉಳುಮೆ ನಿಲ್ಲಿಸಿದ ತಕ್ಷಣದಿಂದ ಜಮೀನು ಸರಕಾರದ್ದು ಎನ್ನುವ ಸಮಾಜವಾದಿ ಸಿದ್ಧಾಂತದ ಕಮ್ಯುನಿಸಂ ತತ್ವ ಇದ್ದಂತಹ ಕಾನೂನದು.

## ಟಿಪ್ಪು ತಂತ್ರಜ್ಞಾನ ಮೆಚ್ಚಿದ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಮತ್ತು ನಾಸಾ

ಯುದ್ಧದ ಸಂದರ್ಭ ರಾಕೆಟ್ ಬಳಸಲಾಗುತ್ತಿತ್ತು ಎನ್ನುವ ವಿಚಾರಕ್ಕೆ ಬರುವುದಾದರೆ ರಾಕೆಟ್ ಬಳಕೆ ಹೈದರ್ ಕಾಲದಲ್ಲೇ ಪ್ರಾರಂಭವಾಗಿತ್ತು. ಈ ರಾಕೆಟ್‌ಗಳು 200ರಿಂದ 300 ಅಡಿ ಹಾರುತ್ತಿತ್ತು. ಯುದ್ಧದ ಸಂದರ್ಭ ಬಿದಿರಿಗೆ ಕಟ್ಟಿ ಈ ರಾಕೆಟ್‌ಗಳನ್ನು ಹಾರಿ ಬಿಡಲಾಗುತ್ತಿತ್ತು. ಹೈದರ್‌ನಿಂದ ಆರಂಭವಾದ ಈ ತಂತ್ರಜ್ಞಾನವನ್ನು ಟಿಪ್ಪು ನಂತರ ಅಭಿವೃದ್ಧಿಪಡಿಸುತ್ತಾನೆ. ಅದಕ್ಕಾಗಿ ಫ್ರೆಂಚರ ಸಹಾಯ ಪಡೆಯುತ್ತಾನೆ. ವಾಜಪೇಯಿಯವರು ಪ್ರಧಾನಿಯಾಗಿದ್ದಾಗ ಡಾ। ಎ.ಪಿ.ಜೆ. ಅಬ್ದುಲ್ ಕಲಾಂ ರಾಷ್ಟ್ರಪತಿಯಾದರು ಎನ್ನುವುದು ಎಲ್ಲರಿಗೂ ತಿಳಿದಿದೆ. ಅವರು ಭಾರತದ ಉನ್ನತ ರಾಕೆಟ್ ತಂತ್ರಜ್ಞಾನಿ. ಅಬ್ದುಲ್ ಕಲಾಂ ಅವರು ಅಮೆರಿಕದ ನಾಸಾಕ್ಕೆ ಹೋದಾಗ ನಾಸಾದ ಗೋಡೆಯ ಮೇಲೆ ಚಿತ್ರವೊಂದನ್ನು ನೋಡುತ್ತಾರೆ. ಮೊದಲ ಸಲ ನೋಡಿದಾಗ ಯುದ್ಧ ನಡೆಯುತ್ತಿರುವ, ಹಿಂಭಾಗದಲ್ಲಿ ರಾಕೆಟ್ ಹಾರುತ್ತಿರುವ ಸಾಮಾನ್ಯ ಚಿತ್ರ ಎಂದು ಭಾವಿಸುತ್ತಾರೆ. ಅನಂತರ ಅಲ್ಲಿಂದ ತೆರಳುತ್ತಾರೆ. ಮತ್ತೆ ಅವರು ಆ ಚಿತ್ರವನ್ನು ಗಮನಿಸಿದಾಗ ಚಿತ್ರದಲ್ಲಿರುವ ಜನರು ಸ್ವಲ್ಪ ಕಪ್ಪು ಬಣ್ಣದವರು ಎನ್ನುವುದನ್ನು ಕಂಡುಕೊಳ್ಳುತ್ತಾರೆ. ಈ ಬಗ್ಗೆ ಕುತೂಹಲ ಮೂಡಿ ಕೂಲಂಕಷವಾಗಿ ಅಧ್ಯಯನ ನಡೆಸಿದಾಗ ಟಿಪ್ಪು ರಣರಂಗದಲ್ಲಿ ಯುದ್ಧ ಮಾಡುತ್ತಿದ್ದಂತಹ ಚಿತ್ರ ಅದು ಎನ್ನುವುದು ಅರಿವಾಗುತ್ತದೆ. ಟಿಪ್ಪು ರಾಕೆಟ್ ಹಾರಿಸುತ್ತಿರುವ ಚಿತ್ರ ಅದಾಗಿತ್ತು ಎನ್ನುವುದು ವಿಶೇಷ.

ಇದೇ ವಿಚಾರದ ಬಗ್ಗೆ ಅಬ್ದುಲ್ ಕಲಾಂ, "ಟಿಪ್ಪು ಹುಟ್ಟಿದ, ರಾಕೆಟ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ್ದ ರಾಜ್ಯದವರೇ ಅವನನ್ನು ಮರೆತಿದ್ದಾರೆ. ಆದರೆ ವಿದೇಶದ ಜನ ನಾಸಾದಲ್ಲಿ ಅವನ ಫೋಟೊ ಹಾಕಿದ್ದಾರೆ" ಎಂದು ಬರೆಯುತ್ತಾರೆ. "ಟಿಪ್ಪು ಶುರು ಮಾಡಿದ ರಾಕೆಟ್ ತಂತ್ರಜ್ಞಾನಕ್ಕೆ ಪಂಡಿತ್ ಜವಹರಲಾಲ್ ನೆಹರೂ ಪ್ರಧಾನಿಯಾಗಿದ್ದಾಗ ಚಾಲನೆ ಸಿಕ್ಕಿ ಅದು ಮುಂದುವರಿದಿತ್ತು" ಎಂದೂ ಬರೆಯುತ್ತಾರೆ.

ಆದರೆ ಸಂಘಪರಿವಾರದ ನಿಯಂತ್ರಣದಲ್ಲಿರುವ ಬಿಜೆಪಿ ಸರಕಾರಕ್ಕೆ ಟಿಪ್ಪು ಮುಸ್ಲಿಂ ಎನ್ನುವ ಕಾರಣಕ್ಕಾಗಿ ದೇಶದ್ರೋಹಿ, ನೆಹರೂ ಕಾಂಗ್ರೆಸ್ ಎನ್ನುವ ಕಾರಣಕ್ಕಾಗಿ ದೇಶದ್ರೋಹಿ. ಬಿಜೆಪಿ ಸರಕಾರವೇ ರಾಷ್ಟ್ರಪತಿ ಮಾಡಿದ ಅಬ್ದುಲ್ ಕಲಾಂ ಅವರು ಬರೆದದ್ದನ್ನೇ ಬಿಜೆಪಿಯವರು ಓದುವುದಿಲ್ಲ. ಓದಿದರೂ ಅರ್ಥ ಮಾಡಿಕೊಳ್ಳಲು ಹೋಗುವುದಿಲ್ಲ. ಅರ್ಥ ಮಾಡಿದರೂ ಬಹಿರಂಗವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಸಂಘಪರಿವಾರದ ಸರಕಾರ ಇರುವವರೆಗೆ ಟಿಪ್ಪು ಬಗ್ಗೆ ಇತಿಹಾಸದ ನೈಜತೆಯನ್ನು ಹೊರತರಲು ಬಿಡುವುದಿಲ್ಲ. ಕೊನೆಯದಾಗಿ ಟಿಪ್ಪು ಒಂದು ವೇಳೆ ಹಿಂದೂವಾಗಿ ಹುಟ್ಟಿದ್ದರೆ, ಸಾವರ್ಕರ್‌ಗೆ ಭಾರತ ರತ್ನ ಕೊಡಬೇಕು ಎಂದಿದ್ದ ಸಂಘಪರಿವಾರದ ಜನ ಟಿಪ್ಪುವಿಗೂ ಭಾರತ ರತ್ನ ಕೊಡಿ ಎಂದು ಹೇಳುತ್ತಿದ್ದರು. ಆದರೆ ಟಿಪ್ಪು ಮುಸ್ಲಿಮನಾಗಿ ಹುಟ್ಟಿ ತಪ್ಪು ಮಾಡಿಬಿಟ್ಟ, ಅದೇ ದುರಂತ! ◆

**ನಿರೂಪಣೆ: ಇಬ್ರಾಹೀಂ ಬಾತಿಷ್ (ವಾರ್ತಾಭಾರತಿ 24–11–2020)**

ಓದಿದ್ದು

## ಜಯಕಿರಣ ಪತ್ರಿಕೆಯ 'ಚಾವಡಿ' ಅಂಕಣದಲ್ಲಿ

ಅನಿಲ್ ಪೂಜಾರಿ ಅಳಕೆ ಅವರು ಬರೆದಿರುವ **ಆರೆಸ್ಸೆಸ್ ಸ್ಥಾಪಕ ಗೋಲ್‌ವಲ್ಕರ್ ಹೇಳಿದ್ದು ಹೀಗೆ** ಎಂಬ ಲೇಖನ.

ಸ್ವಾತಂತ್ರ್ಯ ಪೂರ್ವದಲ್ಲಿಯೇ ಆರೆಸ್ಸೆಸ್ ಸ್ಥಾಪಕ ಗೋಲ್‌ವಲ್ಕರ್ ಹೇಳಿದ್ದು ಹೀಗೆ:

"ನಾನು ಇಂಗ್ಲಿಷರ ಗುಲಾಮಗಿರಿ ಮಾಡಲು ಜೀವನ ಪರ್ಯಂತ ಸಿದ್ದನಿದ್ದೇನೆ, ಆದರೆ ದಲಿತರಿಗೆ, ಹಿಂದುಳಿದವರಿಗೆ, ಮುಸ್ಲಿಮರಿಗೆ ಸರಿಸಮಾನ ಅಧಿಕಾರ ಕೊಡುವುದಾದರೆ ನನಗೆ ಅಂತಹ ಸ್ವಾತಂತ್ರ್ಯವೇ ಬೇಡ!".

ಕೊನೆಗೆ ಸ್ವಾತಂತ್ರ್ಯ ಸಿಗುತ್ತದೆ ಎಂದು ಖಚಿತವಾದ ಮೇಲೆ ಗೋಲ್‌ವಲ್ಕರ್ ಹೇಳಿದ್ದು – ಸ್ವಾತಂತ್ರ್ಯ ಸಿಕ್ಕ ಮೇಲೆ ನಾವು ಸವರ್ಣಿಯರು ಮಾಡಬೇಕಾದ ಮೊಟ್ಟ ಮೊದಲ ಕೆಲಸವೆಂದರೆ: ದೇಶದ ಅಧಿಕಾರವೆಲ್ಲಾ ಸವರ್ಣಿಯರ ಕೈಯಲ್ಲಿಯೇ ಇರುವಂತೆ ನೋಡಿಕೊಳ್ಳಬೇಕು.

ರಾಜಕೀಯದಲ್ಲಿ ಮಾತ್ರವಲ್ಲ ನ್ಯಾಯಾಂಗದಲ್ಲಿ, ಅಧಿಕಾರಶಾಹಿಯಲ್ಲಿ, ಪತ್ರಿಕಾರಂಗದಲ್ಲಿ, ಎಲ್ಲೆಡೆಯೂ ಸವರ್ಣಿಯರು ತೂರಿಕೊಳ್ಳಬೇಕು, ಹಾಗೂ ಕೆಳಜಾತಿಯವರು ಮೇಲೆ ಬರದಂತೆ ಅಡೆತಡೆ ನಿರ್ಮಿಸಬೇಕು. ಅದಕ್ಕಾಗಿ ಮೊಟ್ಟಮೊದಲು ಕೆಳಜಾತಿಯವರಿಗೆ ಉನ್ನತ ಶಿಕ್ಷಣ ಸಿಗದೇ ಇರುವಂತೆ ನಾವು ನೋಡಿಕೊಳ್ಳಬೇಕು.

ಮೆಕಾಲೆ ಮಾದರಿಯ ಸರಕಾರಿ ಶಾಲೆಗಳನ್ನು ಮುಚ್ಚಿಸಬೇಕು, ಸ್ಕಾಲರ್‌ಶಿಪ್‌ಗಳನ್ನು ನಿಲ್ಲಿಸಬೇಕು ಮತ್ತು ಕೆಳಜಾತಿಯವರ ಆರ್ಥಿಕ ಮೂಲಗಳನ್ನು ನಾಶ ಮಾಡಬೇಕು. ಕೆಳಜಾತಿಯವರ ಆರ್ಥಿಕ ಶಕ್ತಿಗಳನ್ನು ನಾಶ ಮಾಡಬೇಕಾದರೆ ಹಳ್ಳಿಯ ಆರ್ಥಿಕತೆಯ ಮೂಲ ಸೆಲೆಯಾದ ಕೃಷಿಯನ್ನು ಮತ್ತು ಗೃಹ ಕೈಗಾರಿಕೆಯನ್ನು ಮೊದಲು ನಾಶ ಮಾಡಬೇಕು, ಹಳ್ಳಿಯ ಜಮೀನುಗಳನ್ನೆಲ್ಲಾ ಸವರ್ಣೀಯ ಜಮೀನುದಾರರ ಕೈವಶವಾಗುವಂತೆ ನೋಡಿಕೊಳ್ಳಬೇಕು, ಕೆಳಜಾತಿಯವರು ಯಾವಾಗಲೂ ಸವರ್ಣೀಯರ ಮುಂದೆ ಕೈಕಟ್ಟಿ ನೆಲ ನೋಡುತ್ತಾ ಗುಲಾಮರಾಗಿ ನಿಲ್ಲುವಂಥ ಸಾಮಾಜಿಕ ಸ್ಥಿತಿ ನಿರ್ಮಿಸಬೇಕು.

ಮಿಲಿಟರಿ ಮತ್ತು ಪೋಲಿಸ್ ಇಲಾಖೆಯಲ್ಲಿ ಎಲ್ಲಾ ಮೇಲಾಧಿಕಾರಿಗಳು ಕೇವಲ ಸವರ್ಣಿಯರು ಮಾತ್ರ ಆಗುವಂತೆ ನೋಡಿಕೊಳ್ಳಬೇಕು, ಕೆಳಜಾತಿಯ ಪೋಲಿಸ್ ಮತ್ತು ಮಿಲಿಟರಿಯಲ್ಲಿ ಮೇಲಿನ ಹುದ್ದೆಗೆ ಏರದಂತೆ ಅಡೆತಡೆಗಳನ್ನು ನಿರ್ಮಿಸಬೇಕು. (ಸ್ವಾತಂತ್ರ್ಯ ಸಿಕ್ಕಿ 73 ವರ್ಷವಾದರೂ ಇಂದಿಗೂ ಮಿಲಿಟರಿಯಲ್ಲಿ ಒಬ್ಬನೇ ಒಬ್ಬ ಕೆಳಜಾತಿಯವನು ಮೇಜರ್ ಹುದ್ದೆಗಿಂತ ಮೇಲೆ ಏರಿಲ್ಲ.)

ಕೆಳಜಾತಿಯವರ ಮಕ್ಕಳು ದಷ್ಟಪುಷ್ಟವಾಗಿ ಬೆಳೆಯದಂತೆ ಮೊದಲು ನೋಡಿಕೊಳ್ಳಬೇಕು, ಅವರು ಯಾವಾಗಲೂ ಅಪೌಷ್ಟಿಕತೆಯಿಂದ ಬಳಲುತ್ತಿರುವಂತೆ ಮಾಡಬೇಕು. ಅವರು ಸಣ್ಣ ವಯಸ್ಸಿನಲ್ಲಿಯೇ ರೋಗ ರುಜಿನದಿಂದ ಸಾಯುವಂತಾಗಬೇಕು. ಗೋವು–ಎಮ್ಮೆ–ಕೋಣದ ಮಾಂಸ ಅತ್ಯಂತ ಪೌಷ್ಟಿಕ ಮತ್ತು ಅಗ್ಗ ಆಗಿರುವುದರಿಂದ ಕೆಳಜಾತಿಯವರು ಅದನ್ನು ತಿಂದು ದಷ್ಟಪುಷ್ಟರಾಗಿ ಬೆಳೆಯಬಹುದು. ಅದಕ್ಕಾಗಿ ಗೋ ಮಾಂಸದ ನಿಷೇಧದ ನೆಪದಲ್ಲಿ ಹಸು ಮಾಂಸ ಮಾತ್ರವಲ್ಲ ಎಮ್ಮೆ–ಕೋಣದ ಮಾಂಸ ಸಹಾ ಕೆಳಜಾತಿಯವರಿಗೆ ಸಿಗದಂತೆ ನಿಯಮ ರಚಿಸಬೇಕು ಎಂದು ಗೋಲ್‌ವಲ್ಕರ್ ತನ್ನ "ಬಂಚ್ ಆಫ್ ಥಾಟ್ಸ್" ಎಂಬ ನೀಚ ಕೃತಿಯಲ್ಲಿ ಹೇಳಿದ್ದಾರೆ.

ಈಗ ಯಡಿಯೂರಪ್ಪ ಸರಕಾರ ತಂದಿರುವ ಗೋಹತ್ಯಾ ನಿಷೇಧ ಕಾಯ್ದೆಯಲ್ಲಿ ಅನಗತ್ಯವಾಗಿ ಎಮ್ಮೆ–ಕೋಣ ಸಹಾ ಸೇರಿಸಿರುವುದರ ಹಿಂದೆ ಅದೇ ಗೋಲ್‌ವಲ್ಕರ್ ಕ್ರೂರ ವಿಚಾರಧಾರೆಯ ಪ್ರಭಾವ ಇರುವುದು ಖಚಿತ.

**ಜಯಕಿರಣ ಪತ್ರಿಕೆ (14–12–2020 ಸೋಮವಾರ.)**

# ಇನ್ಸಾನಿಯತ್ ಝಿಂದಾಬಾದ್
# ಮಾನವೀಯತೆ ಚಿರಕಾಲ ಬಾಳಲಿ

ಓದಿದ್ದು

# ರಾವಣನದ್ದೇ ಮೊದಲ ವಿಮಾನ

## ನಮ್ಮ ಬಳಿ ದಾಖಲೆ ಇದೆ ಎಂದ ಶ್ರೀಲಂಕಾ ಸರಕಾರ

■ 5ಸಾವಿರ ವರ್ಷಗಳಷ್ಟು ಹಿಂದೆಯೇ ರಾವಣ ವಿಮಾನದಲ್ಲಿ ಸಂಚರಿಸುತ್ತಿದ್ದ

■ ರಾವಣನ ಬಗ್ಗೆ ದಾಖಲೆ, ಪುಸ್ತಕ ಇದ್ದಲ್ಲಿ ನೀಡಿ ಎಂದು ಮನವಿ

**ಹೊಸದಿಲ್ಲಿ:** ರಾಮಾಯಣದಲ್ಲಿ ಬರುವ ರಾವಣ, ಭಾರತೀಯರಿಗೆ ರಾಕ್ಷಸನಿರಬಹುದು. ಸೀತೆಯನ್ನು ಕದ್ದೊಯ್ದ ಖಳನಾಯಕನಿರಬಹುದು. ಆದರೆ ಶ್ರೀಲಂಕನ್ನರಿಗೆ ಆತ ಮಹಾನ್ ರಾಜ, ವಿದ್ವಾಂಸ ಹಾಗೂ ವಿಶ್ವದ ಮೊದಲ ವಾಯುಯಾನಿ. ಮೊತ್ತ ಮೊದಲ ಬಾರಿಗೆ ವಿಮಾನದ ಮೂಲಕ ಹಾರಾಟ ನಡೆಸಿದ ರಾಜ ಎಂಬ ಬಲವಾದ ನಂಬಿಕೆ ಅವರದು.

5 ಸಾವಿರ ವರ್ಷಗಳಷ್ಟು ಹಿಂದೆಯೇ ಆತ ವಿಮಾನದ ಮೂಲಕ ಹಾರಾಟ ನಡೆಸಿದ್ದ ಎಂದು ಪ್ರತಿಪಾದಿಸುವ ಶ್ರೀಲಂಕಾದ ನಾಗರಿಕ ವಿಮಾನ ಯಾನ ಪ್ರಾಧಿಕಾರ, ಪ್ರಾಚೀನ ಕಾಲದಲ್ಲಿಯೇ ಆತ ವಿಮಾನ ಹಾರಿಸಲು ಬಳಸಿದ ತಂತ್ರಜ್ಞಾನ ಕುರಿತು ಸಂಶೋಧನೆ ಕೈಗೊಳ್ಳಲು ಮುಂದಾಗಿದೆ. ಈ ಹಿನ್ನೆಲೆಯಲ್ಲಿ ಶ್ರೀಲಂಕಾದ ಪ್ರವಾಸೋದ್ಯಮ ಮತ್ತು ವಾಯುಯಾನ ಸಚಿವಾಲಯ ಪತ್ರಿಕೆಗಳಿಗೆ ಜಾಹೀರಾತೊಂದನ್ನು ನೀಡಿದ್ದು, ರಾವಣನ ಬಗ್ಗೆ ಮಾಹಿತಿ ಇದ್ದರೆ, ರಾವಣನ ಕುರಿತಾದ ದಾಖಲೆಗಳು, ಪುಸ್ತಕಗಳಿದ್ದರೆ ಅದನ್ನು ನಮಗೆ ಕಳುಹಿಸಿಕೊಡಿ. ಪೌರಾಣಿಕ ಹಿನ್ನೆಲೆಯ ರಾಜನ ಕುರಿತಾಗಿ, ಕಳೆದುಹೋದ ಪರಂಪರೆಯ ಕುರಿತಾಗಿ ಅಧ್ಯಯನ ನಡೆಸಲು, ಸಂಶೋಧನೆ ಕೈಗೊಳ್ಳಲು ಇದು ನಮಗೆ ನೆರವಾಗಬಹುದು ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಶ್ರೀಲಂಕಾದ ನಾಗರಿಕ ವಿಮಾನಯಾನ ಪ್ರಾಧಿಕಾರದ ಮಾಜಿ ಉಪಾಧ್ಯಕ್ಷ ಶಶಿ ದನಾತುಂಗೆ, ರಾವಣ, ವಿಶ್ವದ ಮೊದಲ ವಾಯುಯಾನಿ ಎಂಬುದು ಪುರಾಣದ ಕತೆಯಲ್ಲ. ಸತ್ಯ ಸಂಗತಿ. ಇದಕ್ಕೆ ನಮ್ಮ ಬಳಿ ಸಾಕಷ್ಟು ದಾಖಲೆಗಳಿವೆ. ಈ ಬಗ್ಗೆ ಇನ್ನಷ್ಟು ಅಧ್ಯಯನ ನಡೆಸಲಾಗುತ್ತಿದೆ.

ಮುಂದಿನ 5 ವರ್ಷಗಳಲ್ಲಿ ಇದನ್ನು ಸಾಬೀತುಪಡಿಸುತ್ತೇವೆ ಎಂದು ತಿಳಿಸಿದ್ದಾರೆ. ಈ ಮಧ್ಯೆ, ಶ್ರೀಲಂಕಾ ಇತ್ತೀಚೆಗೆ ಮೊದಲ ಉಪಗ್ರಹವನ್ನು ಬಾಹ್ಯಾಕಾಶಕ್ಕೆ ಉಡಾವಣೆ ಮಾಡಿದ್ದು ಅದಕ್ಕೆ ರಾವಣನ ಹೆಸರಿಟ್ಟಿದೆ. **(ಉದಯವಾಣಿ 20–7–20)**

==========================================================

# ಸೂರ್ಯನ ಗಾತ್ರದ ನಕ್ಷತ್ರ ನುಂಗಿದ ಕಪ್ಪುರಂಧ್ರ!

## ಐರೋಪ್ಯ ಒಕ್ಕೂಟದ ವಿಜ್ಞಾನಿಗಳ ಸಂಶೋಧನೆ

**ಹೊಸದಿಲ್ಲಿ:** ಅತಿದೊಡ್ಡ ಗಾತ್ರದ ಕಪ್ಪು ರಂಧ್ರವೊಂದು ನಮ್ಮ ಸೂರ್ಯನಷ್ಟು ಗಾತ್ರದ ನಕ್ಷತ್ರವೊಂದನ್ನು ನುಂಗಿಹಾಕಿದ ಘಟನೆಯನ್ನು ಐರೋಪ್ಯ ಒಕ್ಕೂಟದ ಬಾಹ್ಯಾಕಾಶ ವಿಜ್ಞಾನಿಗಳು ಸೆರೆಹಿಡಿಯುವಲ್ಲಿ ಸಫಲರಾಗಿದ್ದಾರೆ. ಈ ವಿದ್ಯಮಾನವು ಕಪ್ಪು ರಂಧ್ರಗಳು ಹಾಗೂ ನಕ್ಷತ್ರಗಳ ಉಗಮದ ಬಗೆಗಿನ ನಮ್ಮ ಜ್ಞಾನದ ಮೇಲೆ ಅಭೂತಪೂರ್ವ ಪ್ರಭಾವ ಬೀರಲಿದೆ ಎಂದು ವೈಜ್ಞಾನಿಕ ವಲಯ ಹೇಳುತ್ತಿದೆ. ಈ ಅಪೂರ್ವ ಘಟನೆಯನ್ನು ಸೆರೆಹಿಡಿಯುವುದಕ್ಕಾಗಿ ಯುರೋಪಿಯನ್ ಸದರ್ನ್ ಆಬ್ಸರ್ವೇಟರಿಯ ದೂರದರ್ಶಕಗಳನ್ನು ಬಳಸಲಾಗಿತ್ತು. ಭೂಮಿಯಿಂದ 215 ದಶಲಕ್ಷ ಬೆಳಕಿನ ವರ್ಷ ದೂರದಲ್ಲಿ ನಡೆದ ಈ ಘಟನೆಯಲ್ಲಿ ಸೂರ್ಯನಷ್ಟು ದೊಡ್ಡ ನಕ್ಷತ್ರವೊಂದು ಕಪ್ಪುರಂಧ್ರದ ಅಗಾಧ ಗುರುತ್ವಾಕರ್ಷಣೆಗೆ ಸಿಲುಕಿ ನುಚ್ಚುನೂರಾಗಿ ಅದರ ಒಡಲು ಸೇರಿದೆ ಎನ್ನುತ್ತಾರೆ ರಾಯಲ್ ಆಸ್ಟ್ರಾನಾಮಿಕಲ್ ಸೊಸೈಟಿಯ ವಿಜ್ಞಾನಿ ಮ್ಯಾಟ್ ನಿಕೋಲ್, ಕಪ್ಪು ರಂಧ್ರದ ಗುರುತ್ವಾಕರ್ಷಣಬಲ ಹೇಗಿರುತ್ತದೆಂದರೆ, ಆ ಶಕ್ತಿ ನಕ್ಷತ್ರವನ್ನು ಅಕ್ಷರಶಃ ತುಂಡರಿಸಿ ಎಳೆ ಎಳೆಯಾಗಿ ತನ್ನೊಳಗೆ ಸೇರಿಸಿಕೊಳ್ಳುತ್ತದೆ. ಸೂರ್ಯನಷ್ಟು ದೊಡ್ಡದಾದ ನಕ್ಷತ್ರವನ್ನೇ ನುಂಗಿ ಹಾಕುತ್ತದೆಂದರೆ, ಆ ಕಪ್ಪು ರಂಧ್ರದ ಗಾತ್ರವೆಷ್ಟಿರಬಹುದು ಎನ್ನುವ ಪ್ರಶ್ನೆಗೆ ಮ್ಯಾಟ್ ನಿಕೋಲ್ ಹೇಳುವುದು ಹೀಗೆ – ನಕ್ಷತ್ರಕ್ಕಿಂತಲೂ ಲಕ್ಷಾಂತರ ಪಟ್ಟು ರಾಕ್ಷಸಾಕಾರ ಅದರದ್ದು! **(ಉದಯವಾಣಿ 14–10–2020)**

==========================================================

# ಈ ಪಟ್ಟಣಕ್ಕೆ 2 ತಿಂಗಳು ಸೂರ್ಯನದರ್ಶನವಿಲ್ಲ!

**ಉಟ್ಕಿಗ್ವಿಕ್:** ಅಲಾಸ್ಕಾದ ಪಟ್ಟಣ ಉಟ್ಕಿಗ್ವಿಕ್ ಪ್ರತಿವರ್ಷವೂ ಎರಡು ತಿಂಗಳುಗಳ ಕಾಲ ಕತ್ತಲಿಗೆ ಜಾರುತ್ತದೆ. ಈ ವಿದ್ಯಮಾನವನ್ನು ಪೋಲಾರ್ ನೈಟ್ ಎನ್ನಲಾಗುತ್ತದೆ. ಆರ್ಕಟಿಕ್ ಸರ್ಕಲ್‌ನಲ್ಲಿ ಬರುವ ಪ್ರದೇಶಗಳು ಸಾಮಾನ್ಯವಾಗಿ ಇಂಥ ವಿದ್ಯಮಾನವನ್ನು ಎದುರಿಸುತ್ತವೆ. ಸೂರ್ಯದರ್ಶನವಾಗುವುದಿಲ್ಲ ಎಂದ ಮಾತ್ರಕ್ಕೆ ಉಟ್ಕಿಗ್ವಿಕ್‌ನಲ್ಲಿ ಬೆಳಕೇ ಇರುವುದಿಲ್ಲ ಎಂದರ್ಥವಲ್ಲ. ಇನ್ನೆರಡು ತಿಂಗಳು ಮುಂಜಾನೆಯ ಹೊತ್ತಲ್ಲಿ ತೀರಾ ಮಂದ ಪ್ರಮಾಣದ ಬೆಳಕಂತೂ ಇರುತ್ತದೆ. ಒಂದು ರೀತಿಯಲ್ಲಿ ಬೆಳದಿಂಗಳ ಬೆಳಕಂತೆಯೇ ಗೋಚರಿಸುತ್ತದೆ ಎನ್ನುತ್ತಾರೆ ಸ್ಥಳೀಯರು. **(ಉದಯವಾಣಿ 21–11–2020)**

## ‘ಕೆ2–141ಬಿ’ ಹೆಸರಿನ ಬ್ರಹ್ಮಾಂಡದ ‘ನರಕ’ ಗ್ರಹ ಪತ್ತೆ

**ಕೆ2–141ಬಿ ಎನ್ನುವುದು ವಿಕಾಸ ಹಂತದ ಗ್ರಹ. ಲಕ್ಷಾಂತರ ವರ್ಷಗಳ ಹಿಂದೆ ಭೂಮಿಯೂ ಹೀಗೆಯೇ ಇತ್ತು. ಕ್ರಮೇಣ ತಣ್ಣಗಾಗಿದೆ.**

*** ನಿಕೊಲಸ್ ಕೊವೊನ್**, ವಿಜ್ಞಾನ ಲೇಖಕ

**ಲಂಡನ್:** ಒಮ್ಮೆ ಕಲ್ಪಿಸಿಕೊಳ್ಳಿ.... ಕೊತಕೊತ ಕುದಿಯುವ ವಾತಾವರಣ, ಬಂಡೆಗಳ ಮಳೆ, ಲಾವಾರಸದ ಅಲೆ ಹೊಮ್ಮಿಸುವ ಸಮುದ್ರ, ಕರಗಿ ನೀರಾಗುವ ತಾಪದಲ್ಲಿ ಬೀಸುವ ಸೂಪರ್‌ಸಾನಿಕ್ ವೇಗದ ಗಾಳಿ...

ಅಬ್ಬಬ್ಬಾ! ಬಹುಶಃ ಇದು ಬ್ರಹ್ಮಾಂಡದ ‘ನರಕ’. ಹೌದು, ಕಥೆ– ಕಲ್ಪನೆಗಳಲ್ಲಿ ವರ್ಣಿಸಲ್ಪಟ್ಟ ನರಕದಂಥ ಗ್ರಹ ಸೌರಮಂಡಲದಲ್ಲಿ ಪತ್ತೆಯಾಗಿದೆ. ‘ಕೆ2–141ಬಿ’ ಎಂಬ ಹೆಸರಿನ ಈ ಗ್ರಹ ಭೂಮಿಯಿಂದ 100 ಜ್ಯೋತಿರ್ವರ್ಷ ದೂರದಲ್ಲಿದೆ.

ಜೇಮ್ಸ್ ವೆಬ್ ಸ್ಪೇಸ್ ಟೆಲಿಸ್ಕೋಪ್ ಕಣ್ಣಿಗೆ ಬಿದ್ದಿರುವ ‘ಕೆ2–141ಬಿ’ ಗ್ರಹದಲ್ಲಿ ಎಲ್ಲವೂ ಭಯಾನಕ ವಿಚಿತ್ರ. ಭೂಗಾತ್ರದ ರಚನೆ ಹೊಂದಿರುವ ಈ ಗ್ರಹದಲ್ಲಿ 5,400 ಡಿಗ್ರಿ ಫ್ಯಾರನ್‌ಹೀಟ್ ಉಷ್ಣಾಂಶವಿದೆ ಎಂದು ಖಗೋಳ ತಜ್ಞರು ಊಹಿಸಿದ್ದಾರೆ. ಇಷ್ಟು ರೌದ್ರ ಉಷ್ಣಾಂಶಕ್ಕೆ ಇಲ್ಲಿನ ಬಂಡೆಗಳು ಕರಗುವುದಷ್ಟೇ ಅಲ್ಲ, ಆವಿಯಾಗುತ್ತವೆ. ಹಾಗೆ ಆವಿಯಾಗಿ, ಮಳೆ ರೂಪದಲ್ಲಿ ಅದೇ ಬಂಡೆಗಳು ಆಕಾಶದಿಂದ ಧೊಪಧೊಪನೆ ಬೀಳುತ್ತವೆ!

**ಶಿಲಾಪಾಕ ಸಮುದ್ರ:** ಇಲ್ಲೂ ಸಮುದ್ರವಿದೆ. ಆದರೆ ಅಲ್ಲಿ ನೀರಿಲ್ಲ. ಸಂಪೂರ್ಣ ಶಿಲಾಪಾಕ! ಸೋಡಿಯಂ, ಸಿಲಿಕಾನ್ ಮಾನೊಕ್ಸೈಡ್ ಮತ್ತು ಸಿಲಿಕಾನ್ ಡೈಆಕ್ಸಡ್ ಖನಿಜಗಳೂ ಇಲ್ಲಿ ಬಿಸಿಪಾಕವಾಗಿ ಹರಿಯುತ್ತಿರಬಹುದು. ಮಳೆ ರೂಪದ ಬೀಳುವ ಬಂಡೆಗಳು ಸಮುದ್ರದಲ್ಲಿ ಅಂದಾಜು 60 ಮೈಲು ಆಳಕ್ಕಿಳಿಯಬಹುದು ಎಂದು ಊಹಿಸಲಾಗಿದೆ. ಇಲ್ಲಿನ ಭೂಪದರದ ಮೇಲೆ ಗಂಟೆಗೆ 3,100 ಮೈಲು ವೇಗದಲ್ಲಿ ಸೂಪರ್‌ಸಾನಿಕ್ ಗಾಳಿ ಬೀಸುತ್ತದೆ.

ಮ್ಯಾಕ್‌ಗಿಲ್ ವಿವಿ, ಯಾರ್ಕ್ ವಿವಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಈ ಕುರಿತಾಗಿ ‘ಮಂಥ್ಲಿ ನೋಟಿಸಸ್ ಆಫ್ ದಿ ರಾಯಲ್ ಆಸ್ಟ್ರೋನಾಮಿಕಲ್ ಸೊಸೈಟಿ’ ಎಂಬ ಆನ್‌ಲೈನ್ ಮ್ಯಾಗಜಿನ್‌ನಲ್ಲಿ ಲೇಖನ ಪ್ರಕಟಿಸಿದೆ. **(ಉದಯವಾಣಿ 12–11–20)**

===========================================================

## ಅನ್ಯ ಗ್ರಹದ ರೇಡಿಯೋ ಸಿಗ್ನಲ್ ಪತ್ತೆ: ವಿಜ್ಞಾನಿಗಳ ಸಾಧನೆ

**ವಾಷಿಂಗ್ಟನ್:** ಇದೇ ಮೊದಲ ಬಾರಿಗೆ ನಮ್ಮ ಸೌರ ವ್ಯವಸ್ಥೆಯ ಹೊರಗಿರುವ ಗ್ರಹವೊಂದರ ಸಂಭಾವ್ಯ ರೇಡಿಯೋ ಸಿಗ್ನಲ್ ಅನ್ನು ಸಂಗ್ರಹಿಸುವಲ್ಲಿ ಅಂತಾರಾಷ್ಟ್ರೀಯ ವಿಜ್ಞಾನಿಗಳ ತಂಡವೊಂದು ಯಶಸ್ವಿಯಾಗಿದೆ. 51 ಜ್ಯೋತಿರ್ವರ್ಷಗಳಷ್ಟು ದೂರದಲ್ಲಿರುವ ಬಾಹ್ಯಗ್ರಹ ವ್ಯವಸ್ಥೆಯಿಂದ ಹೊರಸೂಸುತ್ತಿರುವ ರೇಡಿಯೋ ಸಂಕೇತಗಳಿವು ಎಂದು ವಿಜ್ಞಾನಿಗಳು ಹೇಳಿದ್ದಾರೆ. ಈ ಸಂಕೇತಗಳ ಪತ್ತೆಗೆ ನೆದರ್ಲೆಂಡ್‌ನಲ್ಲಿರುವ ರೇಡಿಯೋ ದೂರದರ್ಶಕ ಲೋಫಾರ್ (ಲೋ ಫ್ರೀಕ್ವೆನ್ಸಿ ಆರ್ರೆ) ಅನ್ನು ಬಳಸಿಕೊಳ್ಳಲಾಗಿದೆ.

ಟೌ ಬೂಟ್ಸ್ ತಾರಾ ವ್ಯವಸ್ಥೆಯಿಂದ ರೇಡಿಯೋ ಸಂಕೇತಗಳು ಹೊರಸೂಸುತ್ತಿರುವುದನ್ನು ಪತ್ತೆಹಚ್ಚಲಾಗಿದೆ. ಈ ವ್ಯವಸ್ಥೆಯು ಜೋಡಿ ನಕ್ಷತ್ರ ಪುಂಜ (ಬೈನರಿ ಸ್ಟಾರ್ ಸಿಸ್ಟಂ) ಮತ್ತು ಒಂದು ಬಾಹ್ಯಗ್ರಹವನ್ನು ಒಳಗೊಂಡಿದೆ. ಇದಲ್ಲದೇ, ಕ್ಯಾನ್ಸರ್ ಮತ್ತು ಅಪ್ ಸಿಲಾನ್ ಆ್ಯಂಡ್ರೋಮೀಡೆ ಎಂಬ ನಕ್ಷತ್ರಪುಂಜಗಳಿಂದಲೂ ಇದೇ ರೀತಿಯ ಸಿಗ್ನಲ್‌ಗಳು ಹೊರಬರುತ್ತಿವೆ ಎಂದು ಅಮೆರಿಕದ ಕಾರ್ನೆಲ್ ವಿವಿಯ ಸಂಶೋಧಕರ ನೇತೃತ್ವದ ತಂಡ ಹೇಳಿದೆ. ಆದರೆ, ಟೌ ಬೂಟ್ಸ್‌ನಿಂದ ಹೊರಬರುತ್ತಿರುವ ರೇಡಿಯೋ ಸಿಗ್ನಲ್‌ಗಳು ಅತ್ಯಂತ ವಿಶಿಷ್ಟವಾಗಿದ್ದು, ಬಾಹ್ಯಗ್ರಹದ ಕಾಂತೀಯ ಕ್ಷೇತ್ರದ ಕುರಿತು ಹಾಗೂ ಅನ್ಯಗ್ರಹ ಜೀವಿಗಳ ಕುರಿತು ಅಧ್ಯಯನ ನಡೆಸಲು ಸಹಕಾರಿಯಾಗಲಿವೆ ಎಂದೂ ತಂಡ ತಿಳಿಸಿದೆ. **(ಉದಯವಾಣಿ 19–12–2020)**

===========================================================

## ಪೀಸ್ ಟಿವಿ ನಿಷೇಧಕ್ಕೆ ಇಂಗಿತ

**ಹೊಸದಿಲ್ಲಿ:** ಮಲೇಷ್ಯಾದಲ್ಲಿ ತಲೆಮರೆಸಿಕೊಂಡಿದ್ದಾನೆ ಎನ್ನಲಾದ ಜಕೀರ್ ನಾಯ್ಕ್ ಮಾಲಕತ್ವದ ‘ಪೀಸ್ ಟಿವಿ’ ಮೇಲೆ ನಿಷೇಧ ಹೇರಲು ಕೇಂದ್ರ ಸರಕಾರ ಮುಂದಾಗಿದೆ. ಜತೆಗೆ ಚಾನೆಲ್‌ನ ಆ್ಯಪ್, ಯೂಟ್ಯೂಬ್ ಚಾನೆಲ್ ವಿರುದ್ಧವೂ ನಿಷೇಧ ಹೇರಲು ಗೃಹ ಸಚಿವಾಲಯ ಚಿಂತನೆ ನಡೆಸಿದೆ. ಇಂಟೆಲಿಜೆನ್ಸ್ ಬ್ಯೂರೋ ಗೃಹ ಸಚಿವಾಲಯಕ್ಕೆ ನೀಡಿದ ಮಾಹಿತಿ ಪ್ರಕಾರ, ಪೀಸ್ ಟಿವಿ ಸಮಾಜದ ವಿವಿಧ ಸಮುದಾಯಗಳ ನಡುವೆ ದ್ವೇಷಮಯ ವಾತಾವರಣ ಸೃಷ್ಟಿಸಲು, ಭಾರತ ವಿರೋಧಿ ಕೃತ್ಯ ನಡೆಸಲು ಯುವಕರ ಮನವೊಲಿಸುವ

ಕೆಲಸದಲ್ಲಿ ನಿರತವಾಗಿದೆ. ಸಾಮಾಜಿಕ ಜಾಲತಾಣಗಳ ಮೂಲಕವೂ ನಾಯ್ಕ್‌ನ ವಾಹಿನಿ ಇದೇ ಕೆಲಸದಲ್ಲಿ ನಿರತವಾಗಿದೆ ಎಂದು ವರದಿ ನೀಡಿದೆ. ಐ.ಬಿ., ಎನ್‌ಐಎ ಸಲ್ಲಿಸಿರುವ ವರದಿಗಳಲ್ಲಿ ಪೀಸ್ ಟಿವಿ ಚಟುವಟಿಕೆಗಳು ಆತಂಕಕಾರಿ ಎಂದು ಅಭಿಪ್ರಾಯಪಟ್ಟಿವೆ.

**(ಉದಯವಾಣಿ 25–9–2020)**

=========================================================

## ಮಕ್ಕಳನ್ನು ಪಡೆದು ಬೋನಸ್ ಪಡೆಯಿರಿ

**ಸಿಂಗಾಪುರ:** ಕೊರೊನಾ ವೈರಸ್ ಸಂದರ್ಭದಲ್ಲಿಯೇ ಮಗು ಜನಿಸಿದರೆ ಬೋನಸ್. ಏನಪ್ಪಾ ಇದು ವಿಚಿತ್ರವೆಂದುಕೊಳ್ಳಬೇಡಿ. ಇದು ಸಿಂಗಾಪುರ ಸರಕಾರದ ಹೊಸ ಯೋಜನೆ. ಸೋಂಕಿನಿಂದಾಗಿ ಹೆಚ್ಚಿದ ಹಣಕಾಸು ಒತ್ತಡ, ಉದ್ಯೋಗ ಕಳೆದುಕೊಂಡಿರುವ ಯುವ ದಂಪತಿ ಮಗುವನ್ನು ಹೊಂದುವ ಯೋಜನೆ ಮುಂದಕ್ಕೆ ಹಾಕುತ್ತಿದ್ದಾರೆ. ಅದನ್ನು ತಡೆಯುವ ನಿಟ್ಟಿನಲ್ಲಿ ಈ ಕ್ರಮ. ಸದ್ಯ 5.5 ಲಕ್ಷ ರೂ. (7,330 ಡಾಲರ್) ವರೆಗೆ ನೆರವು ನೀಡಲಾಗುತ್ತದೆ. ಈ ಬಗ್ಗೆ 'ಬಿಬಿಸಿ' ಜತೆಗೆ ಮಾತನಾಡಿದ ಸಿಂಗಾಪುರ ಉಪ ಪ್ರಧಾನಿ ಹೆಂಗ್ ಸ್ವೀ ಕೆಯಾತ್ 'ಕೊರೊನಾ ಕಾರಣದಿಂದ ಮತ್ತು ಉದ್ಯೋಗ ನಷ್ಟದಿಂದಾಗಿ ಹಲವಾರು ಮಂದಿ ಯುವ ದಂಪತಿ ಸದ್ಯಕ್ಕೆ ಮಕ್ಕಳು ಬೇಡವೆಂದು ತೀರ್ಮಾನಿಸಿದ್ದಾರೆ. ಅದನ್ನು ತಡೆಯುವ ನಿಟ್ಟಿನಲ್ಲಿ ಈ ಯೋಜನೆ' ಎಂದರು. **(ಉದಯವಾಣಿ 8–10–2020)**

=========================================================

## ಭಾರತದ ಮುಸ್ಲಿಮರು ಜ್ಞಾನವಂತರು: ಭಾಗವತ್

**ಹೊಸದಿಲ್ಲಿ:** ಭಾರತೀಯ ಮುಸ್ಲಿಮರು ವಿಶ್ವದ ಇತರ ದೇಶಗಳ ಮುಸ್ಲಿಮರಿಗಿಂತ ಹೆಚ್ಚು ತಿಳಿವಳಿಕೆಯನ್ನು ಹೊಂದಿರುವವರು ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

ಹಿಂದಿ ಭಾಷೆಯ ವಿವೇಕ್ ಎಂಬ ನಿಯತಕಾಲಿಕೆಗೆ ನೀಡಿರುವ ಸಂದರ್ಶನದಲ್ಲಿ ಹೀಗೆ ಹೇಳಿರುವ ಅವರು, ಮುಸ್ಲಿಮರಲ್ಲಿ ಧರ್ಮಾಂಧತೆ, ಪ್ರತ್ಯೇಕತೆ ಭಾವನೆಯನ್ನು ಯಾರೋ ಸ್ವಾರ್ಥಿಗಳು ಬಿತ್ತುತ್ತಿದ್ದಾರೆ ಎಂದು ಹೇಳಿದ್ದಾರೆ.

ಭಾರತದ ಮೇಲೆ ಪರಕೀಯರ ದಬ್ಬಾಳಿಕೆಯನ್ನು ವಿರೋಧಿಸಿ ಹೋರಾಡಿದವರಲ್ಲಿ ಮುಸ್ಲಿಮರೂ ಸೇರಿದ್ದಾರೆ. ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕ ಮುಸ್ಲಿಮರು ಪಾಲ್ಗೊಂಡು ಅನೇಕ ತ್ಯಾಗಗಳನ್ನು ಮಾಡಿದ್ದಾರೆ. ಭಾರತದ ಸಂಸ್ಕೃತಿಯ ಮೇಲೆ ದಾಳಿ ನಡೆದ ಯಾವುದೇ ಸಂದರ್ಭದಲ್ಲಿ ಅವರು ಹಿಂದೂಗಳ ಜತೆಗೆ ಕೈ ಜೋಡಿಸಿದ್ದಾರೆ ಎಂದು ಭಾಗವತ್ ಬಣ್ಣಿಸಿದ್ದಾರೆ. ಭಾರತದಲ್ಲಿನ ಮುಸ್ಲಿಮರಿಗೆ ನಮ್ಮ ಸರಕಾರ ಸೂಕ್ತ ಹಕ್ಕುಗಳನ್ನು ನೀಡಿದೆ ಎಂದು ಅವರು ತಿಳಿಸಿದ್ದಾರೆ. **(ಉದಯವಾಣಿ 10–10–2020)**

=========================================================

## ದೇವರ ಮೂರ್ತಿಗಾಗಿ ಬಡಿದಾಡಿದ ಭಕ್ತರು

### ವಿಜಯದಶಮಿ: ವಿಶಿಷ್ಟ ಆಚರಣೆ

ಸಿರುಗುಪ್ಪ ಅ. 27: ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಣ ಗಡಿಗ್ರಾಮ ಹಾಗೂ ಸೀಮಾಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯ ನೇರಣಿಕೆ ದೇವರಗುಡ್ಡದಲ್ಲಿ ವಿಜಯದಶಮಿಯ ದಿನ ಜನ ದೇವರ ಮೂರ್ತಿಗಾಗಿ ಬಡಿಗೆಗಳಿಂದ ಹೊಡೆದಾಡಿಕೊಂಡಿದ್ದಾರೆ.

ಪ್ರತಿ ವರ್ಷ ವಿಜಯದಶಮಿಯಂದು ನಡೆಯುವ ಈ ವಿಶಿಷ್ಟ ಆಚರಣೆಯಲ್ಲಿ ಈ ಬಾರಿ ಸುಮಾರು 50ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದು ಒಬ್ಬರ ಸ್ಥಿತಿ ಚಿಂತಾಜನಕವಾಗಿದೆ. ಗಾಯಾಳುಗಳನ್ನು ಆದೋನಿ ಹಾಗೂ ಆಲೂರು ಆಸ್ಪತ್ರೆಗೆ ದಾಖಲಿಸಲಾಗಿದೆ. ದೇವರು ಹಾಗೂ ಅಸುರರ ಮಧ್ಯೆ ನಡೆದ ಕಾದಾಟದ ಪ್ರತಿರೂಪವಾಗಿ ನಡೆಯುವ ಈ ಮಾಳ ಮಲ್ಲೇಶ್ವರ ಜಾತ್ರೆಯಲ್ಲಿ ಈ ವರ್ಷವೂ ಸಾವಿರಾರು ಭಕ್ತರು ಪಾಲ್ಗೊಂಡಿದ್ದು ಸೋಮವಾರ ರಾತ್ರಿಯಿಂದ ಮಂಗಳವಾರ ಬೆಳಗ್ಗಿನವರೆಗೆ ಬಡಿದಾಡಿದ್ದಾರೆ.

ದೇವರಗುಡ್ಡದಲ್ಲಿನ ಮಲ್ಲಯ್ಯ ಮತ್ತು ಮಾಳಮ್ಮನ ಮೂರ್ತಿಗಳನ್ನು ಕೊಂಡೊಯ್ಯಲು 11 ಗ್ರಾಮಗಳ ಭಕ್ತರ ಮಧ್ಯೆ ಹೊಡೆದಾಟ ನಡೆದಿದೆ. ಬಡಿಗೆ ಪೆಟ್ಟಿನಿಂದ ಪರಸ್ಪರ ಗಾಯವಾಗಿ ರಕ್ತಸೋರಿದರೂ ಜನ ತಮ್ಮ ಭಕ್ತಿ ಮೆರೆದಿದ್ದಾರೆ.

ಮೂರ್ತಿಗಳನ್ನು ತಮ್ಮೂರಿಗೆ ಕೊಂಡೊಯ್ಯಲು 11 ಗ್ರಾಮಗಳ ಗ್ರಾಮಸ್ಥರು ಯತ್ನಿಸಿದ್ದಾರೆ. ಇದಕ್ಕೆ ಅವಕಾಶ ನೀಡದ ನೇರಣಿಕೆ ಗ್ರಾಮಸ್ಥರು ಬಡಿಗೆಗಳ ಮೂಲಕ ಪ್ರತಿರೋಧ ಒಡ್ಡಿದ್ದು, ಪರಸ್ಪರ ಹೊಡೆದಾಡಿದ್ದಾರೆ. ಇದೇ ಈ ಜಾತ್ರೆಯ ವೈಶಿಷ್ಟ್ಯ.

**(ಉದಯವಾಣಿ 28–10–2020)**

## ದೇಗುಲ ನಿರ್ಮಿಸಲು ನಿಷೇಧವಿಲ್ಲ: ಪಾಕ್ ಸಮಿತಿ

**ಇಸ್ಲಾಮಾಬಾದ್:** ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್ ಸೇರಿದಂತೆ ದೇಶದ ಯಾವುದೇ ಭಾಗದಲ್ಲಿ ಹಿಂದೂಗಳು ದೇವಸ್ಥಾನ ನಿರ್ಮಾಣ ಮಾಡಬಾರದು ಎಂದು ಸಂವಿಧಾನ, ಶರಿಯಾ ನಿಯಮವೇ ಇಲ್ಲ. ಹೀಗೆಂದು ಕೌನ್ಸಿಲ್ ಆಫ್ ಇಸ್ಲಾಮಿಕ್ ಐಡಿಯಾಲಜಿ (ಸಿಐಐ) ಹೇಳಿದೆ. 1950ರಲ್ಲಿ ಭಾರತದ ಮೊದಲ ಪ್ರಧಾನಿ ಜವಾಹರ್‌ಲಾಲ್ ನೆಹರೂ ಮತ್ತು ಲಿಯಾಖತ್ ನಡುವಿನ ಒಪ್ಪಂದದ ಅನ್ವಯ ಸಿಐಐ ಈ ತೀರ್ಮಾನ ಪ್ರಕಟಿಸಿದೆ.

ಇದಲ್ಲದೆ, ಸೈದ್‌ಪುರ್ ಎಂಬ ಗ್ರಾಮದಲ್ಲಿ ಇರುವ ಸರಕಾರಿ ಜಮೀನನ್ನು ಹಿಂದೂ ಸಮುದಾಯದವರಿಗೆ ದೇಗುಲ ನಿರ್ಮಾಣಕ್ಕೆ ಒಪ್ಪಿಸಲೂ ಒಪ್ಪಿಗೆ ಸೂಚಿಸಿದೆ. ಹಿಂದೂಗಳ ನಂಬಿಕೆಗೆ ತಕ್ಕಂತೆ ಅವರ ಧಾರ್ಮಿಕ ಸ್ಥಳಗಳಿಗೆ ಪ್ರವೇಶಿಸಲು ಅವಕಾಶ ನೀಡಬೇಕು ಎಂದೂ ಅದು ಸಲಹೆ ಮಾಡಿದೆ. ಜತೆಗೆ ಪಾಕಿಸ್ತಾನದಲ್ಲಿ ವಾಸಿಸುವ ಇತರರಂತೆ ಹಿಂದೂ ಧರ್ಮೀಯರಿಗೂ ಅಂತ್ಯಸಂಸ್ಕಾರ ನಡೆಸುವ ಹಕ್ಕೂ ಇದೆ ಎಂದು ಸಮಿತಿ ಹೇಳಿದೆ. ಸಿಐಐನ 14 ಮಂದಿ ಸದಸ್ಯರು ಬುಧವಾರ ಕೈಗೊಂಡ ನಿರ್ಣಯದ ಪರವಾಗಿ ಸಹಿ ಹಾಕಿದ್ದಾರೆ ಎನ್ನುವುದು ಗಮನಾರ್ಹ. ಸೈದ್‌ಪುರದಲ್ಲಿ ದೇಗುಲ ಮತ್ತು ಸ್ಮಶಾನ ನಿರ್ಮಾಣಕ್ಕೆ ಪಾಕ್ ಸರಕಾರ ಸೂಕ್ತ ನೆರವು ನೀಡಬೇಕೆಂದೂ ಅದು ಹೇಳಿದೆ. **(ಉದಯವಾಣಿ 30–10–2020)**

======================================================

## ಪಾಕ್: ಕೃಷ್ಣದೇಗುಲಕ್ಕೆ ಅನುಮತಿ

**ಲಾಹೋರ್/ಇಸ್ಲಾಮಾಬಾದ್:** ಪಾಕಿಸ್ಥಾನದ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ಮೊದಲ ಶ್ರೀಕೃಷ್ಣ ದೇಗುಲ ನಿರ್ಮಾಣಕ್ಕೆ ಸರಕಾರ ಅನುಮತಿ ನೀಡಿದೆ. ರಾಜಧಾನಿ ಅಭಿವೃದ್ಧಿ ಪ್ರಾಧಿಕಾರ (ಸಿಡಿಎ) ಸೋಮವಾರ ಈ ಬಗ್ಗೆ ಅಧಿಸೂಚನೆ ಹೊರಡಿಸಿದೆ. ದೇಗುಲ ನಿರ್ಮಾಣಕ್ಕೆ ನವಾಜ್ ಷರೀಫ್ ಪ್ರಧಾನಿಯಾಗಿದ್ದಾಗ 2017ರಲ್ಲೇ ಜಮೀನು ನೀಡಲಾಗಿತ್ತು. ಇದೇ ಸ್ಥಳದಲ್ಲಿ ಹಿಂದೂಗಳಿಗೆ ರುದ್ರ ಭೂಮಿಯನ್ನೂ ನಿರ್ಮಿಸಬೇಕಾಗಿದ್ದು ಅದಕ್ಕಾಗಿ ಗೋಡೆ ನಿರ್ಮಿಸಲೂ ಸಮ್ಮತಿ ಸಿಕ್ಕಿದೆ. 20 ಸಾವಿರ ಚದರ ಅಡಿ ವ್ಯಾಪ್ತಿಯಲ್ಲಿ ದೇಗುಲ ನಿರ್ಮಾಣವಾಗಲಿದೆ. ಅಕ್ಟೋಬರ್‌ನಲ್ಲಿ ನಡೆದಿದ್ದ ಕೌನ್ಸಿಲ್ ಆಫ್ ಇಸ್ಲಾಮಿಕ್ ಐಡಿಯಾಲಜಿ (ಸಿಐಐ) ಸದಸ್ಯರು ಸಭೆ ನಡೆಸಿ ದೇಗುಲ ನಿರ್ಮಿಸಬಾರದು ಎಂದು ಸಂವಿಧಾನದಲ್ಲಿ ಅಥವಾ ಇನ್ನು ಯಾವುದೇ ಧಾರ್ಮಿಕ ಸಂಹಿತೆಗಳಲ್ಲಿ ಉಲ್ಲೇಖವಾಗಿಲ್ಲ, ಧಾರ್ಮಿಕ ಅಲ್ಪಸಂಖ್ಯಾಕರೂ ಇತರರಂತೆ ತಮ್ಮ ನಂಬಿಕೆಯ ಅನುಸಾರ ಶವ ಸಂಸ್ಕಾರ ನಡೆಸಲೂ ಅವಕಾಶವಿದೆ ಎಂದಿತ್ತು. **(ಉದಯವಾಣಿ 23–12–2020)**

======================================================

## ಗೋಹತ್ಯೆ ವಿಷಯದಲ್ಲಿ ಬಿಜೆಪಿ ದ್ವಂದ್ವ ನಿಲುವು: ಸಿದ್ದರಾಮಯ್ಯ

ಬೆಂಗಳೂರು, ನ. 21: ಗೋಹತ್ಯೆ ವಿಷಯದಲ್ಲಿ ಬಿಜೆಪಿ ನಾಯಕರದ್ದು ದ್ವಂದ್ವ ನಿಲುವು. ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ಬಳಿಕ ಗೋಮಾಂಸ ರಫ್ತು ಹಲವು ಪಟ್ಟು ಹೆಚ್ಚಾಗಿದೆ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ಅತಿ ಹೆಚ್ಚು ಗೋಮಾಂಸ ರಫ್ತು ನಡೆಯುತ್ತಿರುವುದು ಉತ್ತರ ಪ್ರದೇಶದಲ್ಲಿ. ಆ ವ್ಯವಹಾರದಲ್ಲಿ ತೊಡಗಿರುವ ಅನೇಕ ವ್ಯಾಪಾರಿಗಳು ಕೂಡ ಬಿಜೆಪಿಯವರು ಎಂದರು.

ಗೋಹತ್ಯೆ ನಿಷೇಧ ಕಾಯ್ದೆಯ ಬಗ್ಗೆ ನಮ್ಮ ನಿಲುವಿನಲ್ಲಿ ಬದಲಾವಣೆಯಿಲ್ಲ. ಹಿಂದಿನ ಬಿಜೆಪಿ ಸರಕಾರ 1964ರ ಗೋಹತ್ಯೆ ನಿಷೇಧ ಕಾಯ್ದೆಗೆ ತಂದಿದ್ದ ತಿದ್ದುಪಡಿಯನ್ನು ನಮ್ಮ ಸರಕಾರ ರದ್ದುಗೊಳಿಸಿ ಮೂಲ ಕಾಯ್ದೆಯನ್ನು ಉಳಿಸಿಕೊಂಡಿದೆ. ಈ ನಿಲುವಿಗೆ ನಾವು ಬದ್ಧರಾಗಿದ್ದೇವೆ ಎಂದು ತಿಳಿಸಿದರು. **(ಉದಯವಾಣಿ 22–11–2020)**

======================================================

## ಸಂಸ್ಕೃತದಲ್ಲಿ ಡಾಕ್ಟರೇಟ್ ಪಡೆದ ಮುಸ್ಲಿಂ ವಿದ್ಯಾರ್ಥಿನಿ

**ಅಹ್ಮದಾಬಾದ್:** ಮುಸ್ಲಿಂ ಸಮುದಾಯದ ವಿದ್ಯಾರ್ಥಿನಿ ಸಲ್ಮಾ ಖುರೇಶಿ ಸಂಸ್ಕೃತದಲ್ಲಿ ಪಿಎಚ್.ಡಿ ಪಡೆದು ದಾಖಲೆ ನಿರ್ಮಿಸಿದ್ದಾರೆ. ಗುಜರಾತ್ ವಿಶ್ವವಿದ್ಯಾನಿಲಯದ ಭಾಷೆಗಳ ನಿಕಾಯದಲ್ಲಿ ಅವರು ಸಂಸ್ಕೃತದಲ್ಲಿ ಸಂಶೋಧನಾತ್ಮಕ ಪ್ರಬಂಧ ಮಂಡಿಸಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಇಂಥ ಸಾಧನೆ ಮಾಡುವ ಮೂಲಕ ದೇವ ಭಾಷೆಯಾಗಿರುವ ಸಂಸ್ಕೃತದಲ್ಲಿ ಉನ್ನತ ಅಧ್ಯಯನ ನಡೆಸುವುದು ಎಲ್ಲರಿಗೂ ಸಾಧ್ಯ. ಅದು ಕೇವಲ ಒಂದು ಪಂಗಡಕ್ಕೆ ಮೀಸಲಾಗಿ ಇರುವ ಭಾಷೆ ಎಂಬ ಮಿಥ್ಯೆಯನ್ನು ಸುಳ್ಳು ಮಾಡಿದ್ದಾರೆ. ಪುರಾಣಗಳಲ್ಲಿ ಉಲ್ಲೇಖಿತಗೊಂಡಿರುವ ಶಿಕ್ಷಣ ಪದ್ಧತಿಯನ್ನು ಆಧುನಿಕ ಕಾಲಘಟ್ಟದಲ್ಲಿ ಹೇಗೆ ಅನುಷ್ಠಾನ ಮಾಡಬಹುದು ಎಂಬುದರ ಬಗ್ಗೆ ಸಲ್ಮಾ ಖುರೇಷಿ ಆಸ್ಥೆಯಿಂದ ಅಧ್ಯಯನ ನಡೆಸಿದ್ದಾರೆ. **(ಉದಯವಾಣಿ 6–12–2020)**

## ಮದ್ರಸ ವಿದ್ಯಾರ್ಥಿಗೆ ಕಿರುಕುಳ: ಉಸ್ತಾದ್‌ಗೆ ಜೀವಾವಧಿ ಸಜೆ, ದಂಡ

**ಕಾಸರಗೋಡು,** ಡಿ. 11: ಮದ್ರಸ ವಿದ್ಯಾರ್ಥಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣಕ್ಕೆ ಸಂಬಂಧಿಸಿ ಕುಂಬಳೆ ಕೊಯಿಪ್ಪಾಡಿ ದೇವಿನಗರ ಸುನಾಮಿ ಕಾಲನಿಯ ನಿವಾಸಿ ಉಸ್ತಾದ್ ಮುಹಮ್ಮದ್ ರಿಯಾಸ್ ಯಾನೆ ರಿಯಾಸ್ (31)ಗೆ ಜಿಲ್ಲಾ ಪೋಕ್ಸೋ ನ್ಯಾಯಾಲಯ ಜೀವಾವಧಿ ಸಜೆ, 50 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ. ದಂಡ ಪಾವತಿಸದಿದ್ದಲ್ಲಿ ಆರು ತಿಂಗಳು ಹೆಚ್ಚುವರಿ ಸಜೆ ಅನುಭವಿಸುವಂತೆ ತೀರ್ಪಿನಲ್ಲಿ ಹೇಳಿದೆ.

2015 ಆ. 3, ಅದರ ಮುನ್ನ ದಿನಗಳಲ್ಲಿ ಚೆಂಬೇರಿ ಸಮೀಪದ ಮದ್ರಸಾದ ವಿದ್ಯಾರ್ಥಿಯಾದ ಹತ್ತರ ಹರೆಯದ ಬಾಲಕನನ್ನು ಸಲಿಂಗರತಿ ಕಿರುಕ್ಕೊಳಪಡಿಸಿದ ಘಟನೆಯ ಹಿನ್ನೆಲೆಯಲ್ಲಿ ಪೊಲೀಸರು ಕೇಸು ದಾಖಲಿಸಿದ್ದರು. **(ಉದಯವಾಣಿ 12–12–2020)**

==========================================================

**ಉತ್ತರ ಪ್ರದೇಶದಲ್ಲಿ ವಿಶೇಷ ಬೆಳವಣಿಗೆ**

## ಹಿಂದೂ–ಮುಸ್ಲಿಂ ದಂಪತಿ ಒಗ್ಗೂಡಿಸಿದ ಹೈಕೋರ್ಟ್

**■ 3ನೇ ಪಕ್ಷದ ನಿರ್ಬಂಧದ ಅಗತ್ಯವಿಲ್ಲ; ನ್ಯಾಯಪೀಠ ಪ್ರತಿಪಾದನೆ**

**■ ದಂಪತಿಗೆ ಭದ್ರತೆ ಒದಗಿಸಲು ಸೂಚನೆ**

**ಲಕ್ನೋ:** ಲವ್ ಜಿಹಾದ್ ಕಾನೂನಿನಡಿಯಲ್ಲಿ ಉ.ಪ್ರ.ದಲ್ಲಿನ ಬಂಧನ ಪ್ರಕರಣಗಳ ನಡುವೆಯೇ ಅಲಹಾಬಾದ್ ಹೈಕೋರ್ಟ್, ಪ್ರತ್ಯೇಕ ವಾಸವಿದ್ದ ಹಿಂದೂ– ಮುಸ್ಲಿಂ ದಂಪತಿಯನ್ನು ಒಂದುಗೂಡಿಸಿದೆ!

'ಮಹಿಳೆಗೆ ತಾನು ಇಚ್ಛಿಸಿದ ಬದುಕಿನ ಹಾದಿ ಆರಿಸಿಕೊಳ್ಳುವ ಹಕ್ಕಿದೆ' ಎಂದು ತೀರ್ಪು ನೀಡುವ ಮೂಲಕ ಹೈಕೋರ್ಟ್, 21 ವರ್ಷದ ಹಿಂದೂ ಮಹಿಳೆಯನ್ನು ಮರಳಿ ದಾಂಪತ್ಯದ ದಡಕ್ಕೆ ಸೇರಿಸಿದೆ ಹೈಕೋರ್ಟ್.

**ಏನಿದು ಪ್ರಕರಣ?:** 'ಪತ್ನಿ ಶಿಖಾಳ ಆಶಯಕ್ಕೆ ವಿರುದ್ಧವಾಗಿ ಮಕ್ಕಳ ರಕ್ಷಣ ಕಮಿಟಿ ಡಿ.7ರಂದು ಆಕೆಯನ್ನು ನನ್ನಿಂದ ಪ್ರತ್ಯೇಕಗೊಳಿಸಿದೆ' ಎಂದು ಆರೋಪಿಸಿ, ಪತಿ ಸಲ್ಮಾನ್, ಹೈಕೋರ್ಟ್ ಮೆಟ್ಟಿಲೇರಿದ್ದರು. ಮತಾಂತರಗೊಂಡಿರುವ ಹಿಂದೂ ಯುವತಿ, ಅಪ್ರಾಪ್ತ ವಯಸ್ಸಿನವಳು ಎಂದು ಕಮಿಟಿ ಆರೋಪಿಸಿತ್ತು.

ಇದಕ್ಕೆ ಪೂರಕವಾಗಿ ಯುವತಿ, 1999 ಆ.4ರಲ್ಲಿ ತಾನು ಜನಿಸಿರುವುದಾಗಿ ಜನ್ಮಪ್ರಮಾಣ ಪತ್ರದ ದಾಖಲೆಗಳನ್ನು ಕೋರ್ಟಿಗೆ ಸಲ್ಲಿಸಿದ್ದಳು. ಅಲ್ಲದೆ, ತಾನು ಪತಿಯ ಜೊತೆ ಜೀವಿಸುವುದಾಗಿಯೂ ಕೋರ್ಟಿನ ಮುಂದೆ ಹೇಳಿದ್ದಳು.

ಯುವತಿಯ ಮನದಾಳಕ್ಕೆ ಕಿವಿಗೊಟ್ಟ ನ್ಯಾ| ಪಂಕಜ್ ನಖ್ವಿ ಮತ್ತು ವಿವೇಕ್ ಅಗರ್ವಾಲ್ ನೇತೃತ್ವದ ಪೀಠ, 'ಯಾವುದೇ 3ನೇ ಪಕ್ಷದವರ ನಿರ್ಬಂಧ ಅಥವಾ ಅಡಚಣೆಗೊಳಪಡದೆ, ಯುವತಿಗೆ ತಾನು ಬಯಸಿದಂತೆ ಜೀವಿಸುವ ಹಕ್ಕಿದೆ' ಎಂದು ತೀರ್ಪಿತ್ತಿದೆ.

ಅಲ್ಲದೆ, ದಂಪತಿ ಮನೆಗೆ ಮರಳುವ ತನಕ ಅವರಿಗೆ ಭದ್ರತೆ ಒದಗಿಸುವಂತೆ ಪ್ರಯಾಗ್‌ರಾಜ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಹೈಕೋರ್ಟ್ ಆದೇಶಿಸಿದೆ. **(ಉದಯವಾಣಿ 29–12.2020)**

==========================================================

## ಅಭಯಾ ಕೊಲೆ ಕೇಸ್: ಅಪರಾಧಿಗಳಿಬ್ಬರಿಗೂ ಜೀವಾವಧಿ ಶಿಕ್ಷೆ

**ತಿರುವನಂತಪುರ:** ದೇಶಾದ್ಯಂತ ಭಾರೀ ಚರ್ಚೆಗೆ ಗ್ರಾಸವಾಗಿದ್ದ 28 ವರ್ಷಗಳ ಹಿಂದಿನ ಸಿಸ್ಟರ್ ಅಭಯಾ ಕೊಲೆ ಪ್ರಕರಣದ ಇಬ್ಬರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿ ಕೇರಳದ ಸಿಬಿಐ ವಿಶೇಷ ನ್ಯಾಯಾಲಯ ಬುಧವಾರ ತೀರ್ಪು ನೀಡಿದೆ. ಮಂಗಳವಾರವಷ್ಟೇ ಪಾದ್ರಿ ಥಾಮಸ್ ಕೊಟ್ಟೂರು ಮತ್ತು ಸಿಸ್ಟರ್ ಸೆಫಿಯನ್ನು ಅಪರಾಧಿಗಳು ಎಂದು ಕೋರ್ಟ್ ಘೋಷಿಸಿತ್ತು.

ಬುಧವಾರ ಶಿಕ್ಷೆಯ ಪ್ರಮಾಣ ಘೋಷಿಸಿದ ವಿಶೇಷ ಸಿಬಿಐ ನ್ಯಾಯಾಧೀಶ ಕೆ. ಸನಲ್ ಕುಮಾರ್, 'ಪಾದ್ರಿ ಥಾಮಸ್‌ಗೆ ದುಪ್ಪಟ್ಟು ಜೀವಾವಧಿ ಶಿಕ್ಷೆ ವಿಧಿಸಲಾಗಿದ್ದು, 6.5 ಲಕ್ಷ ರೂ. ದಂಡವನ್ನೂ ವಿಧಿಸಲಾಗಿದೆ. ಮತ್ತೊಬ್ಬ ಅಪರಾಧಿ ಸಿಸ್ಟರ್ ಸೆಫಿಗೆ ಜೀವಾವಧಿ ಶಿಕ್ಷೆ ಹಾಗೂ 5.5 ಲಕ್ಷ ರೂ. ದಂಡ ವಿಧಿಸಲಾಗಿದೆ' ಎಂದು ಹೇಳಿದ್ದಾರೆ. ಇದಿಷ್ಟೇ ಅಲ್ಲದೆ ಸಾಕ್ಷ್ಯವನ್ನು ತಿರುಚಿದ್ದಕ್ಕಾಗಿ ಅಪರಾಧಿಗಳಿಬ್ಬರಿಗೂ 7 ವರ್ಷಗಳ ಹೆಚ್ಚುವರಿ ಜೈಲು ಶಿಕ್ಷೆಯನ್ನೂ ವಿಧಿಸಲಾಗಿದೆ. **(ಉದಯವಾಣಿ 24–12–2020)**

## ಸ್ವಇಚ್ಛೆಯ ಮದುವೆ–ಮತಾಂತರದಲ್ಲಿ ಯಾರ ಹಸ್ತಕ್ಷೇಪವೂ ಸಲ್ಲ: ಹೈ ತೀರ್ಪು

**■ ಯುವತಿ ತಂದೆ ಸಲ್ಲಿಸಿದ್ದ ತಕರಾರು ಅರ್ಜಿ**

**■ ವಯಸ್ಕರಾಗಿದ್ದರೆ ವಿವಾಹದಲ್ಲಿ ಮಧ್ಯ ಪ್ರವೇಶ ಅಗತ್ಯವೇ ಇಲ್ಲ : ನ್ಯಾಯಪೀಠ ಪ್ರತಿಪಾದನೆ**

**ಕೋಲ್ಕತಾ:** 'ವಯಸ್ಕ ಯುವತಿ ಅಥವಾ ಯುವಕ ತಮ್ಮ ಇಚ್ಛೆಗೆ ಅನುಸಾರವಾಗಿ ಮದುವೆಯಾದರೆ ಮತ್ತು ಮತಾಂತರವಾಗಲು ನಿರ್ಧರಿಸಿದರೆ ಆ ವಿಚಾರದಲ್ಲಿ ಯಾರೂ ಹಸ್ತಕ್ಷೇಪ ಮಾಡುವಂತಿಲ್ಲ'. ತಮ್ಮ ಪುತ್ರಿ ಅನ್ಯಧರ್ಮೀಯ ಯುವಕನ ಪ್ರಭಾವಕ್ಕೆ ಸಿಲುಕಿ ಆತನನ್ನು ವಿವಾಹವಾಗಿದ್ದಾಳೆ ಎಂದು ತಂದೆಯೊಬ್ಬರು ಸಲ್ಲಿಸಿದ ಅರ್ಜಿಗೆ ಸಂಬಂಧಿಸಿ ಕಲ್ಕತ್ತಾ ಹೈಕೋರ್ಟ್ ಈ ಆದೇಶ ನೀಡಿದೆ.

19 ವರ್ಷದ ಯುವತಿಯು ಯುವಕನೊಬ್ಬನನ್ನು ಪ್ರೀತಿಸಿ ಮದುವೆಯಾದ ಹಿನ್ನೆಲೆಯಲ್ಲಿ ತಂದೆ ಹೈಕೋರ್ಟ್ ಮೆಟ್ಟಿಲೇರಿದ್ದರು. ಯುವತಿಯನ್ನು ಕೋರ್ಟ್‌ಗೆ ಹಾಜರುಪಡಿಸಿ ಹೇಳಿಕೆ ಪಡೆದಾಗ, ಆಕೆ ತಾನು ಇಚ್ಛೆಯಂತೆಯೇ ವಿವಾಹವಾಗಿದ್ದಾಗಿ ಹೇಳಿದ್ದಳು. ಈ ಹಿನ್ನೆಲೆಯಲ್ಲಿ ತೀರ್ಪು ನೀಡಿದ ವಿಭಾಗೀಯ ನ್ಯಾಯಪೀಠ, 'ವಯಸ್ಕ ಯುವತಿಯು ತನ್ನ ಇಚ್ಛೆಯ ಅನುಸಾರ ಯಾರನ್ನಾದರೂ ಮದುವೆಯಾಗಿ, ಮತಾಂತರವಾಗಲು ಬಯಸಿದರೆ ಮತ್ತು ತವರಿಗೆ ಹಿಂದಿರುಗಲು ನಿರಾಕರಿಸಿದರೆ, ಅದರಲ್ಲಿ ಯಾರೂ ಹಸ್ತಕ್ಷೇಪ ಮಾಡಬಾರದು ಎಂದು ಹೇಳಿದೆ. **(ಉದಯವಾಣಿ 24–12–2020)**

==========================================================

## ಪಾಸ್ಟರ್ ವಿರುದ್ಧ ಮಾಜಿ ಪತ್ನಿ ಸುನಂದಾ ಆಕ್ರೋಶ: ಎಸ್‌ಪಿಗೆ ದೂರು

ಬಳ್ಳಾರಿ, ಡಿ. 31: ನಗರದ 24 ವರ್ಷದ ಎಂಜಿನಿಯರಿಂಗ್ ಪದವೀಧರೆಯನ್ನು ವಿವಾಹವಾದ 54 ವರ್ಷದ ಚರ್ಚ್ ಪಾಸ್ಟರ್ ರವಿಕುಮಾರ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಅವರ ಮಾಜಿ ಪತ್ನಿ ಸುನಂದಾ ಹಾಗೂ ಕೆಲವು ಮಹಿಳೆಯರು ಎಸ್‌ಪಿ ಸೈದುಲ್ ಅಡಾವತ್‌ಗೆ ಗುರುವಾರ ಮನವಿ ಸಲ್ಲಿಸಿದರು.

ರವಿಕುಮಾರ್ ಬಳ್ಳಾರಿಯ ಲಿವಿಂಗ್ ವಾಟರ್ ಚರ್ಚ್‌ನಲ್ಲಿ ಪಾಸ್ಟರ್ ಆಗಿದ್ದಾರೆ. 17 ವರ್ಷಗಳ ಹಿಂದೆ ಅವರನ್ನು ಮದುವೆಯಾಗಿದ್ದು ಕಿರುಕುಳ ತಾಳಲಾರದೆ ಕಳೆದ ಫೆ. 13ರಂದು ವಿಚ್ಛೇದನ ಪಡೆದು ಬೆಂಗಳೂರಿನ ವಸತಿ ನಿಲಯದಲ್ಲಿ ವಾಸವಿದ್ದೇನೆ. ರವಿಕುಮಾರ್ ನಡತೆ ಸರಿಯಿಲ್ಲ. ಆತನಿಂದ ಸಾಕಷ್ಟು ನೋವು ಅನುಭವಿಸಿದ್ದೇನೆ. ಬದಲಿಸಲು ಸಾಕಷ್ಟು ಪ್ರಯತ್ನಿಸಿದರೂ ಸಾಧ್ಯವಾಗಿಲ್ಲ. ನಾನು ಇರುವಾಗಲೇ ಸಾಕಷ್ಟು ಹುಡುಗಿಯರನ್ನು ಮನೆಗೆ ಕರೆ ತಂದಿದ್ದಾನೆ. ಈ ಬಗ್ಗೆ ಯಾರಿಗಾದರೂ ಹೇಳಿದರೆ ರೌಡಿಗಳ ಹೆಸರು ಹೇಳಿ ಬೆದರಿಸುತ್ತಿದ್ದ. ನನ್ನಿಬ್ಬರ ಮಕ್ಕಳೂ ಅವನ ಬಳಿಯಿದ್ದು ಅವರನ್ನು ನನಗೆ ಕೊಡಿಸಬೇಕು ಎಂದು ಆಗ್ರಹಿಸಿದ್ದಾರೆ.

**ಕರ್ನೂಲ್ ಯುವತಿಯಿಂದ ದೂರು**

ಕರ್ನೂಲ್‌ನಿಂದ ಬಂದಿರುವ ಮತ್ತೊಬ್ಬ ಯುವತಿಯೂ ರವಿಕುಮಾರ್ ವಿರುದ್ಧ ಆರೋಪ ಮಾಡಿದ್ದಾಳೆ. ಪ್ರಾರ್ಥನಾ ಸಭೆಯಿದೆ ಎಂದು ರಘು ಎನ್ನುವವರು ನನ್ನನ್ನು ಚರ್ಚೆಗೆ ಕರೆತಂದರು. ದೇವರ ಹೆಸರಲ್ಲಿ ದ್ರಾಕ್ಷಾ ರಸದಲ್ಲಿ ಮದ್ಯ ಸೇರಿಸಿ ಕೊಡುತ್ತಿದ್ದ. ಅದನ್ನು ಕುಡಿದ ಯುವತಿಯವರು ಆತ ಹೇಳಿದಂತೆ ಕೇಳುತ್ತಿದ್ದರು. ಚರ್ಚ್, ಜನ್ಮದಿನಾಚರಣೆ ನೆಪದಲ್ಲಿ ಹಲವು ಯುವತಿಯರಿಂದ ಲಕ್ಷಾಂತರ ರೂ. ಪಡೆದಿದ್ದಾನೆ. ಕೆಲವರನ್ನು ದೈಹಿಕವಾಗಿಯೂ ಬಳಸಿಕೊಂಡಿದ್ದಾನೆ. ನನ್ನಿಂದಲೂ 5–6 ಲ.ರೂ.ಗಳನ್ನು ಪಡೆದಿದ್ದಾನೆ ಎಂದು ಆಕೆ ಹೇಳಿದ್ದಾಳೆ.

**ಮದುವೆ ಭರವಸೆ ನೀಡಿ ವಂಚನೆ**

ಮದುವೆ ಮಾಡಿಕೊಳ್ಳುವುದಾಗಿ ಲಕ್ಷಾಂತರ ರೂ. ಪಡೆದಿದ್ದಾನೆ ಎಂದು ಮತ್ತೊಬ್ಬ ಯುವತಿ ಆರೋಪಿಸಿದ್ದಾಳೆ.

**(ಉದಯವಾಣಿ 1–1–2021)**

==========================================================

## ಉಗ್ರ ಸಯೀದ್‌ಗೆ 36 ವರ್ಷ ಜೈಲು

**ಲಾಹೋರ್:** ಮುಂಬಯಿನಲ್ಲಿ 2008ರಲ್ಲಿ ಸಂಭವಿಸಿದ ಉಗ್ರ ದಾಳಿ ರೂವಾರಿ, ಜಮಾತ್ ಉದ್ ದಾವಾ ಸಂಘಟನೆಯ ಮುಖ್ಯಸ್ಥ ಹಫೀಜ್ ಸಯೀದ್ (70)ಗೆ 15 ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ. ಇದರ ಜತೆಗೆ 2 ಲಕ್ಷ ರೂ. ದಂಡವನ್ನು ಉಗ್ರ ನಿಗ್ರಹ ಕೋರ್ಟ್ ವಿಧಿಸಿದೆ. ಈಗಾಗಲೇ ಆತ ಭಯೋತ್ಪಾದಕರಿಗೆ ವಿತ್ತೀಯ ನೆರವು ನೀಡಿದ 4 ಪ್ರಕರಣಗಳಲ್ಲಿ ಈಗಾಗಲೇ 21 ವರ್ಷ ಜೈಲು ಶಿಕ್ಷೆಯನ್ನು ಆತ ಅನುಭವಿಸುತ್ತಿದ್ದಾನೆ. ಹೀಗಾಗಿ, ಸದ್ಯ ಆತ ಒಟ್ಟು 36 ವರ್ಷಗಳ ಕಾಲ ಶಿಕ್ಷೆ ಅನುಭವಿಸಬೇಕಾಗಿದೆ. **(ಉದಯವಾಣಿ 25–12–2020)**

# 20 ಸೆಕೆಂಡ್ ಉರಿಯಿತು ಕೃತಕ ಸೂರ್ಯ

## ವಿಶ್ವದಾಖಲೆ ನಿರ್ಮಿಸಿ ದಕ್ಷಿಣ ಕೊರಿಯಾದ ವಿಜ್ಞಾನಿಗಳ ಮಹತ್ವದ ಸಾಧನೆ

**■ 2008ರಲ್ಲಿ ಮೊದಲ ಪ್ರಯತ್ನ ■ ಕಳೆದ ವರ್ಷ ಎಂಟು ಸೆಕೆಂಡ್ ಬೆಳಗಿದ್ದ ಸೂರ್ಯ**


**ಸಿಯೋಲ್:** ಸೂರ್ಯನ ಬೆಳಕು ಎಂದು ಅಷ್ಟು ಪ್ರಖರತೆ. ಅದಕ್ಕೇ ಪ್ರತಿಸ್ಪರ್ಧಿ ಸಾಧ್ಯವೇ? ದಕ್ಷಿಣ ಕೊರಿಯಾದಲ್ಲಿ ಕೃತಕ ಸೂರ್ಯನನ್ನು ನಿರ್ಮಿಸಿ, ಇಪ್ಪತ್ತು ಸೆಕೆಂಡ್‌ಗಳ 100 ಮಿಲಿಯನ್ ಡಿಗ್ರಿ ಸೆಲ್ಸಿಯಸ್ ತಾಪಮಾನ ಇರುವ ಬೆಳಕು ಸೃಷ್ಟಿಸಲಾಗಿದೆ. ಈ ಸಾಧನೆಯ ಹೊಸ ವಿಶ್ವದಾಖಲೆ ನಿರ್ಮಿಸಲಾಗಿದೆ. ದಕ್ಷಿಣ ಕೊರಿಯಾದ ಭೌತಶಾಸ್ತ್ರ ವಿಜ್ಞಾನಿಗಳು 'ಕೊರಿಯಾ ಸೂಪರ್‌ಕಂಡಕ್ಟಿಂಗ್ ತೊಕಮಕ್ ಅಡ್ವಾನ್ಸ್ಡ್ ರಿಸರ್ಚ್ – ಕೆಸ್ಟಾರ್ ಎಂಬ ವ್ಯವಸ್ಥೆಯ ಮೂಲಕ ಕೃತಕ ಸೂರ್ಯನನ್ನು ಸೃಷ್ಟಿಸಿದ್ದಾರೆ. 100 ಮಿಲಿಯನ್ ಡಿಗ್ರಿ ಸೆಲ್ಸಿಯಸ್ ತಾಪಮಾನದಿಂದ ಬಿಸಿಯಾಗಿರುವ ಅಣುಗಳಿಂದ ಕೂಡಿದ ಪ್ಲಾಸ್ಮಾವನ್ನು ಫ್ಯೂಷನ್‌ಗಾಗಿ ಬಳಕೆ ಮಾಡಿದ್ದಾರೆ. ಅಣುವನ್ನು ಬಿಸಿ ಸ್ಥಿತಿಯಲ್ಲಿಯೇ ಇರುವಂತೆ ಮಾಡಲು, ಗರಿಷ್ಠ ತಾಪಮಾನದಲ್ಲಿ 20 ಸೆಕೆಂಡ್‌ಗಳ ಬೆಳಕು ಉರಿಯುವಂತೆ ಮಾಡಿದ್ದಾರೆ. ಕೊರಿಯನ್ ಇನ್‌ಸ್ಟಿಟ್ಯೂಟ್ ಆಫ್ ಫ್ಯೂಷನ್ ಎನರ್ಜಿ (ಕೆಇಎಫ್), ಸಿಯೋಲ್ ನ್ಯಾಶನಲ್ ಯುನಿವರ್ಸಿಟಿ ಮತ್ತು ಅಮೆರಿಕದ ಕೊಲಂಬಿಯಾ ವಿವಿ ಜತೆಗೆ ಗೂಡಿ ನ.24ರಂದೇ ಈ ಸಾಧನೆ ಮಾಡಲಾಗಿದೆ.

ಕೆಸ್ಟಾರ್‌ನ ನಿರ್ದೇಶ ಸಿ–ವೂ ಯೂನ್ ಈ ಬಗ್ಗೆ ಮಾತನಾಡಿ ಫ್ಯೂಶನ್ ಎನರ್ಜಿಯನ್ನು ಹೊಂದುವ ನಿಟ್ಟಿನಲ್ಲಿ ಅತ್ಯಂತ ಉನ್ನತ ಮಟ್ಟದ ತಂತ್ರಜ್ಞಾನ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ 20 ಸೆಕೆಂಡ್‌ಗಳಷ್ಟು ಕಾಲ ಬೆಳಕು ಉರಿಸಿ ಯಶಸ್ಸು ಸಾಧಿಸಿರುವುದು ಮುಂದಿನ ದಿನಗಳಿಗೆ ಅನುಕೂಲವಾಗಲಿದೆ ಎಂದಿದ್ದಾರೆ. ಕಳೆದ ವರ್ಷ 8 ಸೆಕೆಂಡ್‌ಗಳಷ್ಟು ಕಾಲ ಕೃತಕ ಸೂರ್ಯನಲ್ಲಿ ಬೆಳಕು ಉರಿಯುವಂತೆ ಮಾಡಲಾಗಿತ್ತು. 2008ರಲ್ಲಿ ಕೆಸ್ಟಾರ್ ಮೊದಲ ಬಾರಿಗೆ ಇಂಥ ಸಾಧನೆ ಮಾಡಿತ್ತು. **(ಉದಯವಾಣಿ 31–12–2020)**


==========================================================

**(ವಾಟ್ಸ್ ಆ್ಯಪ್‌ನಲ್ಲಿ ಬಂದದ್ದು)**




**ಪ್ರತಿಭೆ**



ಪಯಂಗಾಡಿ ಜಮಾಅತಿನ ಸಿ. ಶಫೀಕ್ ಅಹ್ಮದ್ ಮತ್ತು ಮಂಗಳೂರಿನ ಫಾತಿಮತ್ ಝುಹ್ರ ದಂಪತಿಯ ಪುತ್ರಿ ಶಹಾಮಾ ಪರ್ವಿನ್ – ಪ್ರಾಯ 14 ವರ್ಷ – ("ಯುಗರಶ್ಮಿ" ಪತ್ರಿಕೆಯ ಸಂಪಾದಕರ ಮೊಮ್ಮಗಳು) ಪವಿತ್ರ ಖುರ್‌ಆನಿನ "ಅಮ್ಮ" ಜುಝು ಸಂಪೂರ್ಣ ಕಂಠಪಾಠ ಮಾಡಿದ್ದಾಳೆ. ಮಾತ್ರವಲ್ಲ, NMMS ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಸ್ಕಾಲರ್‌ಶಿಪ್‌ಗೆ ಅರ್ಹಳಾಗಿದ್ದಾಳೆ. (ಮಾಶಾ ಅಲ್ಲಾಹ್).

## ಆರೋಗ್ಯ ಅರಿಸಿನ ಕಾಳುಮೆಣಸಿನ ಸಮ್ಮಿಶ್ರಣ ಹಲವು ರೋಗಗಳಿಗೆ ರಾಮಬಾಣ

*** ಪ್ರಸನ್ನ ಹೆಗ್ಡೆ ಊರಕೇರಿ**

ಅರಿಸಿನ ಕೇವಲ ಅಡುಗೆಗೆ ಮಾತ್ರ ಬಳಸುವ ವಸ್ತುವಲ್ಲ, ಹಲವಾರು ರೋಗಗಳಿಗೆ ಪರಿಣಾಮಕಾರಿಯಾಗಿರುವ ಔಷಧವೂ ಹೌದು. ಅರಿಸಿನದಲ್ಲಿರುವ ಕುರ್ಕುಮಿನ್ ಎಂಬ ಅತ್ಯಂತ ಆರೋಗ್ಯಕಾರಕ ಪೋಷಕಾಂಶವೇ ಈ ಹೆಗ್ಗಳಿಕೆಗೆ ಮೂಲ. ಇಂತಹುದ್ದೇ ಇನ್ನೊಂದು ವಸ್ತು ಕಾಳುಮೆಣಸು. ಇವೆರಡೂ ವಸ್ತುಗಳ ಸಮ್ಮಿಶ್ರಣ ಹಲವು ರೋಗಗಳಿಗೆ ರಾಮಬಾಣ ಎಂಬುದು ಈಗಾಗಲೇ ದೃಢಪಟ್ಟಿದೆ. ಅರಿಸಿನದಲ್ಲಿರುವ ಔಷಧೀಯ ಗುಣಗಳ ಪೂರ್ಣ ಪ್ರಯೋಜನ ಪಡೆಯಲು ಕಾಳುಮೆಣಸು ನೆರವಾಗುತ್ತದೆ. ಅರಿಸಿನದಲ್ಲಿ ಅದ್ಭುತ ಔಷಧೀಯ ಗುಣಗಳಿದ್ದರೂ ಇವನ್ನು ಸುಲಭದಲ್ಲಿ ದೇಹ ಪಡೆದುಕೊಳ್ಳುವುದಿಲ್ಲ, ಏಕೆಂದರೆ ಇದರ ಪೋಷಕಾಂಶಗಳು ದೇಹಕ್ಕೆ ಮೂಲರೂಪದಲ್ಲಿ ಸಿಗುವ ಮುನ್ನವೇ ಜೀರ್ಣಕ್ರಿಯೆಯಲ್ಲಿ ಚಯಾಪಚಯ ಕ್ರಿಯೆಗೆ ಒಳಗೊಂಡು ಪರಿವರ್ತಿತಗೊಳ್ಳುತ್ತವೆ. ಆದರೆ ಇದರೊಂದಿಗೆ ಕಾಳುಮೆಣಸನ್ನು ಸೇವಿಸಿದರೆ ಅರಿಸಿನದ ಪ್ರಯೋಜನಗಳನ್ನು ದೇಹ ಪಡೆಯಲು ಸಾಧ್ಯವಾಗುತ್ತದೆ.

ದೇಹದಲ್ಲಿ ಕೊಲೆಸ್ಟ್ರಾಲ್ ಮಟ್ಟವನ್ನು ನಿಯಂತ್ರಿಸಿ ಸ್ಥೂಲಕಾಯ ಹಾಗೂ ಮಧುಮೇಹ ಬಾರದಂತೆ ತಡೆಯುತ್ತದೆ. ಈ ಸಂಯೋಜನೆಯನ್ನು ನಿಯಮಿತವಾಗಿ ಸೇವಿಸುವ ಮೂಲಕ ದೇಹದಲ್ಲಿ ಕೆಟ್ಟ ಕೊಲೆಸ್ಟ್ರಾಲ್ ಕಡಿಮೆಯಾಗುತ್ತದೆ ಹಾಗೂ ಒಳ್ಳೆಯ ಕೊಲೆಸ್ಟ್ರಾಲ್ ಮಟ್ಟ ಹೆಚ್ಚುತ್ತದೆ.

**ಕ್ಯಾನ್ಸರ್ ನಿಯಂತ್ರಕ**

**ಕಾಳುಮೆಣಸಿನಲ್ಲಿ ಪೈಪರೈನ್ ಎಂಬ ಪೋಷಕಾಂಶವಿದೆ. ಪೈಪರೈನ್ ಮತ್ತು ಕುರ್ಕುಮಿನ್ ಇವೆರಡೂ ಆಹಾರದ ಮೂಲಕ ಸೇವಿಸಬಹುದಾದ ಪಾಲಿಫೆನಾಲ್‌ಗಳಾಗಿದ್ದು, ಇವುಗಳ ಇರುವಿಕೆಯಿಂದ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಎದುರಾಗುವ ಸಾಧ್ಯತೆ ಕಡಿಮೆಯಾಗುತ್ತದೆ. ಅರಿಸಿನ ಮತ್ತು ಕಾಳುಮೆಣಸಿನಲ್ಲಿರುವ ಇತರ ಪೋಷಕಾಂಶಗಳು ದೇಹದಲ್ಲಿ ಕ್ಯಾನ್ಸರ್ ಕಾರಕ ಜೀವಕೋಶಗಳ ಉತ್ಪತ್ತಿಗೆ ತಡೆಯೊಡ್ಡುತ್ತದೆ.**

**ಉರಿಯೂತಕ್ಕೆ ಔಷಧ**

ಆರಿಸಿನ ಮತ್ತು ಕಾಳುಮೆಣಸಿನ ಸೇವನೆಯಿಂದ ಉರಿಯೂತವನ್ನು ಕಡಿಮೆ ಮಾಡಬಹುದು. ಅಲ್ಲದೇ ಉರಿಯೂತದಿಂದ ಉಂಟಾಗುವ ಹಲವಾರು ತೊಂದರೆಗಳನ್ನು ನಿವಾರಿಸುತ್ತದೆ.

ನಮ್ಮ ದೇಹದ ರಕ್ತವನ್ನು ಸೋಸಿ ಕಶ್ಮಲಗಳನ್ನು ಹೊರಹಾಕುವಲ್ಲಿ ಯಕೃತ್‌ನ ಕಾರ್ಯ ಪ್ರಮುಖವಾಗಿದೆ. ಅರಿಸಿನವು ಈ ಕಶ್ಮಲಗಳು ದೇಹದಲ್ಲಿ ಉಳಿಯದಂತೆ ನೋಡಿಕೊಳ್ಳುತ್ತದೆ ಮತ್ತು ಯಕೃತ್‌ನ ಆರೋಗ್ಯವನ್ನು ಕಾಪಾಡುತ್ತದೆ. **(ಉದಯವಾಣಿ 3–4–2018)**

==========================================================

## ಸಂಪಾದಕರಿಗೆ ಪತ್ರ

ಶ್ರೀ ಮುಹಮ್ಮದ್ ಯೂಸುಫ್, ಸಂಪಾದಕ ಯುಗರಶ್ಮಿ ಅವರಿಗೆ,

ಮಹನಿಯರೇ,

ನಮಸ್ಕಾರ.

2020 ಅಕ್ಟೋಬರ್ ತಿಂಗಳ "ಯುಗರಶ್ಮಿ" ತ್ರೈಮಾಸಿಕ ತಲಪಿದೆ. ಧನ್ಯವಾದ. ಪತ್ರಿಕೆಯಲ್ಲಿ ಪ್ರಕಟವಾದ ಎಲ್ಲ ಲೇಖನಗಳು ಅಧ್ಯಯನಕ್ಕೆ ಯೋಗ್ಯ, ಪ್ರಶಂಸನೀಯ ಮತ್ತು ಜೀವನದಲ್ಲಿ ಅನುಸರಿಸಲಿಕ್ಕೆ ಯೋಗ್ಯವಾಗಿವೆ. "ಅಂತರ್ ಧರ್ಮೀಯ ಶಾಂತಿ", ಇಸ್ಲಾಮಿನ ಸತ್ಯಸಾಕ್ಷ್ಯ", "ಶಾಂತಿಯ ಹಾದಿ", "ಕಾಮಕಸ್ತೂರಿಯಲ್ಲಿದೆ ಆರೋಗ್ಯದ ಗುಟ್ಟು" ಇತ್ಯಾದಿ ಎಲ್ಲವೂ ಉತ್ತಮ ಲೇಖನಗಳಾಗಿವೆ.

ದೀಪಾವಳಿಯ ಶುಭಾಶಯಗಳು.

**– ಬಿ. ಎಸ್. ಶಾಂತಾ ಬಾಯಿ**

ಪ್ರಧಾನ ಕಾರ್ಯದರ್ಶಿ

ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿ, ಬೆಂಗಳೂರು

# ತಹ್‌ರೀಕ್ ಜದೀದಿನ 87ನೇ ವರ್ಷ ಆರಂಭದ ಘೋಷಣೆ

ಜಮಾಅತಿನ ಸಹೋದರರಿಗೆ ತಿಳಿದಿರುವಂತೆ ಹಝ್ರತ್‌ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್) ತಹ್‌ರೀಕ್ ಜದೀದಿನ ಅನುಗ್ರಹೀತ 87ನೇ ವರ್ಷದ ಆರಂಭ ಬಗ್ಗೆ **'ಮಸ್ಜಿದ್ ಮುಬಾರಕ್'**, ಇಸ್ಲಾಮಾಬಾದಿನಲ್ಲಿ 06–11–2020ರಂದು ನೀಡಿದ ಜುಮುಅ ಖುತ್‌ಬದಲ್ಲಿ ಘೋಷಿಸಿದರು.

ಸಹೋದರರೇ, ಖಲೀಫರಿಂದ ಜಾರಿಯಾದ ಎಲ್ಲ ಐಚ್ಛಿಕ ಯೋಜನೆಗಳಲ್ಲಿ ತಹ್‌ರೀಕ್ ಜದೀದಿಗೆ ಒಂದು ವಿಶೇಷತೆಯಿದೆ. ಅದೇನೆಂದರೆ, ಹಝ್ರತ್ ಖಲೀಫತುಲ್ ಮಸೀಹ್ ಸಾನೀ ತಹ್‌ರೀಕ್ ಜದೀದನ್ನು **"ಜಿಹಾದ್ ಕಬೀರ್"** (ಶ್ರೇಷ್ಠ ಜಿಹಾದ್) ಎಂದೂ ಅದರಲ್ಲಿ ಭಾಗವಹಿಸುವವರಿಗೆ ಸಿಗುವ ಪ್ರತಿಫಲ ಬದರೀ ಸಹಾಬರಿಗೆ ಲಭಿಸುವ ಪ್ರತಿಫಲಕ್ಕೆ ಸಮಾನವೆಂದೂ ಹೇಳಿರುವರು. ಮಾತ್ರವಲ್ಲ, ಇತರ ಎಲ್ಲ ಐಚ್ಛಿಕ ಚಂದಾಗಳಿಗೆ ಹೋಲಿಸಿ, ಅದಕ್ಕೆ ಕಡ್ಡಾಯ ಚಂದಾದ ಸ್ಥಾನವನ್ನು ನೀಡಿರುವರು. ಇದನ್ನು ಪ್ರಸ್ತಾಪಿಸಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

**"ನಾನು ಈ ಚಂದಾವನ್ನು ಕಡ್ಡಾಯಗೊಳಿಸಿರುವೆನು. ಜಮಾಅತಿನ ಎಲ್ಲ ಸ್ತ್ರೀ – ಪುರುಷರು ಇದರಲ್ಲಿ ಕಡ್ಡಾಯವಾಗಿ ಭಾಗಿಯಾಗಬೇಕು."**

(ಹಝ್ರತ್ ಮುಸ್ಲಿಹ್ ಮೌಊದರ(ರ) ನಿರ್ದೇಶನ; ಅಲ್‌ಫಝ್ಲ್ ದಿನಪತ್ರಿಕೆ – ರಬ್‌ವ, 13–07–1957)

ತಹ್‌ರೀಕ್ ಜದೀದಿನ ಪ್ರಾಮುಖ್ಯತೆಗೆ ಸಂಬಂಧಿಸಿ ಖಲೀಫರ ಹಲವು ನಿರ್ದೇಶನಗಳು ಇವೆ. ಎಲ್ಲ ಐಚ್ಛಿಕ ಚಂದಾಗಳಲ್ಲಿ ಅತ್ಯಂತ ಪ್ರಧಾನವಾದ ಚಂದಾ ತಹ್ರೀಕ್ ಜದೀದ್ ಆಗಿದೆ. ಇದರ ಬಗ್ಗೆ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ಹೇಳುತ್ತಾರೆ:

**"ಚಂದಾ ಆಮ್‌ನ ನಂತರ, ಜಮಾಅತಿಗಾಗಿ ಜಾರಿ ಮಾಡಲಾದ ಚಂದಾದ ಯೋಜನೆಗಳಲ್ಲಿ ಅತ್ಯಂತ ಮುಖ್ಯವಾದ ಯೋಜನೆ ತಹ್ರೀಕ್ ಜದೀದ್ ಆಗಿದೆ. ಏಕೆಂದರೆ, ಇದರ ಸಂಬಂಧ ಇಸ್ಲಾಮನ್ನು ಲೋಕದಲ್ಲೆಲ್ಲ ಹರಡುವುದರೊಂದಿಗಿದೆ."**

[5–11–1993ರ ಖುತ್‌ಬ ಜುಮಾ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್)]

ಈಗಿನ ಕಠಿಣವಾದ ಪರಿಸ್ಥಿತಿಯಲ್ಲಿ ಲೋಕದ ಆರ್ಥಿಕ ಸ್ಥಿತಿಗೆ ತೀವ್ರ ತರದ ನಷ್ಟವುಂಟಾಗಿದೆ. ಈ ಸ್ಥಿತಿಯಲ್ಲಿ, ಇದ್ದುದ್ದರಲ್ಲಿ ತೃಪ್ತಿಪಡುತ್ತಾ, ಜಮಾಅತಿನ ಪ್ರತಿಯೊಬ್ಬರು ಚಂದಾಗಳನ್ನು ನೀಡಬೇಕು. ಇದರ ಕುರಿತು 28–11–1952ರ ತನ್ನೊಂದು ಖುತ್‌ಬ ಜುಮಾದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

**"ನಾವು ತಹ್‌ರೀಕ್ ಜದೀದಿನ ಆರಂಭದೊಂದಿಗೆ, ಇದ್ದುದ್ದರಲ್ಲಿ ತೃಪ್ತಿಹೊಂದುವುದರ ಅಭ್ಯಾಸವನ್ನು ಶುರುಮಾಡಿಸಿದೆವು. ಮನುಷ್ಯನ ಮೇಲೆ ಕ್ಷಾಮದ ಸಮಯವೂ ಬರುತ್ತದೆ. ಅಂತಹ ಸ್ಥಿತಿ ಬಂದರೆ, ಅವನು ಇಸ್ಲಾಮಿನ ಪ್ರಚಾರ ಕಾರ್ಯದಲ್ಲಿ ಮಡಿವಂತಿಕೆ ತೋರಿಸಬಾರದು. ಕೆಲಸ ನಿಂತು ಹೋಗದಿರಲು ಅವನು ನಿಯತವಾಗಿ ಚಂದಾ ನೀಡುತ್ತಿರಬೇಕು. ಅವನಿಗೆ ಸರಳ ಜೀವಿತದ ಅಭ್ಯಾಸಯುಂಟಾದರೆ, ಖಂಡಿತವಾಗಿಯೂ ಖರ್ಚು ಕಡಿಮೆಯಾಗುವುದು. ಖರ್ಚು ಕಡಿಮೆಯಾದರೆ, ಕ್ಷಾಮದ ಪರಿಸ್ಥಿತಿಯಲ್ಲೂ ಚಂದಾ ಪಾವತಿಸಲು ಸಾಧ್ಯವಾಗುವುದು.ಆದರೆ ಯಾವನು ಷೋಕಿನ ಜೀವಿತ ಮತ್ತು ಆಡಂಬರದ ಆಹಾರದ ಅಭ್ಯಾಸವನ್ನು ಮಾಡಿರುತ್ತಾನೋ, ಅವನು ಚಂದಾ ನೀಡುವುದರಲ್ಲಿ ಆಲಸಿಗನಾಗಿರುತ್ತಾನೆ. ನಿಸ್ಸಂಶಯವಾಗಿಯೂ ಸತ್ಯವಿಶ್ವಾಸಿ, ಎಲ್ಲ ಅವಸ್ಥೆಯಲ್ಲೂ ಧನತ್ಯಾಗ ಮಾಡುವನು. ಆದರೆ ದುರ್ಬಲ ವಿಶ್ವಾಸಿಯೂ ಸೌಕರ್ಯದ ದಿನಗಳಲ್ಲಿ ಚಂದಾ ನೀಡುವನು; ಕಷ್ಟದ ಸ್ಥಿತಿ ಬಂದರೆ, ಚಂದಾ ನೀಡುವುದರಲ್ಲಿ ಸುಸ್ತಾಗುವನು. ಹೀಗೆ ತನಗೆ ಸಿಗುವ ಪ್ರತಿಫಲವನ್ನು ಕಡಿಮೆಗೊಳಿಸುವನು."**

ಸನ್ಮಾನ್ಯರೇ, ತಹ್‌ರೀಕ್ ಜದೀದಿನ ಧನತ್ಯಾಗದ ಜಿಹಾದಿನಲ್ಲಿ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಶಕ್ತಿಯಾನುಸಾರ ತನ್ನ ತ್ಯಾಗದ ಮಟ್ಟವನ್ನು ಸ್ವತಃ ನಿರ್ಣಯಿಸುವ ಅಧಿಕಾರವಿದೆ. ಆದರೂ ಈ ತೀರ್ಮಾನವನ್ನು ಕೈಗೊಳ್ಳುವ ಸಮಯದಲ್ಲಿ ಈ ಅನುಗ್ರಹೀತ ದೈವಿಕ ಯೋಜನೆಯ ಅಸಾಧಾರಣವಾದ ಶ್ರೇಷ್ಠತೆ ಮತ್ತು ಪ್ರಾಮುಖ್ಯತೆ ಹಾಗೂ ಅದರಿಂದ ಮಾಡಲಾಗುವ ಅಂತರಾಷ್ಟ್ರೀಯ ಕೆಲಸಗಳನ್ನೂ ಈ ಬಗ್ಗೆ ಖಲೀಫರ ನಿರ್ದೇಶನಗಳನ್ನೂ ದೃಷ್ಟಿಯಲ್ಲಿ ಇರಿಸುವುದು ಅತಿಮುಖ್ಯ. ಈ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

**ಯಾವನಾದರೂ ತನ್ನ ಒಂದು ತಿಂಗಳ ಆದಾಯದ ಅರ್ಧವನ್ನು ಚಂದಾವಾಗಿ ನೀಡುವನಾದರೆ, ಉದಾಹರಣೆಗೆ ಮಾಸಿಕ ವರಮಾನ ನೂರು ರೂಪಾಯಿ ಎಂದಾದರೆ, ಐವತ್ತು ರೂಪಾಯಿ ಕೊಡುವುದಾಗಿ ವಾಗ್ದಾನ ಬರೆಸುವನಾದರೆ, ಅವನ ಬಗ್ಗೆ ಅವನು ಉತ್ತಮ ತ್ಯಾಗವನ್ನು ಮಾಡಿದ್ದಾನೆಂದು ಭಾವಿಸಲಾಗುವುದು. ಅದೇ ರೀತಿಯಲ್ಲಿ ಯಾವನಾದರೂ ಒಂದು ತಿಂಗಳ ಆದಾಯವನ್ನು ಪೂರ್ಣವಾಗಿ ನೀಡುವನಾದರೆ, ಎಂದರೆ, ತನ್ನ ವರಮಾನವಾದ ನೂರು ರೂಪಾಯಿಯನ್ನು ಪೂರ್ಣವಾಗಿ ನೀಡುವನಾದರೆ, ಅವನು ಕಷ್ಟಪಟ್ಟು ತ್ಯಾಗಮಾಡಿರುವನು ಎಂದು ತಿಳಿಯಲಾಗುವುದು.** (ಖುತ್‌ಬ ಜುಮುಅ 4-12-1953)

ಒಟ್ಟಿನಲ್ಲಿ ಇಂದು ಲೋಕದ ಎಲ್ಲ ಜಮಾಅತುಗಳು ತಹ್‌ರೀಕ್ ಜದೀದಿನ ಧನತ್ಯಾಗದಲ್ಲಿ ಮುನ್ನುಗ್ಗುತ್ತಿವೆ. ಹಝ್ರತ್ ಖ಼ಲೀಫತುಲ್ ಮಸೀಹರು 6-11-2020ರ ತನ್ನ ಜುಮುಅ ಖುತ್‌ಬದಲ್ಲಿ ಲೋಕದ ದೇಶಗಳ ಜಾಗತಿಕ ತುಲನೆಯನ್ನು ಮುಂದಿರಿಸಿದ್ದರು. ಇದರಲ್ಲಿ ಭಾರತಕ್ಕೆ ಆರನೇ ಸ್ಥಾನವಿದೆ. ಅಲ್‌ಹಮ್ದುಲಿಲ್ಲಾಹ್. ಹಝ್ರತ್ ಖ಼ಲೀಫತುಲ್ ಮಸೀಹರು ನವವರ್ಷದ ವಾಗ್ದಾನಗಳನ್ನು ವಸೂಲು ಮಾಡಲು ಅಹ್ಮದಿಯಾ ಜಮಾಅತ್ ಭಾರತಕ್ಕೆ ಹೊಸ ಟಾರ್ಗೆಟ್ ನೀಡಿರುವರು. ಅದನ್ನು ಪೂರ್ತಿ ಮಾಡಲು ವಾಗ್ದಾನಗಳಲ್ಲಿ ಕನಿಷ್ಠ ಶೇಕಡಾ ಹತ್ತರಷ್ಟು ವೃದ್ಧಿಮಾಡುವ ಆವಶ್ಯಕತೆ ಇದೆ. ಅಲ್ಲಾಹನು ತನ್ನ ಅನುಗ್ರಹದಿಂದ ನಿಮಗೆ ಸಂಪತ್ತನ್ನೂ ನಿಷ್ಠೆ ಮತ್ತು ತ್ಯಾಗ ಮನೋಭಾವವನ್ನೂ ನೀಡಿರುವನು. ಆದ್ದರಿಂದ ಅನುಗ್ರಹ ಪ್ರಕಟಣೆ ಎಂಬ ರೀತಿಯಲ್ಲಿ ತಹ್‌ರೀಕ್ ಜದೀದಿನ ಶ್ರೇಷ್ಠ ಜಿಹಾದಿನ ತಮ್ಮ ವಾರ್ಷಿಕ ವಾಗ್ದಾನದಲ್ಲಿ ಕನಿಷ್ಠ ಶೇಕಡಾ ಹತ್ತರಷ್ಟು ವರ್ಧನೆ ಮಾಡಲು ನಿಮ್ಮೊಂದಿಗೆ ವಿನಂತಿಸುತ್ತೇವೆ. ನಿಮ್ಮ ಈ ತ್ಯಾಗ ಹಝ್ರತ್ ಮುಸ್ಲಿಹ್ ಮೌಊದ್‌ರ(ರ) ನಿರ್ದೇಶನ ಪ್ರಕಾರ ನಿಶ್ಚಯವಾಗಿಯೂ ನಿಮ್ಮ ಮತ್ತು ನಿಮ್ಮ ಮಕ್ಕಳ ಪರವಾಗಿ ಸದ್‌ಖಜಾರಿಯದ (ಸದಾಕಾಲ ಜಾರಿಯಲ್ಲಿರುವ ದಾನದ) ಪ್ರತಿಫಲವನ್ನು ನೀಡುವಂಥದ್ದು ಆಗುವುದು. ಅಲ್ಲಾಹನು ತನ್ನ ಅನುಗ್ರಹದಿಂದ ನಿಮಗೆ ಪ್ರಿಯ ಖ಼ಲೀಫರ ಉತ್ತಮ ಪ್ರತೀಕ್ಷೆಗಳನ್ನು ಈಡೇರಿಸಲು ಸೌಭಾಗ್ಯ ನೀಡಲಿ. ಅದರ ಫಲವಾಗಿ ನಿಮ್ಮನ್ನು ಅಗಣಿತ ಅನುಗ್ರಹಗಳ ಮತ್ತು ಕಾರುಣ್ಯಗಳ ವಾರಸುದಾರರನ್ನಾಗಿ ಮಾಡಲಿ – ಆಮೀನ್.

ವಸ್ಸಲಾಮ್

**ವಕೀಲುಲ್ ಮಾಲ್ ತಹ್‌ರೀಕ್ ಜದೀದ್ ಖಾದಿಯಾನ್**

ಕವನ

## ಶಾಶ್ವತವಲ್ಲ ನಿನಗೆ ಈ ಲೋಕ

◆ **ಕೆ. ಎಂ. ಉಮರ್**

ಶಾಶ್ವತವಲ್ಲ ನಶ್ವರವಾಗಿದೆ ಮಾನವ ನಿನಗೆ ಈ ಲೋಕ
ಸಾಧಿಸು ಒಳಿತನು ಮರಳುವ ಮೊದಲು ಶಾಶ್ವತ ನಿನಗೆ ಪರಲೋಕ.

ಕೇವಲ ಕೆಲವೇ ಕಾಲವು ಮಾತ್ರ ಜೀವನವಿರುವುದು ನಮಗಿಲ್ಲಿ
ಕೇಳಲು ತಡೆಯಲು ಯಾರೂ ಇಲ್ಲ ಮರಣದ ವೇಳೆ ನಮಗಿಲ್ಲಿ.

ಧನಿಕನಾದರೂ ಭಿಕ್ಷುಕನಾದರೂ ಯಮನಿಗೆ ಒಂದೇ ಜನರೆಲ್ಲ
ಧರೆಯಲಿ ಬಾಳುವ ಕಾಲವು ಮುಗಿದರೆ ಹೋಗಲೇಬೇಕು ನಾವೆಲ್ಲ.

ಮಾನವ ಗಳಿಸಿದ ಕೋಟಿ ಹಣದಲ್ಲಿ ಬಿಡಿಕಾಸೂ ನಮ್ಮ ಜೊತೆ ಇಲ್ಲ
ಮಾಡಿದ ಪಾಪ ಪುಣ್ಯಗಳಲ್ಲದೆ ಕೊಂಡೊಯ್ಯಲು ನಮಗೇನಿಲ್ಲ.

ಸುಂದರ ಭವನದಿ ಮಡದಿಯು ಮಕ್ಕಳು ಸುತ್ತಲೂ ನಿಂತು ನೋಡುತಿರೆ
ಶ್ವಾಸವು ನಿಂತ ಕ್ಷಣದಲಿ ನಾಮವು ಮಯ್ಯತ್ತೆಂದು ನೀಡುವರು.

ಕೆಲವೇ ತಾಸುಗಳೊಳಗೆ ಆರಡಿ ಮಣ್ಣಲಿ ಮುಚ್ಚಿ ಮರಳುವರು
ಕೇಳಲು ನೋಡಲು ಯಾರೂ ಇಲ್ಲದ ಮಣ್ಣಿನ ಗುಹೆ ಅದು ಶಾಶ್ವತವು.

ಯೋಚಿಸಿ ಭುವಿಯಲಿ ಬಾಳುವ ಕಾಲದಿ ಗಳಿಸಿರಿ ದೇವನ ಪ್ರೀತಿಯನು
ತಲುಪಿಸಿ ಜನರಿಗೆ ಮುಹಮ್ಮದ್ ನಬಿಯ ಪಾವನ ದೀನಿಸ್ಲಾಮನ್ನು.

ನಬಿ ನಾಯಕರ ವಾಗ್ದತ್ತ ಮಹ್‌ದಿಯ ಸಂದೇಶ ತಲುಪಿಸಿ ಜನರೆಡೆಗೆ
ನಡೆಯಿರಿ ನಾಯಕ ಖಲೀಫರಾಜ್ಞೆಯ ಪಾಲಿಸಿ ಸಾಗಿರಿ ಮುಂದಕ್ಕೆ.

ಮಹಶರ ದಿನದಲಿ ದೇವನ ಸನ್ನಿಧಿ ನೀಡಲು ನಮ್ಮಲ್ಲೇನಿಹುದು
ಮರೆಯದೆ ದೇವನ ಪಾದಕೆ ಎರಗುತ ಕ್ಷಮೆಯನ್ನು ಬೇಡುವ ದಾರಿಹುದು.

ವಿರೋಧದ ಅಲೆಗಳು ಗಗನಕ್ಕೇರಿವೆ ಲೆಕ್ಕಿಸದಿರಿ ಆ ಭಾಗವನು
ವೀರ ಮರಣವು ಶಹೀದರ ಸಾಲಿಗೆ ಸೇರುವುದೆಂಬ ಸತ್ಯವನು.

ಮರೆಯದೆ ತಲುಪಿಸಿ ದೀನಿಸ್ಲಾಮಿನ ಸುಂದರ ರೂಪವ ಜನರೆಡೆಗೆ
ಮನ್ನಿಸಲೋಸುಗ ನಮ್ಮೆಯ ಪಾಪವ ಸಾಗುವ ದೇವನ ಸನ್ನಿಧಿಗೆ.

**LOVE FOR ALL - HATRED FOR NONE**

**ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ**

# ಹಝ್ರತ್ ಖಲೀಫರ ಹೊಸ ವರ್ಷದ ಸಂದೇಶ

ಇಂದು ಹೊಸವರ್ಷದ ಮೊದಲ ದಿನ ಮತ್ತು ಮೊದಲ ಜುಮುಅ ಆಗಿದೆ. ಈ ವರ್ಷವು ಜಮಾಅತಿಗೆ ಮತ್ತು ಲೋಕದ ಜನರಿಗೆ ಅನುಗ್ರಹೀತವಾಗಲಿ. ನಾವು ಸಹ ನಮ್ಮ ಕರ್ತವ್ಯಗಳನ್ನು ನೆರವೇರಿಸುತ್ತಾ ಮೊದಲಿಗಿಂತ ಹೆಚ್ಚಾಗಿ ಅಲ್ಲಾಹನ ಕಡೆಗೆ ಬಾಗುವವರೂ ತಮ್ಮ ಆರಾಧನೆಯ ಮಟ್ಟವನ್ನು ವರ್ಧಿಸುವವರೂ ಆಗಲಿ. ಲೋಕದ ಜನರು ಸಹ ತಮ್ಮ ಹುಟ್ಟಿನ ಉದ್ದೇಶವನ್ನು ಅರಿತುಕೊಂಡು ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸುವವರಾಗಲಿ. ಪರಸ್ಪರ ಹಕ್ಕುಗಳನ್ನು ಅಪಹರಿಸುವುದಕ್ಕೆ ಬದಲಿಗೆ ಅಲ್ಲಾಹನ ಆದೇಶಗಳ ಪ್ರಕಾರ ನಡೆಯುತ್ತಾ ಪರಸ್ಪರ ಹಕ್ಕುಗಳನ್ನು ನೆರವೇರಿಸುವವರಾಗಲಿ. ಇಲ್ಲದಿದ್ದರೆ, ಅಲ್ಲಾಹನು ತನ್ನದೇ ರೀತಿಯಲ್ಲಿ ಲೋಕದ ಜನರನ್ನು ಅವರ ಕರ್ತವ್ಯಗಳ ಕಡೆಗೆ ತಿರುಗುವಂತೆ ಮಾಡುವನು. ನಾವು ಮತ್ತು ಲೋಕದ ಎಲ್ಲರೂ ಈ ಮುಖ್ಯವಾದ ಅಂಶವನ್ನು ಅರಿತುಕೊಂಡು ತಮ್ಮ ಇಹಪರ ಜೀವಿತವನ್ನು ಸುಂದರಗೊಳಿಸಿದರೆ ಎಷ್ಟು ಚೆನ್ನಾಗಿತ್ತು! ಕಳೆದ ಒಂದು ವರ್ಷದಿಂದ ನಾವು ಅತ್ಯಂತ ಅಪಾಯಕಾರಿ ಸಾಂಕ್ರಾಮಿಕ ರೋಗವನ್ನು ಎದುರಿಸುತ್ತಿದ್ದೇವೆ. ಲೋಕದ ಯಾವುದೇ ದೇಶ ಈ ಮಹಾಮಾರಿಯಿಂದ ಮುಕ್ತವಲ್ಲ. ಕೆಲವು ದೇಶಗಳಲ್ಲಿ ಕಡಿಮೆ ಮತ್ತು ಕೆಲವು ದೇಶಗಳಲ್ಲಿ ಹೆಚ್ಚಾಗಿ ಹರಡಿದೆ. ತಮ್ಮ ಹಕ್ಕುಗಳ ಮತ್ತು ಕರ್ತವ್ಯಗಳ ಕಡೆಗೆ ಶ್ರದ್ಧೆವಹಿಸುವಂತಾಗಲು ಈ ಮಹಾಮಾರಿ ಅಲ್ಲಾಹನ ಕಡೆಯಿಂದ ಆಗಿರಬಹುದೇ ಎಂಬುದರ ಬಗ್ಗೆ ಗಮನಹರಿಸಲು ಲೋಕದ ಹೆಚ್ಚಿನವರು ಬಯಸುತ್ತಿಲ್ಲ. ನಮ್ಮನ್ನು ಎಚ್ಚರಗೊಳಿಸಲು, ನಮ್ಮೊಡನೆ ಹೇಳಲು ಮತ್ತು ನಮ್ಮ ಗಮನಹರಿಸಲಿಕ್ಕಾಗಿ ಆಗಿರಬಹುದೇ ಎಂಬ ರೀತಿಯಲ್ಲಿ ಯೋಚಿಸಲು ಬಯಸುವುದಿಲ್ಲ. ಇದರ ಕಡೆಗೆ ಯಾರ ಆಲೋಚನೆಯೂ ಇಲ್ಲ. ಇದರ ಕಡೆಗೆ ಗಮನಸೆಳೆಯಲಿಕ್ಕಾಗಿ ನಾನು ಕೆಲವು ತಿಂಗಳ ಹಿಂದೆ ಹಲವಾರು ದೇಶಗಳ ಪ್ರಧಾನಿಗಳಿಗೆ ಪತ್ರಗಳನ್ನು ಬರೆದಿದ್ದೆ ಮತ್ತು ಕೋವಿಡ್‌ಗೆ ಸಂಬಂಧಿಸಿ ಮನವರಿಕೆ ಮಾಡಿಸಲು ಪ್ರಯತ್ನಿಸಿದ್ದೆ. ತಮ್ಮ ಹಕ್ಕುಗಳನ್ನೂ ಕರ್ತವ್ಯಗಳನ್ನೂ ಮರೆತುಬಿಟ್ಟು ಅವುಗಳನ್ನು ಈಡೇರಿಸದೇ ಇರುವ ಕಾರಣದಿಂದ ಹಾಗೂ ದೌರ್ಜನ್ಯಗಳನ್ನು ಮಾಡುವುದರಿಂದ ಈ ಆಪತ್ತುಗಳು ಅಲ್ಲಾಹನ ಕಡೆಯಿಂದ ಬರುತ್ತವೆ. ಆದ್ದರಿಂದ ಗಮನವಹಿಸಿರಿ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಲ್ಲೇಖಗಳ ಮೂಲಕ ನಾನು ಗಮನ ಸೆಳೆದಿದ್ದೆ. ಕೆಲವು ಪ್ರಧಾನಿಗಳು ಪತ್ರಗಳಿಗೆ ಉತ್ತರ ಸಹ ಕೊಟ್ಟಿದ್ದರು. ಆದರೆ ಅವರದ್ದು ಭೌತಿಕವಾದ ರೀತಿಯ ಉತ್ತರಗಳಾಗಿದ್ದುವು. ನಾವು ಸಹ ಅದನ್ನೇ ಬಯಸುತ್ತಿದ್ದೇವೆ ಎಂಬ ರೀತಿಯಲ್ಲಿ ಲೌಕಿಕ ದೃಷ್ಟಿಯ ಮಾತುಗಳಾಗಿದ್ದುವು. ಧಾರ್ಮಿಕವಾದ ಸಂಗತಿಗಳೇನೂ ಇರಲಿಲ್ಲ. ಆ ಪತ್ರದಲ್ಲಿ ನಾನು ದೇವನ ಕುರಿತು ವಿಶದವಾಗಿ ವಿವರಿಸಿದ್ದ ಭಾಗದ ಕುರಿತು ಹೀಗೆ ಆಗಬೇಕು ಎಂಬ ರೀತಿಯಲ್ಲಿ ಯಾವುದೇ ಪ್ರತಿಕ್ರಿಯೆ ಅವರ ಕಡೆಯಿಂದ ಉಂಟಾಗಲಿಲ್ಲ. ಈ ಜನರು ತಮ್ಮ ಸ್ಥಿತಿಗತಿಗಳನ್ನು ಬದಲಿಸಲು ಯಾವುದೇ ಹೆಜ್ಜೆಯನ್ನು ಹಾಕಲು ಬಯಸುವುದಿಲ್ಲವೆಂದು ಮಾತ್ರವಲ್ಲ, ಈ ಮಹಾಮಾರಿಯ ನಂತರದ ಅಪಾಯಕಾರಿ ದುಷ್ಪರಿಣಾಮಗಳ ಕುರಿತು ಗೊತ್ತಿದ್ದೂ ಸಮುದಾಯದ ಹಿತವನ್ನು ಬಯಸುತ್ತಾ ಮೂಲಭೂತ ಉದ್ದೇಶದ ಕಡೆಗೆ ಜನಸಾಮಾನ್ಯರ ಗಮನಸೆಳೆಯಲು ಕೂಡ ಇಚ್ಛಿಸುವುದಿಲ್ಲ. ಲೋಕದ ಪ್ರತಿಯೊಬ್ಬ ಲೀಡರಿಗೆ, ಪ್ರತಿಯೊಬ್ಬ ಬುದ್ಧಿವಂತನಿಗೆ, ಪ್ರತಿಯೊಬ್ಬ ವಿಶ್ಲೇಷಕನಿಗೆ ಇದರ ಬಗ್ಗೆ ಗೊತ್ತಿದ್ದೂ ಯಥಾರ್ಥ ಪರಿಹಾರದ ಕಡೆಗೆ ಗಮನವಿಲ್ಲ. ಕೇವಲ ಲೌಕಿಕವಾದ ಪ್ರಯತ್ನಗಳ ಕಡೆಗೆ ಶ್ರದ್ಧೆವಹಿಸುತ್ತಾರೆ. ಈ ರೋಗದಿಂದ ಆರ್ಥಿಕ ಮತ್ತು ಆರೋಗ್ಯದ ದೃಷ್ಟಿಯಿಂದ ಪ್ರತಿಯೊಬ್ಬ ವ್ಯಕ್ತಿ ದುರ್ಬಲಗೊಳ್ಳುತ್ತಿದ್ದಾನೆ ಎಂಬುದಲ್ಲದೆ, ದೊಡ್ಡ ದೊಡ್ಡ ಶ್ರೀಮಂತ ರಾಷ್ಟ್ರಗಳ ಆರ್ಥಿಕತೆಯ ಸೊಂಟಗಳು ಮುರಿಯುತ್ತಿವೆ. ಇಂತಹ ಪರಿಸ್ಥಿತಿ ಬರುವಾಗ, ಆರ್ಥಿಕ ಸ್ಥಿತಿ ಕೆಟ್ಟುಹೋಗುವಾಗ ಲೌಕಿಕರ ಬಳಿ ಇದಕ್ಕೆ ಇರುವ ಒಂದೇ ಒಂದು ಪರಿಹಾರವೇನೆಂದರೆ, ಇತರ ಸಣ್ಣ ದೇಶಗಳ ಸಂಪತ್ತುಗಳನ್ನು ವಶಪಡಿಸಿಕೊಳ್ಳುತ್ತಾರೆ. ಅವರನ್ನು ಹೇಗಾದರೂ ತಮ್ಮ ಬಲೆಯಲ್ಲಿ ಸಿಲುಕಿಸಿಕೊಂಡು ತಮ್ಮ ಜಾಲದಲ್ಲಿ ಹಾಕಿಕೊಂಡು ಸುಳ್ಳು ನೆಪಗಳನ್ನು ಮಾಡಿಕೊಂಡು ಅವರ ಸಂಪತ್ತುಗಳನ್ನು ವಶಪಡಿಸಿಕೊಳ್ಳುತ್ತಾರೆ. ಅದಕ್ಕಾಗಿ ಬ್ಲೋಕ್(**Bloc**) ಮಾಡುವರು ಮತ್ತು ಈಗಲೇ ಮಾಡುತ್ತಿದ್ದಾರೆ. ಶೀತಲ ಸಮರ ಪುನಃ ಶುರುವಾಗುವುದು. ಒಂದು ರೀತಿಯಲ್ಲಿ ಕೋಲ್ಡ್ ವಾರ್ ಶುರುವಾಗಿದೆ ಎಂದು ಹೇಳಲಾಗುತ್ತಿದೆ. ಅಸ್ತ್ರಗಳ ಮೂಲಕ ಮಾಡಲಾಗುವ ಯುದ್ಧ ಸಹ ನಡೆಯುವ ದಿನಗಳು ದೂರವಲ್ಲ. ಅದು ಅತ್ಯಂತ ಭಯಾನಕ ಯುದ್ಧವಾಗಿರುವುದು. ಹೀಗೆ ಈ ಜನರು ಮತ್ತೊಂದು ಆಳವಾದ ಹೊಂಡದಲ್ಲಿ ಬೀಳುವರು. ಬಡರಾಷ್ಟ್ರಗಳು ಮೊದಲೇ ಜಜ್ಜಲ್ಪಟ್ಟಿವೆ. ಶ್ರೀಮಂತ ರಾಷ್ಟ್ರಗಳು ಸಹ ಮಸಯಲ್ಪಡುವುವು. ಭಯಾನಕವಾದ ರೀತಿಯಲ್ಲಿ ಕಿವುಚಲ್ಪಡುವುವು. ಆದ್ದರಿಂದ ಲೋಕವು ಈ ಸ್ಥಿತಿಗೆ ತಲುಪುವುದಕ್ಕೆ ಮುಂಚಿತವಾಗಿ ನಾವು ನಮ್ಮ ಕರ್ತವ್ಯಗಳನ್ನು ಈಡೇರಿಸುತ್ತಾ ಲೋಕವನ್ನು ಎಚ್ಚರಗೊಳಿಸಬೇಕು.

**ಒಟ್ಟಿನಲ್ಲಿ, ಜನರಿಗೆ ಮತ್ತು ಲೋಕಕ್ಕೆ ಮನವರಿಕೆ ಆಗುವ ರೀತಿಯಲ್ಲಿ ನಾವು ನಮ್ಮ ಕರ್ತವ್ಯಗಳನ್ನು ಈಡೇರಿಸುವಾಗಲೇ ಈ ವರ್ಷ ಅನುಗ್ರಹೀತವಾಗುವುದು. ಇದನ್ನೆಲ್ಲ ಮಾಡುವಂತಾಗಲು ನಾವು ನಮ್ಮ ಸ್ಥಿತಿಗಳನ್ನು ವಿಶ್ಲೇಷಿಸಬೇಕೆಂಬುದು ಸ್ಪಷ್ಟ. ನಾವು ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸುವುದರೊಂದಿಗೆ ಅವನ ದಾಸರ ಹಕ್ಕುಗಳನ್ನು ಸಹ ಅಲ್ಲಾಹನ ಸಲುವಾಗಿ ಈಡೇರಿಸುವವರಾಗಿದ್ದೇವೆಯೇ? ಕಾಲಘಟ್ಟದ ಇಮಾಂ ಮತ್ತು ವಾಗ್ದತ್ತ ಮಹ್‌ದೀ ಮತ್ತು ಮಸೀಹರನ್ನು ನಂಬಿಕೊಂಡಿದ್ದೇವೆ ಎಂದು ಹೇಳಿಕೊಳ್ಳುವ ನಮ್ಮ ಸ್ಥಿತಿ ಹಾಗೆ ಆಗಿದೆಯೇ? ಅಥವಾ ಈಗಲೂ ನಾವು ನಮ್ಮ ಸುಧಾರಣೆ ಮಾಡಬೇಕಾದ ಮತ್ತು ಪರಸ್ಪರ ಪ್ರೀತಿ–ಪ್ರೇಮದ ಭಾವನೆಯನ್ನು ಅಸಾಧಾರಣವಾದ ಮಟ್ಟಕ್ಕೆ ಏರಿಸುವ ಆವಶ್ಯಕತೆ ಇದೆಯೇ? ಆದ್ದರಿಂದ ಪ್ರತಿಯೊಬ್ಬ ಅಹ್ಮದಿ ಯೋಚಿಸಬೇಕು. ಅವನಿಗೆ ಬಹಳ ಹಿರಿದಾದ ಕೆಲಸವನ್ನು ಒಪ್ಪಿಸಲಾಗಿದೆ ಎಂದು ಅರಿಯಬೇಕು. ಅದನ್ನು ಈಡೇರಿಸಲು ಮೊದಲು ತಮ್ಮೊಳಗೆ, ಎಂದರೆ ಅಹ್ಮದೀ ಸಮಾಜದಲ್ಲಿ ಪ್ರೀತಿ–ಪ್ರೇಮ ಮತ್ತು ಸಾಹೋದರ್ಯದ ವಾತಾವರಣವನ್ನು ಸೃಷ್ಟಿಸಬೇಕು. ಅನಂತರ ಲೋಕವನ್ನು ಹಝ್ರತ್ ಪೈಗಂಬರ್(ಸ) ಎತ್ತಿ ಹಿಡಿದ ಅಲ್ಲಾಹನ ಏಕದೇವ ವಿಶ್ವಾಸದ ಬಾವುಟದ ಕೆಳಗೆ ತನ್ನಿರಿ. ಆಗಲೇ ನಾವು ನಮ್ಮ ಬೈಅತಿನ ಉದ್ದೇಶವನ್ನು ಸಾಧಿಸುವವರಾಗುವೆವು. ನಾವು ನಮ್ಮ ಬೈಅತಿನ ಹಕ್ಕುಗಳನ್ನು ಈಡೇರಿಸುವವರಾಗುವೆವು. ಅಲ್ಲಾಹನ ಅನುಗ್ರಹಗಳ ವಾರಸುದಾರರಾಗುವೆವು. ಆಗಲೇ ನಾವು ಹೊಸ ವರ್ಷದ ಶುಭಾಶಯಗಳನ್ನು ಅರ್ಪಿಸಲು ಮತ್ತು ಪಡೆಯಲು ಅರ್ಹರಾಗುವೆವು. ಅಲ್ಲಾಹನು ನಮಗೆ ಅದರ ಸೌಭಾಗ್ಯ ನೀಡಲಿ. ಇದನ್ನು ಅರಿತುಕೊಂಡು, ಈ ವರ್ಷ ನಾನು ಲೋಕದಲ್ಲಿ ಒಂದು ಬದಲಾವಣೆಯನ್ನು ಉಂಟುಮಾಡಲು ನನ್ನ ಎಲ್ಲ ತರದ ಸಾಮರ್ಥ್ಯಗಳನ್ನು ಉಪಯೋಗಿಸುವೆನು ಎಂದು ಅಹ್ಮದಿಯಾದ ಪ್ರತಿಯೊಬ್ಬ ಸ್ತ್ರೀ, ಪುರುಷ, ಯುವಕ, ಸಣ್ಣವರು, ದೊಡ್ಡವರು ಪ್ರತಿಜ್ಞೆ ಮಾಡಬೇಕು. ಅಲ್ಲಾಹನು ಹಾಗೆ ಮಾಡಲು ಪ್ರತಿಯೊಬ್ಬ ಅಹ್ಮದಿಗೆ ತೌಫೀಕ್ ನೀಡಲಿ – ಆಮೀನ್.**

**(1–1–2021ರ ಜುಮುಅ ಖುತ್‌ಬದಿಂದ)**

**30ನೇ ಪುಟದಿಂದ**

ಆ ಲೇಖನಗಳಲ್ಲಿ, ಪ್ಯಾಲೆಸ್ತೀನಿನ ಯಹೂದಿಗಳ ಆಕ್ರಮಣವು ಯುನೈಟೆಡ್ ಸ್ಟೇಟ್ಸ್ ಮತ್ತು ರಶ್ಯಾ ನಡುವಿನ ಪಿತೂರಿಯ ಪರಿಣಾಮವಾಗಿದೆ ಎಂದು ಅವರು ಪ್ರತಿಪಾದಿಸಿದರು. ಈ ಎರಡು ಪ್ರಮುಖ ಶಕ್ತಿಗಳೂ ರಾಜಕೀಯವಾಗಿ ವಿರುದ್ಧ ದಿಕ್ಕಿನಲ್ಲಿ ಕಂಡರೂ, ಅವರು ಮುಸ್ಲಿಮರ ಬಗೆಗಿನ ದ್ವೇಷದಲ್ಲಿ ಒಂದಾಗಿದ್ದರು ಮತ್ತು ಮುಸ್ಲಿಮರ ಬಗ್ಗೆ ಅಥವಾ ಅರಬ್ ಜನರ ಬಗ್ಗೆ ಕಿಂಚಿತ್ತೂ ಸಹಾನುಭೂತಿ ಹೊಂದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದರು. ಮುಸ್ಲಿಮರು ಸ್ವಂತ ತಮ್ಮ ಕಾಲುಗಳ ಮೇಲೆ ನಿಂತು ಅದನ್ನು ಪ್ರತಿರೋಧಿಸುವ ಎಲ್ಲಾ ಪ್ರಯತ್ನಗಳನ್ನು ಮಾಡಬೇಕೆಂದು ಅವರು ಕರೆ ನೀಡಿದರು. ಖಲೀಫತುಲ್ ಮಸೀಹರ ಈ ಕ್ರಾಂತಿಕಾರಿ ಬರಹಗಳಿಗೆ ಸಿರಿಯಾ, ಲೆಬನಾನ್, ಜೋರ್ಡಾನ್ ಮತ್ತು ಇತರ ಅರಬ್ ದೇಶಗಳಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಸಿರಿಯನ್ ರೇಡಿಯೋ ಲೇಖನಗಳ ಸಂಕ್ಷಿಪ್ತ ಆವೃತ್ತಿಯನ್ನು ಪ್ರಸಾರ ಮಾಡುತ್ತಾ ಆ ಮುಖಾಂತರ ಅವರ ಇಂಗಿತವನ್ನು ಅರಬ್ ರಾಷ್ಟ್ರಗಳಾದ್ಯಂತ ಪ್ರಸಾರ ಮಾಡಿತು. ಅಲ್–ಯವುಮ್, ಅಲ್–ಖಬರ್, ಅಲ್–ಖಬಾಸ್, ಅಲ್–ನಸರ್, ಸೌತುಲ್ ಅಶ್‌ಹಾರ್ ಮೊದಲಾದ ಪ್ರಸಿದ್ಧ ಅರೇಬಿಕ್ ಪತ್ರಿಕೆಗಳು ಲೇಖನದ ಸಂಬಂಧಿತ ಭಾಗಗಳನ್ನು ಪ್ರಕಟಿಸಿ ಲೇಖಕರ ದೃಷ್ಟಿಕೋನವನ್ನು ಸರ್ವಾನುಮತದಿಂದ ಶ್ಲಾಘಿಸಿ ಹೊಗಳಿದವು.

ಜೂನ್ 1948ರಲ್ಲಿ ಲಾಹೋರ್‌ನಲ್ಲಿ ಹಝ್ರತ್ ಖಲೀಫತುಲ್ ಮಸೀಹ್ IIರು ಮಾಡಿದ ಒಂದು ಭಾಷಣದಲ್ಲಿ, ಮುಸ್ಲಿಮರು ಒಟ್ಟಾಗಿ ನಿಂತು ಪ್ಯಾಲೆಸ್ತೀನನ್ನು ಝಿಯೋನಿಸ್ಟ್‌ಗಳ ಹಿಡಿತದಿಂದ ವಿಮೋಚನೆಗೊಳಿಸಬೇಕೆಂದು ಕರೆ ನೀಡಿದರು. ಜೂನ್ 10, 1948ರಂದು, ಬಾಗ್ದಾದ್‌ನ 'ಶುರಾ' ಪತ್ರಿಕೆ ಈ ಭಾಷಣಕ್ಕೆ ಈ ಕೆಳಗಿನಂತೆ ಪ್ರತಿಕ್ರಿಯಿಸಿತು:

"ಬಾಗ್ದಾದ್‌ನಲ್ಲಿ ಪ್ರಕಟವಾದ ಒಂದು ಕರಪತ್ರವು ನಮಗೆ ಲಭಿಸಿದೆ. ಅದು ಇಸ್ರೇಲ್ ರಾಜ್ಯವನ್ನು ಸ್ಥಾಪಿಸಿದ ನಂತರ ಲಾಹೋರ್‌ನಲ್ಲಿ ಅಹ್ಮದಿಯಾ ಸಂಘಟನೆಯ ಮುಖಂಡ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ ಅವರು ಮಾಡಿದ ಭಾಷಣವನ್ನು ಆಧರಿಸಿದೆ. ಕರಪತ್ರದ ಶೀರ್ಷಿಕೆ 'ಅವಿಶ್ವಾಸಿಗಳು ಒಂದೇ ಸಮುದಾಯದವರಾಗಿದ್ದಾರೆ' ಎಂದಾಗಿದೆ. ಈ ಅತ್ಯಂತ ಉಪಯುಕ್ತ ಕರಪತ್ರವನ್ನು ಪ್ರಕಟಿಸಿದವರ ನೈತಿಕ ಆಕ್ರೋಶ ಮತ್ತು ಇಸ್ಲಾಮಿಕ್ ಮನೋಭಾವವನ್ನು ನಾವು ಪ್ರಶಂಸಿಸುತ್ತೇವೆ".

ಮೇಲಿನವು ಇಸ್ರೇಲ್ ರಾಜ್ಯದ ವಿರುದ್ಧ ಅಹ್ಮದಿಯಾ ಜಮಾಅತ್‌ನ ಖಲೀಫರಾದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ ಮತ್ತು ಅಹ್ಮದಿಯಾ ಜಮಾಅತಿನ ವಿನಮ್ರ ಸೇವಕ ಮುಹಮ್ಮದ್ ಝಫರುಲ್ಲಾ ಖಾನ್ ಸಾಹಿಬ್ ಅವರ ಪ್ರಯತ್ನಗಳ ಕೆಲವು ಉದಾಹರಣೆಗಳಾಗಿವೆ. ಈ ಪ್ರಯತ್ನಗಳನ್ನು ಪ್ರೋತ್ಸಾಹಿಸುವುದಂತೂ ಇರಲಿ, ಬಹುಸಂಖ್ಯಾತ ಮುಸ್ಲಿಮರು ಅಹ್ಮದಿಯರನ್ನು ಇಸ್ರೇಲ್‌ನ ಏಜೆಂಟರೆಂದು ಬ್ರಾಂಡ್ ಮಾಡಲು ಪ್ರಯತ್ನಿಸುತ್ತಿದ್ದಾರೆ! ಇದು ಎಂತಹ ನ್ಯಾಯ!! ಅವರು ಅಲ್ಲಾಹನ ಮುಂದೆ ಹೇಗೆ ಹಾಜರಾಗುವರು?!

**– ಎಂ. ರಫೀಕ್ ಮಂಜೇಶ್ವರ**

**ನಿಧನ ವಾರ್ತೆ**

## ಜ॥ ಎ.ಕ್ಯೂ. ಮುಸ್ಲಿಂ ಸಾಹಿಬ್



ಮಣ್ಣಾರ್‌ಕ್ಕಾಡ್ ಜಮಾಅತಿನ ಜ॥ ಎ.ಕ್ಯೂ. ಮುಸ್ಲಿಂ ಸಾಹಿಬ್ (78) 4–11–2020ರಂದು ನಿಧನ ಹೊಂದಿದರು. (“ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್”).

1965ರಿಂದ 1995ರ ವರೆಗಿನ ಕಾಲಘಟ್ಟದಲ್ಲಿ ಮುಸ್ಲಿಂ ಸಾಹಿಬ್ ಕಾರ್ಯನಿರತರಾಗಿದ್ದರು. ಮರ್ಹೂಮ್ ಜ॥ ಸಿದ್ದೀಖ್ ಅಮೀರಲಿ ಸಾಹಿಬ್ ಕೇರಳ ಸೆಂಟ್ರಲ್ ಕಮಿಟಿಯ ಪ್ರೆಸಿಡೆಂಟ್ ಆಗಿದ್ದ ಕಾಲದಲ್ಲಿ ಅವರು ಜನರಲ್ ಸೆಕ್ರೆಟರಿ ಆಗಿದ್ದರು. 1985ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಸಿದ್ದೀಖ್ ಅಮೀರಲಿ ಸಾಹಿಬರನ್ನು ಕೇರಳದ ಪ್ರಥಮ ಅಮೀರ್ ಆಗಿ ನೇಮಿಸಿದಾಗ ಮುಸ್ಲಿಂ ಸಾಹಿಬರೇ ಜನರಲ್ ಸೆಕ್ರೆಟರಿ ಆಗಿದ್ದರು. ಡಾ॥ ಬಿ. ಮನ್ಸೂರ್ ಅಹ್ಮದ್ ಸಾಹಿಬರ ಇಮಾರತ್ ಕಾಲದಲ್ಲಿ ಸಹ ಮುಸ್ಲಿಂ ಸಾಹಿಬರು ಆ ಸ್ಥಾನದಲ್ಲಿ ಮುಂದುವರಿದರು.

1972ರಲ್ಲಿ ಮೊಗ್ರಾಲಿನಲ್ಲಿ ಜರಗಿದ ಸಂಸ್ಥಾನ ಸಮ್ಮೇಳನ ಸಹಿತ ಕೇರಳದಲ್ಲಿ ಹಲವು ವಾರ್ಷಿಕ ಸಮ್ಮೇಳನಗಳನ್ನು ಒಳ್ಳೆಯ ರೀತಿಯಲ್ಲಿ ನಡೆಸಲು ಅವರಿಗೆ ಸಾಧ್ಯವಾಯಿತು.

ವಿದ್ಯಾರ್ಥಿಯಾಗಿದ್ದಾಗ ಕೊಲ್ಲಂ ಸರಕಾರಿ ಕಾಲೇಜಿನ ವಿದ್ಯಾರ್ಥಿ ಯೂನಿಯನ್ ಚೇರ್‌ಮನ್ ಆಗಿದ್ದರು. ಮಟ್ಟನ್ನೂರ್‌ನಲ್ಲಿ ಅಹ್ಮದಿಯರ ವಿರುದ್ಧ ನಡೆದ ಆಕ್ರಮಣವನ್ನು ಅಸೆಂಬ್ಲಿಯಲ್ಲಿ ಚರ್ಚೆ ನಡೆಸುವಂತಾಗಲು ಮುಸ್ಲಿಂ ಸಾಹಿಬರ ಪಾತ್ರವಿದೆ.

ಕೇರಳದ ವಿವಿಧ ಕಡೆಗಳಲ್ಲಿ ತಬ್ಲೀಗ್ ನಡೆಸಲು ಅವರ ನೇತೃತ್ವದಲ್ಲಿ ಸಾಧ್ಯವಾಯಿತು. ಮಾಧ್ಯಮಗಳಲ್ಲಿ, ಸಾಂಸ್ಕೃತಿ ಮತ್ತು ರಾಜಕೀಯ ರಂಗಗಳಲ್ಲಿ ಉನ್ನತ ವ್ಯಕ್ತಿಗಳೊಂದಿಗೆ ಅವರಿಗೆ ಉತ್ತಮ ಸಂಬಂಧವಿತ್ತು.

ಅವರ ಪಿತ ಖಹಾರ್ ಸಾಹಿಬ್ ಯುವತ್ವದಲ್ಲೇ ಅಹ್ಮದಿಯತ್ ಸ್ವೀಕರಿಸಿದ್ದರು. ಹಿರಿಯ ಪುತ್ರನಿಗೆ ‘ಮುಸ್ಲಿಂ’ ಎಂದು ಹೆಸರಿಟ್ಟದ್ದು ಇತರರು ಅಹ್ಮದಿಯರನ್ನು ಅಮುಸ್ಲಿಂ ಮಾಡದಿರಲಿಕ್ಕೆ ಆಗಿತ್ತು ಎಂದು ಅವರು ತಮಾಷೆಯಾಗಿ ಹೇಳುತ್ತಿದ್ದರು.

2008ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಕೇರಳ ಸಂದರ್ಶಿಸಿದಾಗ ಮುಸ್ಲಿಂ ಸಾಹಿಬರ ಪರಿಶ್ರಮದ ಫಲವಾಗಿ “ಮಾತೃಭೂಮಿ” ದೈನಿಕದ ಪ್ರಧಾನ ಸಂಪಾದಕರಾಗಿದ್ದ ಗೋಪಾಲಕೃಷ್ಣನ್ ಖುದ್ದಾಗಿ ಬಂದು ಇಂಟರ್‌ವ್ಯೂ ಮಾಡಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್‌ರನ್ನು ರಬ್ವದಲ್ಲಿ ಮತ್ತು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರನ್ನು ಲಂಡನಿನಲ್ಲಿ ಅವರು ಭೇಟಿಯಾಗಿದ್ದರು. ಹಝ್ರತ್ ಮಿಯಾನ್ ಸಾಹಿಬರೊಂದಿಗೆ ಅವರಿಗೆ ನಿಕಟ ಸಂಬಂಧವಿತ್ತು. ಅವರು “ಯುಗರಶ್ಮಿ”ಯ ಹಿತೈಷಿಯಾಗಿದ್ದರು. ಅವರು ಪತ್ನಿಯನ್ನೂ ಮೂವರು ಪುತ್ರರನ್ನೂ ಅಗಲಿದ್ದಾರೆ. ಅಲ್ಲಾಹನು ಅವರಿಗೆ ಜನ್ನತನ್ನೂ ಮಗ್ಫಿರತನ್ನೂ ಅನುಗ್ರಹಿಸಲಿ – ಆಮೀನ್.

**– ಸಿದ್ದೀಖ್ ಅಶ್ರಫಲಿ**


**Contact Details: Ahmadiyya Muslim Jama'at India**

**Head Office**

Shoba Noor-ul-Islam
Qadian, Distt. Gurdaspur, Punjab, Pin:143516


**Branch Office:**


No1 3rd Cross, Wilson Garden, Bangalore-560027


Darussalam, Near Railway Level Crossing Pandeshwar, Mangalore -575001

www.alislam.org /www.ahmadiyyamuslimjamaat.in
Feedback www.ahmadiyyamuslimjamaat.in/feedback
/islaminind /islaminind /+islaminindia /islaminindia /c/islaminindia
official blog: www.lightofislam.in

National Toll Free Number: 1800 103 2131 (9:00AM to 10:30PM)
MUSLIM TELEVISION AHMADIYYA INTERNATIONAL
ww.mta.tv
Satellite: Asia sat 7s, Degree: 105.5 East, Frequency 3760 Symbol Rate: 26000 FEC: Auto / C.Band 4 Feet Dish Antenna
EutelsatE70B,Degree:70°East,Frequency:11211,SymbolRate:5111,Polarization-HorizontalQPSK-1/2,KU Band 2 feet Dish Antenna














**NEW PUBLICATIONS**
**Contact:**
**NAZARAT NASHRO - ISHA'AT**
**Sadr Anjuman Ahmadiyya**
**Qadian – 143516 (Punjab)**
**Phone: 01872 - 500970**

Registered with the Registrar of Newspapers for India No. R.N. 27354/75
**Yugarashmi** Kannada Quarterly, **January - 2021.** Price : **Rs. 15/-**

# Ahmadiyya Muslim Community

Apps for mobile devises

Download free apps developed by Ahmadiyya Muslim Community for your iphone,ipode, and Android

**Quran**
Read the Holy Quran in easy Yassarnal Quran Font

**Conditions of Bai'at**
A pocket reference of Shara't-e-Bai'at in 7 languages



**Sermons**
Huzoor's Friday Sermons In 15 languages

**MTA**
Watch MTA Live, view Schedule and much more



**Ahmadiyya News**
Stay up to date with the Latest jama'at news

View these apps at alislam.org/apps or scan the QR code below



Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore